# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು

**ಜೂನ್ ೨ನೇ ವಾರ**

08-06-2026 TO 13-06-2026

# ತೈಲ ಉತ್ಪಾದನೆ ಹೆಚ್ಚಿಸಲು ಒಪೆಕ್ + ನಿರ್ಧಾರ

- ಉಜ್ವಲಾ ಸಿಲಿಂಡರ್ 4ಕ್ಕೆ ಕಡಿತ
- 'ಕಾವೇರಿ' ಕ್ವಾಂಟಮ್ ಚಿಪ್
- ಡಾರ್ಕ್ ಪ್ಯಾಟರ್ನ್
- ಟಿಸಿಎಸ್-ಆಂಥ್ರೋಪಿಕ್ ಪಾಲುದಾರಿಕೆ


**ವಾರದ ಪ್ರಚಲಿತ ಘಟನೆಗಳು - ಪ್ರಜಾವಾಣಿ**

**ದಿನಾಂಕ: 08ನೇ** ಜೂನ್ **– 13ನೇ** ಜೂನ್ 2026

## ❖ ಬೈರೂತ್ ಮೇಲೆ ಇಸ್ರೇಲ್ ದಾಳಿ

- ದಕ್ಷಿಣ ಬೈರೂತ್‌ನ ಉಪನಗರಗಳ ಮೇಲೆ ಇಸ್ರೇಲ್ ಭಾನುವಾರ ನಡೆಸಲಾಗಿದೆ' ಎಂದು ಬೆಂಜಮಿನ್ ನೆತನ್ಯಾಹು ತಿಳಿಸಿದ್ದಾರೆ.
- ದಕ್ಷಿಣ ಬೈರೂತ್‌ನ ಉಪನಗರಗಳ ಮೇಲೆ ಇಸ್ರೇಲ್ ಭಾನುವಾರ ವೈಮಾನಿಕ ದಾಳಿ ನಡೆಸಿದೆ.
- 'ಹಿಜ್ಬುಲ್ಲಾ ಬಂಡುಕೋರರ ಗುಂಪು ಉತ್ತರ ಇಸ್ರೇಲ್ ಕಡೆಗೆ ಈ ಹಿಂದೆ ಗುಂಡಿನ ದಾಳಿ ನಡೆಸಿದ್ದಕ್ಕೆ ಪ್ರತೀಕಾರವಾಗಿ ಈ ದಾಳಿಗಳನ್ನು ನಡೆಸಲಾಗಿದೆ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತಿಳಿಸಿದ್ದಾರೆ. ಹಿಬ್ಬುಲ್ಲಾ ಆ ದಾಳಿಗಳ ಹೊಣೆಯನ್ನು ತಕ್ಷಣಕ್ಕೆ ವಹಿಸಿಕೊಂಡಿಲ್ಲ.
- ಲೆಬನಾನ್ ಮತ್ತು ಇಸ್ರೇಲ್ ನಡುವಿನ ಮೊದಲ ಕದನ ವಿರಾಮದ ಒಪ್ಪಂದವು ಏಪ್ರಿಲ್ 17ರಂದು ಜಾರಿಗೆ ಬಂದಿತ್ತು. ಆ ಬಳಿಕವೂ ಲೆಬನಾನ್ ನಗರ ಪ್ರದೇಶಗಳ ಮೇಲೆ ಇಸ್ರೇಲ್ ಎರಡು ಬಾರಿ ದಾಳಿ ಮಾಡಿತ್ತು. ದಕ್ಷಿಣ ಲೆಬನಾನ್ ನಾದ್ಯಂತ ಪ್ರತಿದಿನವೂ ವೈಮಾನಿಕ ದಾಳಿಗಳನ್ನು ಮುಂದುವರಿಸಿದೆ. ಅಲ್ಲಿ ಹಿಬ್ಬುಲ್ಲಾ ಬಂಡುಕೋರರು ಮತ್ತು ಇಸ್ರೇಲ್ ಯೋಧರ ನಡುವೆ ಘರ್ಷಣೆಗಳೂ ನಡೆದಿವೆ.
- 'ಈ ಪ್ರದೇಶದಲ್ಲಿ ಮೂರು ಬಾರಿ ಸ್ಫೋಟಗಳು ಸಂಭವಿಸಿವೆ' ಎಂದು ಸ್ಥಳೀಯರು ತಿಳಿಸಿದ್ದಾರೆ. ಆದರೆ, ಯಾವುದನ್ನು ಗುರಿಯಾಗಿಸಿ ಈ ದಾಳಿ ನಡೆಸಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ. ಸಾವು ನೋವುಗಳ ಬಗ್ಗೆ ತಕ್ಷಣಕ್ಕೆ ವರದಿಯಾಗಿಲ್ಲ.

Dr. Rajkumar IAS/KAS Academy



# ಸಂವಿಧಾನ ಮತ್ತು ಸಮಯಸಾಧಕತನ

• ಸಂಜಯ್ ಹೆಗ್ಡೆ

## ಭಾರತ–ಬಾಂಗ್ಲಾದೇಶ ಗಡಿ

4,096.70 ಕಿ.ಮೀ. ಒಟ್ಟು ಉದ್ದ

3,232.22 ಕಿ.ಮೀ. ಮುಳ್ಳುತಂತಿಯ ಬೇಲಿ ಹಾಕಿರುವ ಗಡಿಯ ಉದ್ದ

79% ಮುಳ್ಳುತಂತಿ ಬೇಲಿ ಹಾಕಿರುವ ಗಡಿಯ ಪ್ರಮಾಣ

864.48 ಕಿ.ಮೀ. ಮುಳ್ಳುತಂತಿ ಬೇಲಿ ಅಳವಡಿಸದಿರುವ ಗಡಿಯ ಉದ್ದ

174 ಕಿ.ಮೀ. ಬೇಲಿ ಹಾಕಲು ಸಾಧ್ಯವಿಲ್ಲದ ಗಡಿ ಪ್ರದೇಶದ ಉದ್ದ

ಭಾರತದ ಐದು ರಾಜ್ಯಗಳು ಬಾಂಗ್ಲಾದೊಂದಿಗೆ ಗಡಿಯನ್ನು ಹಂಚಿಕೊಂಡಿವೆ

ಅಸ್ಸಾಂ 263 ಕಿ.ಮೀ.

ಮೇಘಾಲಯ 443 ಕಿ.ಮೀ.

ತ್ರಿಪುರಾ 856 ಕಿ.ಮೀ.

ಮಿಜೋರಾಂ 318 ಕಿ.ಮೀ.

ಪಶ್ಚಿಮ ಬಂಗಾಳ 2,216.70 ಕಿ.ಮೀ.

2,375

1,329 ನ್ಯಾಯಾಲಯಗಳಲ್ಲಿ

374 ಬಾಂಗ್ಲಾದೇಶದವರು

161

## ಬಾಂಗ್ಲಾದ ಅಕ್ರಮ ವಲಸಿಗರು

## ಅಕ್ರಮ ವಲಸೆ ಮತ್ತು ಬಿಜೆಪಿ

ಸುವೇಂದು ಅಧಿಕಾರಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

'Deccan Herald- Prajavani Relief Trust'

https://bit.ly/3xFpoz4

## ಶುಲ್ಕ ಪಾವತಿಗೆ ಸಹಾಯ

## 'ನೆರವು: ಸಾಧನೆಗೆ ಪ್ರೇರಣೆ'

## ❖ ತೈಲ ಉತ್ಪಾದನೆ ಹೆಚ್ಚಿಸಲು ಒಪೆಕ್ + ನಿರ್ಧಾರ

- ಜುಲೈನಿಂದ ಅನ್ವಯವಾಗುವಂತೆ ಕಚ್ಚಾ ತೈಲದ ಉತ್ಪಾದನೆ ಯನ್ನು ಪ್ರತಿನಿತ್ಯ 1.88 ಲಕ್ಷ ಬ್ಯಾರಲ್ ನಷ್ಟು ಹೆಚ್ಚಿಸಲು ತೈಲ ಉತ್ಪಾದಕ ದೇಶಗಳ ಒಕ್ಕೂಟ (ಒಪೆಕ್ + ) ಭಾನುವಾರ ನಿರ್ಧರಿಸಿದೆ.
- ಆದರೆ ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಹೆಚ್ಚಳವಾಗಿರುವ ಕಚ್ಚಾ ತೈಲದ ಬೆಲೆಯು ಈ ತೀರ್ಮಾನದಿಂದಾಗಿ ಕಡಿಮೆ ಆಗುವ ಸಾಧ್ಯತೆ ಇಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.
- ಹೊರ್ಮುಜ್ ಜಲಸಂಧಿಯು ಮುಚ್ಚಿರುವ ಈ ಹೊತ್ತಿನಲ್ಲಿ ಈ ಪ್ರಮಾಣದ ಉತ್ಪಾದನಾ ಹೆಚ್ಚಳವು ಸಾಕಾಗುವುದಿಲ್ಲ ಎಂದು ಇಂಧನ ತಜ್ಞ ಜಾರ್ಜ್ ಲಿಯೋನ್ ಹೇಳಿದ್ದಾರೆ.
- 'ಮಾರುಕಟ್ಟೆಯಲ್ಲಿ ಈ ಬಗೆಯ ಉತ್ಪಾದನಾ ಕೋಟಾ ಬಗೆಗಿನ ಘೋಷಣೆಗಳಿಗೆ ಕೊರತೆ ಇಲ್ಲ. ಆದರೆ ಈಗ ವಾಸ್ತವವಾಗಿ ಬ್ಯಾರಲ್‌ಗಳನ್ನು ಸಾಗಿಸುವ ಸಮಸ್ಯೆ ಇದೆ. ಹೀಗಾಗಿ, ದಿನವೊಂದಕ್ಕೆ 1.88 ಲಕ್ಷ ಬ್ಯಾರಲ್ ಉತ್ಪಾದನೆ ಹೆಚ್ಚಳವು ವಾಸ್ತವದಲ್ಲಿ ಪೂರೈಕೆ ಹೆಚ್ಚಿಸುವುದಕ್ಕಿಂತಲೂ ಉತ್ಪಾದನಾ ನೀತಿಯ ಬಗ್ಗೆ ಒಂದಿಷ್ಟು ಸೂಚನೆಗಳನ್ನು ನೀಡುವ ಕೆಲಸವನ್ನಷ್ಟೇ ಮಾಡುತ್ತದೆ' ಎಂದು ಹೇಳಿದ್ದಾರೆ.

## ❖ ವಿಶ್ವಕಪ್ ಫುಟ್‌ಬಾಲ್ ಏನೇನು ಹೊಸತು?

- ಫುಟ್‌ಬಾಲ್ ಪ್ರೇಮಿಗಳು ಬಹುಕಾತರದಿಂದ ಕಾಯುತ್ತಿರುವ 23ನೇ ಫಿಫಾ ವಿಶ್ವಕಪ್ ಟೂರ್ನಿ ಜೂನ್ 11ರಿಂದ ಜುಲೈ 19ರವರೆಗೆ ಅಮೆಲಕ-ಕೆನಡಾ-ಮೆಕ್ಸಿಕೊ ಜಂಟಿ ಅತಿಥ್ಯದಲ್ಲಿ ನಡೆಯುತ್ತಿದೆ. ಈ ಫುಟ್ ಬಾಲ್ ವಿಶ್ವಕಪ್‌ನ ಪ್ರಮುಖ ವಿಶೇಷಗಳು ಏನೇನಿವೆ?



ಜಾಗತಿಕ ಟೂರ್ನಿಗೆ ಇನ್ನು ಎರಡೇ ದಿನ

# ವಿಶ್ವಕಪ್ ಫುಟ್‌ಬಾಲ್ ಏನೇನು ಹೊಸತು?

ಜೂನ್ 11–ಜುಲೈ 19

48 ತಂಡಗಳು | 39 ದಿನಗಳು | 16 ಕ್ರೀಡಾಂಗಣ | 104 ಪಂದ್ಯಗಳು

• ನಾಗೇಶ್ ಶೆಣೈ ಪಿ.

ದಕ್ಷಿಣ ಕೆರೀಬಿಯನ್ ಸಮುದ್ರದ ದ್ವೀಪ ಕ್ಯುರಸಾವೊದ ಹೆಸರು ಕೇಳಿದವರು ವಿರಳ. ವೆನೆಜುವೆಲಾದಿಂದ 40 ಕಿ.ಮೀ. ದೂರದಲ್ಲಿರುವ ಈ ದ್ವೀಪ ಸುದ್ದಿಯಾಗಿದ್ದು ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಪಡೆದಿದ್ದರಿಂದ. ವಿಶ್ವಕಪ್‌ನಲ್ಲಿ ಹೆಚ್ಚು ರಾಷ್ಟ್ರಗಳಿಗೆ ಪ್ರಾತಿನಿಧ್ಯ ನೀಡುವ ಮತ್ತು ಆದಾಯ ಕ್ರೋಢೀಕರಿಸುವ ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್ (ಫಿಫಾ) ಕ್ರಮದಿಂದಾಗಿ 23ನೇ ವಿಶ್ವಕಪ್‌ನಲ್ಲಿ ದಾಖಲೆಯ 48 ತಂಡಗಳು ಕಣಕ್ಕಿಳಿಯಲಿವೆ.

ಈ ನಿರ್ಧಾರದಿಂದ ವಿವಿಧ ಖಂಡಗಳಿಂದ ಭಾಗವಹಿಸುವ ತಂಡಗಳ ಸಂಖ್ಯೆ ಹೆಚ್ಚಿದೆ. 2022ರ ಕತಾರ್ ವಿಶ್ವಕಪ್‌ನಲ್ಲಿ ಎಎಫ್‌ಸಿ (ಏಷ್ಯನ್ ಫುಟ್‌ಬಾಲ್ ಒಕ್ಕೂಟ) ವಲಯದ ವ್ಯಾಪ್ತಿಯ ತಂಡಗಳ ಸಂಖ್ಯೆ ಆರು ಇತ್ತು. ಅದು ಈ ವಿಶ್ವಕಪ್‌ನಲ್ಲಿ ಒಂಬತ್ತಕ್ಕೆ ಏರಿದೆ. ಆಫ್ರಿಕಾ ಫುಟ್‌ಬಾಲ್ ವಲಯದಲ್ಲಿ (ಸಿಎಎಫ್) ಈ ಹಿಂದೆ ಐದು ತಂಡಗಳು ಆಡಿದ್ದರೆ, ಈ ವಿಶ್ವಕಪ್‌ನಲ್ಲಿ 10ಕ್ಕೆ ಏರಿದೆ.

ನೆದರ್ಲೆಂಡ್ಸ್‌ನ ಭಾಗವಾಗಿದ್ದರೂ ಸ್ವಾಯತ್ತವಾಗಿರುವ ಕ್ಯುರಸಾವೊ ತಂಡವು ಅರ್ಹತೆ ಪಡೆದಿದ್ದು 'ಉತ್ತರ ಅಮೆರಿಕ, ಮಧ್ಯ ಅಮೆರಿಕ ಮತ್ತು ಕೆರೀಬಿಯನ್ ವಲಯ ಫುಟ್‌ಬಾಲ್ ಒಕ್ಕೂಟ'ದ (CONCACAF) ಮೂಲಕ. ಹೈಟಿ ಮತ್ತು ಪನಾಮಾ ಕೂಡ ಈ ಭಾಗದಿಂದ ಅರ್ಹತೆ ಪಡೆದಿವೆ. ಈ ವಲಯದಲ್ಲೇ ಬರುವ ಇನ್ನೂ ಮೂರು ದೇಶಗಳು– ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾ– 2026ರ ವಿಶ್ವಕಪ್ ಆತಿಥ್ಯವನ್ನು ಜಂಟಿಯಾಗಿ ವಹಿಸಿರುವುದರಿಂದ ಅವು ನೇರ ಪ್ರವೇಶ ಪಡೆದಿವೆ.

**ನಾಲ್ಕು ಹೊಸ ತಂಡ:** ಕ್ಯುರಸಾವೊ ಜೊತೆಗೆ ಇನ್ನೂ ಮೂರು ತಂಡಗಳು (ಕೇಪ್ ವೆರ್ಡೆ, ಜಮೈಕಾ ಮತ್ತು ಉಜ್ಬೇಕಿಸ್ತಾನ) ಪದಾರ್ಪಣೆ ಮಾಡುತ್ತಿವೆ. ಫಿಫಾದಲ್ಲಿ ಆರು ಒಕ್ಕೂಟಗಳಿದ್ದು, ಪ್ರತಿಯೊಂದು ತಂಡ ತನ್ನ ಒಕ್ಕೂಟದ ವ್ಯಾಪ್ತಿಯಲ್ಲಿರುವ ಇತರ ತಂಡಗಳ ಜೊತೆ ಆಡಿ ಅರ್ಹತೆ ಪಡೆಯುತ್ತವೆ. ಕ್ಯುರಸಾವೊ ಅರ್ಹತೆ ಪಡೆಯುವ ಹಾದಿಯಲ್ಲಿ ಬಾರ್ಬಡೋಸ್, ಅರುಬಾ, ಸೇಂಟ್ ಲೂಸಿಯಾ, ಹೈಟಿ, ಬರ್ಮುಡಾ ಮತ್ತು ಜಮೈಕಾ ತಂಡಗಳನ್ನು ಸೋಲಿಸಿದ್ದು ಚಾರಿತ್ರಿಕ ಸಾಧನೆ. ಈ ದೇಶದ ಜನಸಂಖ್ಯೆ ಕೇವಲ 1.80 ಲಕ್ಷ. ಈ ದೇಶದ ಆಟಗಾರರು ನೆದರ್ಲೆಂಡ್ಸ್‌ನಲ್ಲೇ ಹೆಚ್ಚು ಆಡಿದ್ದು, ಈಗ ತಮ್ಮ ತವರು ತಂಡವನ್ನು ಪ್ರತಿನಿಧಿಸಲಿದ್ದಾರೆ.

**ಹೆಚ್ಚಿದ ತಂಡಗಳು:** ಉರುಗ್ವೆಯಲ್ಲಿ ನಡೆದ ಮೊದಲ ವಿಶ್ವಕಪ್‌ನಲ್ಲಿ 13 ತಂಡಗಳು ಭಾಗವಹಿಸಿದ್ದವು. ನಂತರ ಈ ಸಂಖ್ಯೆಯಲ್ಲಿ ಸ್ವಲ್ಪ ವ್ಯತ್ಯಾಸಗಳಾದವು. 1954ರಿಂದ 1978ರವರೆಗೆ ತಲಾ 16 ತಂಡಗಳು ಭಾಗವಹಿಸಿದ್ದವು. 1982ರ ಸ್ಪೇನ್ ವಿಶ್ವಕಪ್‌ನಿಂದ ಆರಂಭವಾಗಿ 1994 ಅಮೆರಿಕದ ವಿಶ್ವಕಪ್‌ವರೆಗೆ 24 ತಂಡಗಳು ಜಾಗತಿಕ ಫುಟ್‌ಬಾಲ್ ಹಬ್ಬದಲ್ಲಿ ಆಡಿದವು. 1998ರ ಫ್ರಾನ್ಸ್ ವಿಶ್ವಕಪ್‌ನಲ್ಲಿ ಮೊದಲ ಬಾರಿ 32 ತಂಡಗಳು ಪಾಲ್ಗೊಂಡವು. 2022ರ ಕತಾರ್ ವಿಶ್ವಕಪ್‌ವರೆಗೆ ಈ ಪರಂಪರೆ ಮುಂದುವರಿಯಿತು. ಈಗ ಮೊದಲ ಬಾರಿ ಈ ಸಂಖ್ಯೆ 50ರ ಹತ್ತಿರ ತಲುಪಿದೆ.

ಈ ಬಾರಿ ತಂಡಗಳನ್ನು 12 ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಪಂದ್ಯಗಳ ಸಂಖ್ಯೆ 64ರಿಂದ 104ಕ್ಕೆ ಏರಿಕೆಯಾಗುತ್ತಿದೆ. ಇದರ ಹಿಂದೆ, ಜಾಹೀರಾತು, ಪ್ರಸಾರ ಹಕ್ಕು, ಪ್ರಾಯೋಜಕತ್ವದ ಮೂಲಕ ಆದಾಯ ಹೆಚ್ಚಿಸುವ ಉದ್ದೇಶವಿದೆ.

**ಗುಣಮಟ್ಟದ ಮೇಲೆ ಪರಿಣಾಮ ಸಾಧ್ಯತೆ:** ಹೆಚ್ಚು ತಂಡಗಳಿಗೆ ಸ್ಥಾನ ನೀಡುವ ಬಗ್ಗೆ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ಪ್ರತಿ ಗುಂಪಿನಲ್ಲಿರುವ ತಂಡಗಳ ಪೈಕಿ ದುರ್ಬಲವೆನಿಸುವ ತಂಡಗಳು, ಪ್ರಬಲ ತಂಡಗಳ ಎದುರು ಸೋಲದಂತೆ ರಕ್ಷಣಾತ್ಮಕ ಆಟಕ್ಕೆ ಮೊರೆಹೋಗುವ ಸಾಧ್ಯತೆ ಹೆಚ್ಚು. ಇದರಿಂದ ಪಂದ್ಯಗಳ ಗುಣಮಟ್ಟದ ಮೇಲೆ ಪರಿಣಾಮವಾಗಬಹುದು ಎಂಬುದು ಒಂದು ಆಕ್ಷೇಪ.

1998ರ ನಂತರ ಮೊದಲ ಬಾರಿ ಮಾದರಿಯಲ್ಲಿ ಬದಲಾವಣೆಯಾಗುತ್ತಿದೆ. ಈ ಬಾರಿ ಪ್ರತಿ ಗುಂಪಿನಲ್ಲಿ ನಾಲ್ಕು ತಂಡಗಳಿದ್ದು, ಮೊದಲ ಎರಡು ಸ್ಥಾನ ಪಡೆಯುವ ತಂಡಗಳ ಜೊತೆಗೆ ಉತ್ತಮ ಪ್ರದರ್ಶನ ನೀಡಿದ ಮೂರನೇ ಸ್ಥಾನದ ಎಂಟು ತಂಡಗಳು 32ರ ಸುತ್ತಿಗೆ ಅರ್ಹತೆ ಪಡೆಯಲಿವೆ.

### ಎರಡು ವಿರಾಮ

ಈ ಬಾರಿಯ ಕ್ವಾರ್ಟರ್‌ಫೈನಲ್ ಸೇರಿ ಎಲ್ಲ ನಾಕೌಟ್ ಪಂದ್ಯಗಳ ಪೂರ್ವಾರ್ಧ ಮತ್ತು ಉತ್ತರಾರ್ಧದ ಅವಧಿಯಲ್ಲಿ ತಲಾ ಮೂರು ನಿಮಿಷಗಳ ಅವಧಿಯ ಒಂದೊಂದು ಪಾನೀಯ ವಿರಾಮಗಳಿರುತ್ತವೆ. ಪಂದ್ಯ ಆರಂಭವಾಗಿ 22ನೇ ನಿಮಿಷ ಮತ್ತು 67ನೇ ನಿಮಿಷ ಈ 'ನೀರಡಿಕೆ' ವಿರಾಮ ನೀಡಲಾಗುತ್ತದೆ. ತಂಡದ ತರಬೇತುದಾರರಿಗೆ ತಂತ್ರ ಬದಲಾವಣೆಯ ಮಾರ್ಗದರ್ಶನ ನೀಡಲು ಅವಕಾಶವೂ ಸಿಗುತ್ತದೆ. ಜೊತೆಗೆ ಈ ವೇಳೆ ಜಾಹೀರಾತು ಪ್ರಸಾರ ಮಾಡಲು ಫಿಫಾ ಅವಕಾಶ ನೀಡಿದೆ.

ಲಯೊನೆಲ್ ಮೆಸ್ಸಿ

ಫುಟ್‌ಬಾಲ್ ಪ್ರೇಮಿಗಳು ಬಹುಕಾತರದಿಂದ ಕಾಯುತ್ತಿರುವ 23ನೇ ಫಿಫಾ ವಿಶ್ವಕಪ್ ಟೂರ್ನಿ ಜೂನ್ 11ರಿಂದ ಜುಲೈ 19ರವರೆಗೆ ಅಮೆರಿಕ–ಕೆನಡಾ–ಮೆಕ್ಸಿಕೊ ಜಂಟಿ ಆತಿಥ್ಯದಲ್ಲಿ ನಡೆಯುತ್ತಿದೆ. ಪಶ್ಚಿಮ ಏಷ್ಯಾದ ಯುದ್ಧದ ಬಿಸಿ ಇನ್ನೂ ಆರಿಲ್ಲ. ಆದರೆ, ಫುಟ್‌ಬಾಲ್ ಕಾವು ವ್ಯಾಪಕವಾಗಿದೆ. ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧದ ಬಿಕ್ಕಟ್ಟು ಮುಂದುವರಿದಿದ್ದರೂ, ಇರಾನ್ ತಂಡ ಅಮೆರಿಕದ ನೆಲದಲ್ಲಿ ಫುಟ್‌ಬಾಲ್ ಆಡಲಿದೆ. ಹಲವು ಹೊಸತುಗಳಿಗೆ ಈ ಬಾರಿಯ ಟೂರ್ನಿ ಸಾಕ್ಷಿಯಾಗಲಿದೆ. ಈ ಫುಟ್‌ಬಾಲ್ ವಿಶ್ವಕಪ್‌ನ ಪ್ರಮುಖ ವಿಶೇಷಗಳು ಇಲ್ಲಿವೆ

| ಭಾಗವಹಿಸುವ ಗುಂಪುವಾರು ತಂಡಗಳು | |
|---|---|
| ಎ | ಜೆಕ್ ರಿಪಬ್ಲಿಕ್, ಮೆಕ್ಸಿಕೊ, ದಕ್ಷಿಣ ಆಫ್ರಿಕಾ, ದಕ್ಷಿಣ ಕೊರಿಯಾ |
| ಬಿ | ಕೆನಡಾ, ಬೋಸ್ನಿಯಾ– ಹರ್ಜೆಗೋವಿನಾ, ಕತಾರ್, ಸ್ವಿಟ್ಜರ್ಲೆಂಡ್ |
| ಸಿ | ಬ್ರೆಜಿಲ್, ಹೈಟಿ, ಮೊರೊಕ್ಕೊ, ಸ್ಕಾಟ್ಲೆಂಡ್ |
| ಡಿ | ಆಸ್ಟ್ರೇಲಿಯಾ, ಪರಗ್ವೆ, ಟರ್ಕಿ, ಅಮೆರಿಕ, |
| ಇ | ಕ್ಯುರಸಾವೊ, ಇಕ್ವೆಡಾರ್, ಜರ್ಮನಿ, ಐವರಿಕೋಸ್ಟ್ |
| ಎಫ್ | ನೆದರ್ಲೆಂಡ್ಸ್, ಜಪಾನ್, ಸ್ವೀಡನ್, ಟ್ಯುನೀಶಿಯಾ |
| ಜಿ | ಬೆಲ್ಜಿಯಂ, ಈಜಿಪ್ಟ್, ಇರಾನ್, ನ್ಯೂಜಿಲೆಂಡ್ |
| ಎಚ್ | ಕೇಪ್ ವೆರ್ಡೆ, ಸೌದಿ ಅರೇಬಿಯಾ, ಸ್ಪೇನ್, ಉರುಗ್ವೆ |
| ಐ | ಫ್ರಾನ್ಸ್, ನಾರ್ವೆ, ಸೆನೆಗಲ್, ಇರಾಕ್ |
| ಜೆ | ಅಲ್ಜೀರಿಯಾ, ಅರ್ಜೆಂಟೀನಾ, ಆಸ್ಟ್ರಿಯಾ, ಜೋರ್ಡಾನ್ |
| ಕೆ | ಕೊಲಂಬಿಯಾ, ಜಮೈಕಾ, ಪೋರ್ಚುಗಲ್, ಉಜ್ಬೇಕಿಸ್ತಾನ |
| ಎಲ್ | ಕ್ರೊವೇಷ್ಯಾ, ಇಂಗ್ಲೆಂಡ್, ಘಾನಾ, ಪನಾಮಾ |

### ಅಂಕಿ ಆಟ...

**3** ವಿಶ್ವಕಪ್ ಇತಿಹಾಸದಲ್ಲಿ ಇದೇ ಮೊದಲ ಬಾರಿ ಮೂರು ರಾಷ್ಟ್ರಗಳು ಈ ಟೂರ್ನಿಯನ್ನು ಹಮ್ಮಿಕೊಳ್ಳುತ್ತಿವೆ

**6** ಲಯೊನೆಲ್ ಮೆಸ್ಸಿ, ಗಿಲೆರ್ಮೊ ಓಚಾವೊ ಮತ್ತು ಕ್ರಿಸ್ಟಿಯಾನೊ ರೊನಾಲ್ಡೊ ಅವರಿಗೆ ಇದು ದಾಖಲೆಯ ಆರನೇ ವಿಶ್ವಕಪ್ ಆಗಲಿದೆ

**13** ಅರ್ಜೆಂಟೀನಾದ ಸೂಪರ್‌ಸ್ಟಾರ್ ಲಯೊನೆಲ್ ಮೆಸ್ಸಿ ವಿಶ್ವಕಪ್‌ನಲ್ಲಿ ಹೊಡೆದಿರುವ ಗೋಲುಗಳ ಸಂಖ್ಯೆ. ಫ್ರಾನ್ಸ್‌ನ ತಾರೆ ಕೈಲಿಯನ್ ಎಂಬಾಪೆ (12 ಗೋಲು) ನಂತರದ ಸ್ಥಾನದಲ್ಲಿದ್ದಾರೆ. ವಿಶ್ವಕಪ್ ದಾಖಲೆ ಜರ್ಮನಿಯ ಮಿರೋಸ್ಲಾವ್ ಕ್ಲೋಸ್ (16) ಹೆಸರಿನಲ್ಲಿದೆ

**41** ಪೋರ್ಚುಗಲ್‌ನ ದಿಗ್ಗಜ ಕ್ರಿಸ್ಟಿಯಾನೊ ರೊನಾಲ್ಡೊ ಅವರ ವಯಸ್ಸು (ವಿಶ್ವಕಪ್ ಆರಂಭವಾಗುವಾಗ) 41 ವರ್ಷ 126 ದಿನ. ಅವರು ವಿಶ್ವಕಪ್ ಪಂದ್ಯ ಆಡಿದಲ್ಲಿ ಈ ಸಾಧನೆಗೆ ಪಾತ್ರರಾದ ನಾಲ್ಕನೇ ಅತಿ ಹಿರಿಯ ಆಟಗಾರ ಎನಿಸಲಿದ್ದಾರೆ

**17** ಹಾಲಿ ವಿಶ್ವಕಪ್‌ನಲ್ಲಿ ಆಡಲಿರುವ ಅತಿ ಕಿರಿಯ ಆಟಗಾರ ಗಿಲ್ಬರ್ಟೊ ಮೊರಾ. ಮೆಕ್ಸಿಕೊ ತಂಡದಲ್ಲಿರುವ ಅವರ ವಯಸ್ಸು 17 ವರ್ಷ 246 ದಿನ

ಕೈಲಿಯನ್ ಎಂಬಾಪೆ

### ದಿಗ್ಗಜರ ಮೇಲೆ ಕಣ್ಣು

ದಿಗ್ಗಜರಾದ ಲಯೊನೆಲ್ ಮೆಸ್ಸಿ (ಅರ್ಜೆಂಟೀನಾ- ನಾಯಕ), ಕ್ರಿಸ್ಟಿಯಾನೊ ರೊನಾಲ್ಡೊ (ಪೋರ್ಚುಗಲ್- ನಾಯಕ), ಕೈಲಿಯನ್ ಎಂಬಾಪೆ (ಫ್ರಾನ್ಸ್- ನಾಯಕ), ಯುವತಾರೆ ಲಮಿನ್ ಯುಮಾಲ್ (ಸ್ಪೇನ್), ಹ್ಯಾರಿ ಕೇನ್ (ಇಂಗ್ಲೆಂಡ್- ನಾಯಕ), ವಿನೀಷಿಯಸ್ ಜೂನಿಯರ್ (ಬ್ರೆಜಿಲ್), ಮೊಹಮದ್ ಸಲಾ (ಈಜಿಪ್ಟ್- ನಾಯಕ), ಅಂಟ್ವಾನ್ ಸೆಮೆನ್ಯೊ (ಘಾನಾ), ಆರ್ದಾ ಗುಲೇರ್ (ಟರ್ಕಿ), ಅರ್ಲಿಂಗ್ ಹಾಲಂಡ್ (ನಾರ್ವೆ) ಅವರ ಆಟದ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಬ್ರೆಜಿಲ್‌ನ ಭರವಸೆ ನೇಮರ್ ಗಾಯಾಳಾಗಿದ್ದರೂ ತಂಡದಲ್ಲಿದ್ದು ಅವರ ಆಡುವರೇ ಎಂಬ ಕುತೂಹಲವಂತೂ ಇದೆ.

ಕ್ರಿಸ್ಟಿಯಾನೊ ರೊನಾಲ್ಡೊ

### ಇರಾನ್ ವೀಸಾ ವಿವಾದ

ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧ ಇನ್ನೂ ನಿಂತಿಲ್ಲ. ವಿಶ್ವಕಪ್‌ನಲ್ಲಿ ಭಾಗವಹಿಸಲಿರುವ ತಂಡಗಳ ಪಟ್ಟಿಯಲ್ಲಿ ಇರಾನ್ ಕೂಡ ಇದೆ. ಅಮೆರಿಕದಲ್ಲೂ ಪಂದ್ಯಗಳು ಆಯೋಜನೆಯಾಗಿರುವುದರಿಂದ ಅಲ್ಲಿಗೆ ಹೋಗಿ ಇರಾನ್ ಆಡುವುದೇ ಮತ್ತು ಅಮೆರಿಕ ಇರಾನ್‌ಗೆ ಆಡಲು ಅವಕಾಶ ನೀಡುವುದೇ ಎಂಬ ಕುತೂಹಲವಿತ್ತು. ಅದಕ್ಕೀಗ ತೆರೆ ಬಿದ್ದಿದೆ. ಅಮೆರಿಕವು, ಇರಾನ್ ಆಟಗಾರರಿಗೆ ಮತ್ತು 'ಆಯ್ದ ನೆರವು ಸಿಬ್ಬಂದಿ'ಗೆ ಮಾತ್ರ ವೀಸಾ ನೀಡಿದೆ. ತಾಂತ್ರಿಕ ಸಲಹೆಗಾರರಿಗೆ, ಇರಾನ್ ಫುಟ್‌ಬಾಲ್ ಸಂಸ್ಥೆ ಮುಖ್ಯಸ್ಥರಿಗೆ ವೀಸಾ ನಿರಾಕರಿಸಲಾಗಿದೆ.

ಇರಾನ್, ಮೆಕ್ಸಿಕೊವನ್ನು ನೆಲೆಯಾಗಿಟ್ಟುಕೊಂಡು ಪಂದ್ಯಗಳನ್ನು ಆಡುವ ದಿನ ಅಮೆರಿಕಕ್ಕೆ ತೆರಳಲಿದೆ. ಮೆಕ್ಸಿಕೊದ ಗಡಿ ಪಟ್ಟಣವಾದ ತಿಜುವಾನದಲ್ಲಿ ತಂಡ ವಾಸ್ತವ್ಯ ಹೂಡಲಿದೆ. ಇದಕ್ಕೆ ಮೊದಲು ಅರಿಝೋನಾದ ಟಸ್ಕನ್‌ನಲ್ಲಿ ಇರಾನ್‌ಗೆ ನೆಲೆ ಎಂದು ನಿಗದಿಪಡಿಸಲಾಗಿತ್ತು. ಈಗ ನೀಡಿರುವ ವೀಸಾ ಪ್ರಕಾರ, ಪಂದ್ಯದ ದಿನ ಇರಾನ್ ತಂಡವು ಅಮೆರಿಕಕ್ಕೆ ಬಂದು ಪಂದ್ಯ ಆಡಿ ಅದೇ ದಿನ ಮೆಕ್ಸಿಕೊದ ನೆಲೆಗೆ ಮರಳಬೇಕಾಗುತ್ತದೆ.

ನೇಮರ್

### ನಿಂದನೆ ಶಿಸ್ತುಕ್ರಮ ಇನ್ನಷ್ಟು ಬಿಗಿ

- ಪಂದ್ಯಗಳ ವೇಳೆ ಎದುರಾಳಿ ಆಟಗಾರನ ವಿರುದ್ಧ ಜನಾಂಗೀಯ ನಿಂದನೆ, ತಾರತಮ್ಯ, ಅವಮಾನ ಮಾಡಿದರೆ ವಿಶ್ವಕಪ್‌ನಲ್ಲಿ ಕಠಿಣ ಕ್ರಮ ಕಾದಿದೆ. ಫಿಫಾ ಮತ್ತು ಐಎಫ್‌ಎಬಿ (ಅಂತರರಾಷ್ಟ್ರೀಯ ಫುಟ್‌ಬಾಲ್ ಸಂಸ್ಥೆ ಮಂಡಳಿ) ಕಟ್ಟುನಿಟ್ಟಿನ ಕ್ರಮಗಳನ್ನು ರೂಪಿಸಿದ್ದು ಈ ವಿಶ್ವಕಪ್‌ನಲ್ಲಿ ಜಾರಿಗೆ ತರಲಾಗುತ್ತಿದೆ. ಬಾಯಿಗೆ ಕೈ, ಶರ್ಟ್ ಅಡ್ಡವಾಗಿಟ್ಟುಕೊಂಡು ಅವಾಚ್ಯ, ನಿಂದನೀಯ ಪದಗಳನ್ನು ಪ್ರಯೋಗಿಸುವ ಆಟಗಾರರಿಗೆ 'ರೆಡ್ ಕಾರ್ಡ್' ಪ್ರದರ್ಶಿಸಲು (ಹೊರಕಳಿಸಲು) ರೆಫ್ರಿಗೆ ವಿವೇಚನಾ ಅಧಿಕಾರ ನೀಡಲಾಗಿದೆ
- ನಿಂದನೆ ನಿಲ್ಲಿಸುವಂತೆ ರೆಫ್ರಿ ಸಂಕೇತ ನೀಡಿದ ಬಳಿಕವೂ ನಿಂದನೆ ಮುಂದುವರಿದಲ್ಲಿ ಪಂದ್ಯ ಸ್ಥಗಿತಗೊಳಿಸಬಹುದಾಗಿದೆ
- ಪಂದ್ಯಗಳ ನಂತರವೂ ತಪ್ಪೆಸಗಿದ ಆಟಗಾರನ ವಿರುದ್ಧ ಫಿಫಾ ಅಥವಾ ಯುಇಎಫ್‌ಎ (ಯುರೋಪಿನ ಒಕ್ಕೂಟ) ಅಮಾನತು, ಭಾರಿ ದಂಡದಂಥ ಶಿಕ್ಷೆ ವಿಧಿಸಬಹುದಾಗಿದೆ
- ಪಂದ್ಯದ ವೇಳೆ ರೆಫ್ರಿ ತೀರ್ಪು ಪ್ರತಿಭಟಿಸಿ 'ಫೀಲ್ಡ್' ತೊರೆಯುವ ಆಟಗಾರನಿಗೆ, ಅಥವಾ ಆಟಗಾರನಿಗೆ ಆ ರೀತಿಯ ಪ್ರಚೋದನೆ ನೀಡುವ ಕೋಚಿಂಗ್ ಸಿಬ್ಬಂದಿಗೂ ರೆಡ್ ಕಾರ್ಡ್ ಶಿಕ್ಷೆ ಎದುರಾಗಲಿದೆ

### ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

### ಕಾಲೇಜಿನ ಶುಲ್ಕ ಕಟ್ಟಲು ನೆರವಾಯಿತು

ಇತರರು ಮಾಡುವ ಸಣ್ಣಪುಟ್ಟ ಸಹಾಯಗಳೂ ಕಷ್ಟದ ಸಮಯದಲ್ಲಿ ಕೈಹಿಡಿಯುತ್ತವೆ. ಹಾಗೆಯೇ 'ಪ್ರಜಾವಾಣಿ' ವಿದ್ಯಾರ್ಥಿವೇತನ ಕಾಲೇಜಿನ ಶುಲ್ಕ ಕಟ್ಟಲು ನೆರವು ನೀಡಿತು. ಆ ಸಮಯಕ್ಕೆ ಅದು ಹುಲ್ಲುಕಡ್ಡಿಯಂತೆ ಆಸರೆ ಒದಗಿಸಿತು. ಇಂತಹ ವಿದ್ಯಾರ್ಥಿ ವೇತನಗಳು ಬಡ ಮಕ್ಕಳಿಗೆ ಅನುಕೂಲಕರ. ಈ ಮಾದರಿ ಹೀಗೆಯೇ ಮುಂದುವರಿಯಲಿ.

**ಸ್ವಾತಿ ಡಿ.**, ದಾವಣಗೆರೆ

### ಉನ್ನತ ಶಿಕ್ಷಣಕ್ಕೆ ಸಹಾಯ

ಮನೆಯಲ್ಲಿ ಹಣಕಾಸಿನ ತೊಂದರೆಯಿತ್ತು. 'ಪ್ರಜಾವಾಣಿ ಸ್ಕಾಲರ್‌ಶಿಪ್'ನಿಂದ ಕಾಲೇಜು ಶುಲ್ಕ ಪಾವತಿಗೆ ಅನುಕೂಲವಾಯಿತು. ಭವಿಷ್ಯದಲ್ಲಿ ನಾನೂ ಬೇರೆಯವರಿಗೆ ಸಹಾಯ ಮಾಡುವೆ. ಹಣಕಾಸಿನ ನೆರವು ನೀಡಿದ ಪ್ರಜಾವಾಣಿಗೆ ಧನ್ಯವಾದ.

**ಚಂದನಾ ಆರ್. ಸಂಗನಾಳ**, ಹುಬ್ಬಳ್ಳಿ

## ❖ ಎಲ್‌ಪಿಜಿ ಸಿಲಿಂಡರ್ ಬೆಲೆ ಹೆಚ್ಚಳದ ಬೆನ್ನಲ್ಲೇ ಕೇಂದ್ರದಿಂದ ನಿರ್ಧಾರ: ಉಜ್ವಲಾ ಸಿಲಿಂಡರ್ 4ಕ್ಕೆ ಕಡಿತ

- ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯ (ಪಿಎಂಯುವೈ) ಫಲಾನುಭವಿಗಳಿಗೆ ಪ್ರತಿವರ್ಷ ನೀಡುತ್ತಿದ್ದ ಸಬ್ಸಿಡಿ ಸಹಿತ ಎಲ್‌ಪಿಜಿ ಸಿಲಿಂಡರ್ ಸಂಖ್ಯೆಯನ್ನು ಕೇಂದ್ರ ಸರ್ಕಾರವು ನಾಲ್ಕಕ್ಕೆ ಇಳಿಕೆ ಮಾಡಿದೆ.
- ಪಿಎಂಯುವೈ ಯೋಜನೆಯನ್ನು 2016ರಲ್ಲಿ ಆರಂಭಿಸಲಾಗಿದೆ. ಇದರ ಅಡಿಯಲ್ಲಿ ಬಡ ಕುಟುಂಬಗಳಿಗೆ ಸೇರಿದ ಮಹಿಳೆಯರಿಗೆ ಠೇವಣಿ ಇಲ್ಲದೆ ಎಲ್‌ಪಿಜಿ ಸಂಪರ್ಕ ಒದಗಿಸಲಾಗುತ್ತದೆ. ಆರಂಭದಲ್ಲಿ ಈ ಯೋಜನೆಯ ಅಡಿ ಫಲಾನುಭವಿಗಳಿಗೆ ವರ್ಷವೊಂದರಲ್ಲಿ 14.2 ಕೆ.ಜಿ. ತೂಕದ 12 ಸಿಲಿಂಡರ್‌ಗಳನ್ನು ಸಬ್ಸಿಡಿ ಸಹಿತವಾಗಿ ಒದಗಿಸಲಾಗುತ್ತಿತ್ತು. ಕಳೆದ ವರ್ಷ ಇದನ್ನು ವರ್ಷಕ್ಕೆ ಒಂಬತ್ತು ಸಿಲಿಂಡರ್‌ಗಳಿಗೆ ಇಳಿಸಲಾಯಿತು. ಈಗ ಅದು ನಾಲ್ಕಕ್ಕೆ ತಗ್ಗಿದೆ.
- ಹೊಸ ಸಂಖ್ಯೆಯು ಉಜ್ವಲಾ ಯೋಜನೆಯ ಫಲಾನುಭವಿಗಳು ವರ್ಷವೊಂದರಲ್ಲಿ ಬಳಕೆ ಮಾಡುವ ಸಿಲಿಂಡರ್‌ಗಳ ಸರಾಸರಿ ಸಂಖ್ಯೆಗೆ ಅನುಗುಣವಾಗಿ ಇದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಪ್ರವೀಣ್ ಎಂ. ಖನೂಜಾ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.
- ಈಗ ಅರ್ಹ ಸಂಖ್ಯೆಯ ಸಿಲಿಂಡರ್‌ಗಳಿಗೆ ₹300 ಸಬ್ಸಿಡಿ ನೀಡಲಾಗುತ್ತಿದೆ. ಸಬ್ಸಿಡಿ ಮೊತ್ತವು ಫಲಾನುಭವಿಗಳಿಗೆ ಖಾತೆಗೆ ನೇರವಾಗಿ ವರ್ಗಾವಣೆ ಆಗುತ್ತದೆ. ಎಲ್‌ಪಿಜಿ ಸಿಲಿಂಡರ್ ಬೆಲೆ ಹೆಚ್ಚಳದ ಬೆನ್ನಲ್ಲೇ ಸಬ್ಸಿಡಿ ಸಹಿತ ಸಿಲಿಂಡರ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ.
- ದೆಹಲಿಯಲ್ಲಿ ಈಗ ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯು ₹942 ಆಗಿದೆ. ₹300 ಸಬ್ಸಿಡಿ ಮೊತ್ತವನ್ನು ಪರಿಗಣಿಸಿದರೆ ಉಜ್ವಲಾ ಯೋಜನೆಯ ಫಲಾನುಭವಿಗಳು ವರ್ಷವೊಂದರಲ್ಲಿ ನಾಲ್ಕು ಸಿಲಿಂಡರ್‌ಗಳಿಗೆ ₹642 ಪಾವತಿಸಬೇಕಾಗುತ್ತದೆ.
- ಮನೆಬಳಕೆಯ ಒಂದು ಎಲ್‌ಪಿಜಿ ಸಿಲಿಂಡರ್ ಪೂರೈಸಲು ಸರ್ಕಾರವು ಈಗ ₹1,600ರಷ್ಟು ವೆಚ್ಚ ಮಾಡುತ್ತಿದೆ. ಈ ಮೊತ್ತವನ್ನು ಪರಿಗಣಿಸಿದಾಗ ಉಜ್ವಲಾ ಯೋಜನೆಯ ಫಲಾನುಭವಿ ಗಳಿಗೆ ಸಿಲಿಂಡರ್‌ಗೆ ₹1,000ದಷ್ಟು ನೆರವು ನೀಡಿದಂತಾಗುತ್ತದೆ ಎಂದು ಖನೂಜಾ ಹೇಳಿದ್ದಾರೆ.
- ಪೆಟ್ರೋಲ್, ಡೀಸೆಲ್‌ನಲ್ಲಿ ನಷ್ಟ: ಪೆಟ್ರೋಲ್ ಮತ್ತು ಡೀಸೆಲ್ ಅನ್ನು ದೇಶದಲ್ಲಿ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿರುವುದರ ಪರಿಣಾಮವಾಗಿ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಕಂಪನಿಗಳಿಗೆ ನಷ್ಟ ಆಗುತ್ತಿದೆ ಎಂದು ಅವರು ತಿಳಿಸಿದ್ದಾರೆ.
- ಪೆಟ್ರೋಲ್ ಮಾರಾಟದಿಂದ ಲೀಟರಿಗೆ ₹6ರಷ್ಟು ಹಾಗೂ ಡೀಸೆಲ್ ಮಾರಾಟದಿಂದ ₹30ರಷ್ಟು ನಷ್ಟವಾಗುತ್ತಿದೆ ಎಂದು ಹೇಳಿದ್ದಾರೆ.

## ❖ 'ಎಚ್-1ಬಿ ವೀಸಾ ಶುಲ್ಕ ಹೆಚ್ಚಳ ಕಾನೂನುಬಾಹಿರ

- ಎಚ್-1ಬಿ ವೀಸಾಕ್ಕಾಗಿ 1ಲಕ್ಷ ಡಾಲರ್ ಶುಲ್ಕ ಪಾವತಿಸಬೇಕು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊರಡಿಸಿದ್ದ ಆದೇಶವನ್ನು ಅಮೆರಿಕದ ಫೆಡರಲ್ ನ್ಯಾಯಾಲಯವು ರದ್ದುಗೊಳಿಸಿದೆ.
- 'ಹೆಚ್ಚುವರಿ ಶುಲ್ಕ ವಿಧಿಸುವ ನಿರ್ಧಾರವನ್ನು ಸಂಸತ್ತು ಅಂಗೀಕರಿಸಿಲ್ಲ' ಎಂದು ಬಾಸ್ಟನ್‌ನ ಫೆಡರಲ್ ನ್ಯಾಯಾಧೀಶ ಲಿಯೊ ಸಾರೊಕಿನ್ ಸೋಮವಾರ ತೀರ್ಪು ನೀಡಿದರು.
- ಎಚ್-1ಬಿ ವೀಸಾ ಶುಲ್ಕವನ್ನು 1ಲಕ್ಷ ಡಾಲರ್‌ಗೆ ಹೆಚ್ಚಿಸಿ ಟ್ರಂಪ್ ಅವರು ಕಳೆದ ಸೆಪ್ಟೆಂಬರ್‌ನಲ್ಲಿ ಆದೇಶಿಸಿದ್ದರು. ಇದನ್ನು ಪ್ರಶ್ನಿಸಿ 20 ಡೆಮಾಕ್ರಟಿಕ್ ಸ್ಟೇಟ್ ಅಟಾರ್ನಿ ಜನರಲ್‌ಗಳು ಅರ್ಜಿ ಸಲ್ಲಿಸಿದ್ದರು.
- 'ಕೆಲವು ವಿದೇಶಿ ಪ್ರಜೆಗಳ ಪ್ರವೇಶವನ್ನು ನಿರ್ಬಂಧಿಸಲು ಫೆಡರಲ್ ವಲಸೆ ಕಾನೂನಿನ ಅಡಿಯಲ್ಲಿ ವೀಸಾಕ್ಕೆ ಹೆಚ್ಚುವರಿ ಶುಲ್ಕ ವಿಧಿಸುವ ಕಾನೂನುಬದ್ಧ ಅಧಿಕಾರ ಅಧ್ಯಕ್ಷರಿಗೆ ಇದೆ' ಎಂಬ ಸರ್ಕಾರಿ ಪರ ವಕೀಲರ ವಾದವನ್ನು ನ್ಯಾಯಾಧೀಶರು ಅಲ್ಲಗಳೆದರು.

- ಬಾಡಿಗೆದಾರರಿಂದ ಪರಿಸರ ಮಾಲಿನ್ಯ ಭೂಮಾಲೀಕ ಹೊಣೆಯಲ್ಲ: 'ಸುಪ್ರೀಂ'
- ಬಾಡಿಗೆದಾರರು ನಿರ್ಮಿಸಿರುವ ರಾಸಾಯನಿಕ ಘಟಕದಿಂದ ಪರಿಸರಕ್ಕೆ ಉಂಟಾಗುವ ಹಾನಿಗೆ ಭೂಮಾಲೀಕರು ಹೊಣೆಗಾರರಲ್ಲ ಎಂಬ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ(ಎನ್‌ಜಿಟಿ) ಆದೇಶವನ್ನು ಸುಪ್ರೀಂ ಕೋರ್ಟ್ ಸೋಮವಾರ ಎತ್ತಿ ಹಿಡಿದಿದೆ.
- ನ್ಯಾಯಮಂಡಳಿ ಆದೇಶವನ್ನು ಪ್ರಶ್ನಿಸಿ ಗುಜರಾತ್ ಮಾಲಿನ್ಯ ನಿಯಂತ್ರಣ ಮಂಡಳಿ(ಜಿಪಿಸಿಬಿ) ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸತೀಶ್ ಚಂದ್ರ ಶರ್ಮ ಮತ್ತು ಸಂಜೀವ್ ಸಚ್‌ದೇವ ಅವರ ನ್ಯಾಯಪೀಠವು, 2025ರ ನವೆಂಬರ್ 14ರಂದು ನ್ಯಾಯಮಂಡಳಿ ನೀಡಿದ್ದ ಆದೇಶದ ವಿಚಾರದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿದೆ.
- ಸೂರತ್‌ನ ಜಗ್‌ಮೋಹನ್ ಲಚಿರಾಮ್ ಜಾಲಾನ್ ಎಂಬವರಿಗೆ ಸೇರಿದ ಭೂಮಿಯಲ್ಲಿ, ಮಾರ್ಗಸೂಚಿಗಳನ್ನು ಪಾಲಿಸದೇ ರಾಸಾಯನಿಕ ಉತ್ಪಾದನೆ ಮಾಡುತ್ತಿದ್ದ ಘಟಕವನ್ನು ಜಿಪಿಸಿಬಿ ಮುಚ್ಚಿಸಿತ್ತು. ಜಾಗದ ಮಾಲೀಕ ಜಾಲಾನ್ ಅವರಿಗೆ ₹25 ಲಕ್ಷ ದಂಡ ವಿಧಿಸಿತ್ತು.
- 2020ರಲ್ಲಿ ಒಪ್ಪಂದದ ಅಡಿಯಲ್ಲಿ ಖಾಸಗಿ ಕಂಪನಿಯ ನಿರ್ದೇಶಕರೊಬ್ಬರಿಗೆ ಭೂಮಿಯನ್ನು ಬಾಡಿಗೆಗೆ ನೀಡಿದ್ದು, ಅವರು ಪರವಾನಗಿ ಪಡೆಯದೇ ಘಟಕ ನಿರ್ವಹಿಸುತ್ತಿದ್ದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ' ಎಂದು ವಾದಿಸಿದ ಜಾಲಾನ್, ಬಾಡಿಗೆದಾರರ ವಿರುದ್ಧ ದೂರು ದಾಖಲಿಸಿದ್ದರು ಮತ್ತು ಗುಜರಾತ್ ಹೈಕೋರ್ಟ್ ಮೆಟ್ಟಿಲೇರಿದ್ದರು.
- ಗುಜರಾತ್ ಹೈಕೋರ್ಟ್ ನಿರ್ದೇಶನದಂತೆ ತನ್ನ ನಿರ್ಧಾರವನ್ನು ಮರುಪರಿಶೀಲಿಸಿದ ಮಾಲಿನ್ಯ ಮಂಡಳಿಯು ದಂಡ ವಿಧಿಸಿರುವುದನ್ನು ಸಮರ್ಥಿಸಿಕೊಂಡಿತ್ತು.
- ಈ ಕುರಿತು ವಿಚಾರಣೆ ನಡೆಸಿದ್ದ ಎನ್‌ಜಿಟಿ, 'ಬಾಡಿಗೆಗೆ ನೀಡಲಾದ ಭೂಮಿಯಲ್ಲಿದ್ದ ಘಟಕದಿಂದ ಉಂಟಾದ ಪರಿಸರ ಹಾನಿಗೆ ಮಾಲೀಕ ಜಾಲಾನ್ ಅವರಿಂದ ದಂಡ ಪಾವತಿ ಮಾಡಿಸಿಕೊಳ್ಳುವಂತಿಲ್ಲ' ಎಂದು ಆದೇಶಿಸಿತ್ತು.

### ❖ 'ವಿವಾಹವಾಗದ ಮಾತ್ರಕ್ಕೆ ವ್ಯಕ್ತಿ ವಂಚಕನಲ್ಲ'

- 'ವಿವಾಹವಾಗದ ಇಬ್ಬರು ವಯಸ್ಕರು ಪರಸ್ಪರ ಒಪ್ಪಿತ ಪ್ರೇಮ ಸಂಬಂಧದಲ್ಲಿ ಇದ್ದಾರೆ ಎನ್ನುವುದು ವ್ಯಕ್ತಿಯೊಬ್ಬರ ನಡತೆ ಸರಿಯಿಲ್ಲ ಎನ್ನುವುದನ್ನು ನಿರ್ಧರಿಸುವ ಮಾನದಂಡವಾಗಬಾರದು' ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.
- ನೆರೆ ಮನೆಯ ಮಹಿಳೆಯೊಂದಿಗೆ ನಾಲ್ಕು ವರ್ಷ ಪ್ರೇಮ ಸಂಬಂಧದಲ್ಲಿ ಇದ್ದು, ಬಳಿಕ ಮದುವೆ ಆಗಲಿಲ್ಲ ಎನ್ನುವ ಕಾರಣಕ್ಕೆ ವ್ಯಕ್ತಿಯೊಬ್ಬರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು. ಪ್ರಕರಣ ದಾಖಲಾದ ಕಾರಣ ಆ ವ್ಯಕ್ತಿಯನ್ನು ಪೊಲೀಸ್ ಕಾನ್‌ಸ್ಟೆಬಲ್ ಆಗಿ ನೇಮಿಸಲು 2014ರಲ್ಲಿ ತೆಲಂಗಾಣ ರಾಜ್ಯ ಮಟ್ಟದ ಪೊಲೀಸ್ ನೇಮಕಾತಿ ಮಂಡಳಿಯು ನಿರಾಕರಿಸಿತ್ತು.
- ವ್ಯಕ್ತಿಯ ಪರವಾಗಿ ಈಗಾಗಲೇ ತೆಲಂಗಾಣ ಹೈಕೋರ್ಟ್‌ನಲ್ಲಿ ತೀರ್ಪು ನೀಡಿತ್ತು. ಈ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ನ್ಯಾಯಮೂರ್ತಿಗಳಾದ ಮನಮೋಹನ್ ಮತ್ತು ಮನೋಜ್ ಮಿಶ್ರಾ ಅವರ ಪೀಠ ಅರ್ಜಿಯ ವಿಚಾರಣೆ ನಡೆಸಿತು. 'ಎಲ್ಲ ಸಂಬಂಧಗಳು ಮದುವೆಯಲ್ಲಿಯೇ ಕೊನೆಗೊಳ್ಳುವುದಿಲ್ಲ. ಮದುವೆ ಆಗಲಿಲ್ಲ ಎನ್ನುವ ಕಾರಣಕ್ಕೆ ವ್ಯಕ್ತಿಯನ್ನು ವಂಚಕ ಎನ್ನಲಾಗದು. ವ್ಯಕ್ತಿಯನ್ನು ಕಾನ್‌ಸ್ಟೆಬಲ್ ಆಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಮತ್ತೊಮ್ಮೆ ಯೋಚಿಸಿ' (ದು ಪೀಠ ಸೂಚಿಸಿತು.

Dr. Rajkumar IAS/KAS Academy

## ಕಂಬನಿ

ಪಿಟಿಐ ಚಿತ್ರ:



**ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಹರ್ ರೆಜಿಮೆಂಟ್‌ನ ಸಿಪಾಯಿ ಜಂಜಾಲ್ ಪ್ರವೀಣ್ ಪ್ರಭಾಕರ್ ಅವರಿಗೆ ಮರಣೋತ್ತರವಾಗಿ ಕೀರ್ತಿ ಚಕ್ರ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿ ಸ್ವೀಕರಿಸುವ ವೇಳೆ ಭಾವುಕರಾದ ಜಂಜಾಲ್ ಅವರ ತಾಯಿಯನ್ನು ಮುರ್ಮು ಅವರು ಸಂತೈಸಿದರು**

# ಸಾವಯವ ಗೊಬ್ಬರ ಖರೀದಿ ಹೆಚ್ಚಳ

## 11 ಲಕ್ಷ ಟನ್‌ಗೆ ಜಿಗಿದ ಸಾವಯವ ಗೊಬ್ಬರ ಖರೀದಿ: ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಪ್ರಸಕ್ತ ಮುಂಗಾರು ಹಂಗಾಮಿನ ಬಿತ್ತನೆ ಅವಧಿಯಲ್ಲಿ ದೇಶದ ರೈತರು 11.17 ಲಕ್ಷ ಟನ್‌ನಷ್ಟು ಸಾವಯವ ಗೊಬ್ಬರ ಖರೀದಿಸಿದ್ದಾರೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ 3.2 ಲಕ್ಷ ಟನ್‌ನಷ್ಟು ಸಾವಯವ ಗೊಬ್ಬರ ಖರೀದಿಸಿದ್ದರು. ಇದಕ್ಕೆ ಹೋಲಿಸಿದರೆ ಈ ಬಾರಿ ಖರೀದಿ ಪ್ರಮಾಣ ಮೂರೂವರೆ ಪಟ್ಟು ಹೆಚ್ಚಳವಾಗಿದೆ. ರೈತರು ರಾಸಾಯನಿಕ ಗೊಬ್ಬರದ ಬದಲು ಸಾವಯವ ಗೊಬ್ಬರ ಬಳಕೆಗೆ ಒತ್ತು ನೀಡುತ್ತಿರುವುದನ್ನು ಇದು ಸೂಚಿಸುತ್ತಿದೆ ಎಂದು ಹೇಳಿದೆ.

ದೇಶದಲ್ಲಿ ರಸಗೊಬ್ಬರ ದಾಸ್ತಾನು ಕೂಡ ಉತ್ತಮ ಮಟ್ಟದಲ್ಲಿ ಇದ್ದು, ಲಭ್ಯತೆಯಲ್ಲಿ ಸಮಸ್ಯೆ ಉಂಟಾಗಿಲ್ಲ ಎಂದು ಕೇಂದ್ರವು ಪುನರುಚ್ಚರಿಸಿದೆ. ರಸಗೊಬ್ಬರದ ಅಗತ್ಯಮಟ್ಟದ ಪೂರೈಕೆ ಖಚಿತಪಡಿಸಿಕೊಳ್ಳಲು ಕಾಲಕಾಲಕ್ಕೆ ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ತಿಳಿಸಿದೆ.

### ಮುಖ್ಯಾಂಶಗಳು

- ಪ್ರಸ್ತುತ 45 ಕೆ.ಜಿ ತೂಕದ ಯೂರಿಯಾ ಚೀಲದ ದರ ₹242
- 50 ಕೆ.ಜಿಯ ಡೈ- ಅಮೋನಿಯಂ ಫಾಸ್ಫೇಟ್ ಚೀಲಕ್ಕೆ ₹1,350
- ರಸಗೊಬ್ಬರ ಸಬ್ಸಿಡಿಗೆ ₹1.71 ಲಕ್ಷ ಕೋಟಿ ಹಂಚಿಕೆ



**ದೇಶದಲ್ಲಿ ರಸಗೊಬ್ಬರ ಲಭ್ಯತೆಯಲ್ಲಿ ಸಮಸ್ಯೆ ಉಂಟಾಗಿಲ್ಲ. ಸರ್ಕಾರವು ಎಲ್ಲ ಸಬ್ಸಿಡಿ ಬಿಲ್‌ಗಳನ್ನು ಬಜೆಟ್ ಅನುದಾನಕ್ಕೆ ಅನುಗುಣವಾಗಿ ಪಾವತಿಸುತ್ತಿದೆ**

**ಅಪರ್ಣಾ ಎಸ್. ಶರ್ಮಾ,**
ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ

'ಪ್ರಸಕ್ತ ಮುಂಗಾರು ಅವಧಿಗೆ ದೇಶದಲ್ಲಿ 383.9 ಲಕ್ಷ ಟನ್ ರಸಗೊಬ್ಬರ ಅಗತ್ಯವಿದೆ ಎಂದು ಕೃಷಿ ಸಚಿವಾಲಯ ಮರು ಅಂದಾಜಿಸಿದೆ. ಈಗ ದೇಶದಲ್ಲಿ 197.56 ಲಕ್ಷ ಟನ್ ರಸಗೊಬ್ಬರ ದಾಸ್ತಾನು ಇದೆ. ಇದು ಒಟ್ಟು ಬೇಡಿಕೆಯ ಪೈಕಿ ಶೇ 51ಕ್ಕಿಂತ ಹೆಚ್ಚು' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಅಪರ್ಣಾ ಎಸ್. ಶರ್ಮಾ ಹೇಳಿದ್ದಾರೆ.

ಮುಂಗಾರು ಹಂಗಾಮಿಗೆ 86.65 ಲಕ್ಷ ಟನ್ ರಸಗೊಬ್ಬರ ಖರೀದಿಯಾಗಿದ್ದು, ಇದು ಒಟ್ಟು ಅವಶ್ಯಕತೆಯ ಶೇ 22.57ರಷ್ಟಿದೆ. ದೇಶದಲ್ಲಿ ರಸಗೊಬ್ಬರ ಉತ್ಪಾದನೆ ಮತ್ತು ಆಮದು ಮುಂದುವರಿದಿದೆ. ಜೂನ್ ತಿಂಗಳಲ್ಲಿ ಇದುವರೆಗೆ 25 ಲಕ್ಷ ಟನ್‌ಗೂ ಅಧಿಕ ಯೂರಿಯಾ, ಡಿಎಪಿ ಮತ್ತು ಪಿಕೆಎಸ್ ಆಮದಾಗಿದ್ದು, ಅವು ಬಂದರುಗಳಲ್ಲಿವೆ. 17 ಲಕ್ಷ ಟನ್ ಯೂರಿಯಾ ಖರೀದಿ ಪ್ರಕ್ರಿಯೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ಕಳೆದ ಕ್ಯಾಲೆಂಡರ್ ವರ್ಷದಲ್ಲಿ ದೇಶದ ಒಟ್ಟು ರಸಗೊಬ್ಬರ ಅಗತ್ಯದ ಶೇ 73ರಷ್ಟನ್ನು ದೇಶೀಯ ಉತ್ಪಾದನೆಯ ಮೂಲಕವೇ ಪೂರೈಸಲಾಯಿತು. ಸ್ಥಳೀಯ ಬೇಡಿಕೆ ಪೂರೈಸಲು ಯೂರಿಯಾ ಮತ್ತು ಡೈ-ಅಮೋನಿಯಂ ಫಾಸ್ಫೇಟ್ (ಡಿಎಪಿ) ಅನ್ನು ದೊಡ್ಡ ಮಟ್ಟದಲ್ಲಿ ಆಮದು ಮಾಡಿಕೊಳ್ಳಲಾಗುತ್ತದೆ.

2021ರಲ್ಲಿ ದೇಶದಲ್ಲಿ ಯೂರಿಯಾ, ಡಿಎಪಿ, ಎನ್‌ಪಿಕೆ, ಎಸ್‌ಎಸ್‌ಪಿ ಸೇರಿದಂತೆ ರಸಗೊಬ್ಬರ ಉತ್ಪಾದನೆಯು 433.29 ಲಕ್ಷ ಟನ್‌ನಷ್ಟಿತ್ತು. ಅದು ಕಳೆದ ವರ್ಷದ ವೇಳೆಗೆ 524.62 ಲಕ್ಷ ಟನ್‌ಗೆ ಹೆಚ್ಚಳವಾಗಿದೆ.

2014–15ರಲ್ಲಿ ಯೂರಿಯಾ ಉತ್ಪಾದನೆ 225 ಲಕ್ಷ ಟನ್‌ನಷ್ಟಿತ್ತು. ಅದು 2024–25ರ ವೇಳೆಗೆ 306.67 ಲಕ್ಷ ಟನ್‌ಗೆ ಹೆಚ್ಚಳವಾಗಿದೆ. ಕಳೆದ ಆರ್ಥಿಕ ವರ್ಷದಲ್ಲಿ 100 ಲಕ್ಷ ಟನ್‌ಗೂ ಅಧಿಕ ಯೂರಿಯಾವನ್ನು ಆಮದು ಮಾಡಿಕೊಳ್ಳಲಾಗಿದೆ ಎಂದು ಕೇಂದ್ರ ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಸಗೊಬ್ಬರ ಸಬ್ಸಿಡಿಗೆ ಕೇಂದ್ರವು ₹1.71 ಲಕ್ಷ ಕೋಟಿ ಹಂಚಿಕೆ ಮಾಡಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ದರಗಳು ಹೆಚ್ಚಾದಂತೆ ಆಮದು ವೆಚ್ಚ ಹೆಚ್ಚಾಗುವ ಸಾಧ್ಯತೆಯಿದೆ.

Publication Date
09/06/2026

Presented by ಪ್ರಜಾವಾಣಿ

# ‘ಏಕಾಂಗಿ’ ಮಹಿಳೆಯರ ಸಂಖ್ಯೆ ಏರಿಕೆ

## ದೇಶದಲ್ಲಿಯೇ ಕರ್ನಾಟಕಕ್ಕೆ ಮೂರನೇ ಸ್ಥಾನ: ಸಮೀಕ್ಷೆಯಲ್ಲಿ ಬಹಿರಂಗ

• ಶೆಮಿನ್ ಜಾಯ್

ನವದೆಹಲಿ: ಪತಿಯ ಸಾವು, ವಿಚ್ಛೇದನ ಮೊದಲಾದ ಕಾರಣಗಳಿಂದ ಹೆಚ್ಚಿನ ಮಹಿಳೆಯರು ಉಳಿದ ಜೀವನವನ್ನು ಏಕಾಂಗಿಯಾಗಿ ಬದುಕುವ ಪ್ರವೃತ್ತಿ ಭಾರತದಲ್ಲಿ ಹೆಚ್ಚುತ್ತಿದೆ. ತಮಿಳುನಾಡು, ಕೇರಳ ಹಾಗೂ ಕರ್ನಾಟಕದಲ್ಲಿಯೇ ಇಂತಹವರ ಸಂಖ್ಯೆ ಹೆಚ್ಚುತ್ತಿದ್ದು, ಮೊದಲ ಮೂರು ಸ್ಥಾನಗಳಲ್ಲಿ ಈ ರಾಜ್ಯಗಳ ಜನರಿದ್ದಾರೆ ಎಂದು ಇತ್ತೀಚೆಗಿನ ‘ಮಾದರಿ ನೋಂದಣಿ ಸಮೀಕ್ಷೆ’ಯಿಂದ (ಎಸ್‌ಆರ್‌ಎಸ್) ಗೊತ್ತಾಗಿದೆ.


ಎಸ್‌ಆರ್‌ಎಸ್ ಸಾಂಖ್ಯಿಕ ವರದಿ 2024ರ ಪ್ರಕಾರ, ತಮಿಳುನಾಡಿನಲ್ಲಿ ವಿಚ್ಛೇದಿತರಾದವರು ಅಥವಾ ವಿಧವೆಯರ ಸಂಖ್ಯೆ ಇಡೀ ದೇಶದಲ್ಲಿಯೇ ಗರಿಷ್ಠವಾಗಿದ್ದು, ಶೇಕಡ 11.6ರಷ್ಟಿದೆ. ನಂತರದ ಸ್ಥಾನದಲ್ಲಿ ಕೇರಳ (ಶೇ 10.4) ಹಾಗೂ ಕರ್ನಾಟಕ (ಶೇ 8.6) ಇವೆ.

**ಬಾಲಕಿಯರ ಮದುವೆ ಹೆಚ್ಚಳ:** ದೇಶದಲ್ಲಿ ಶೇಕಡ 2.1ರಷ್ಟು ಬಾಲಕಿಯರು ಕಾನೂನು ನಿಗದಿಪಡಿಸಿದ್ದಕ್ಕಿಂತ ವಯಸ್ಸಿಗಿಂತಲೂ ಮೊದಲೇ ಮದುವೆಯಾಗುತ್ತಿದ್ದಾರೆ.

ಉಳಿದಂತೆ 18ರಿಂದ 20ನೇ ವಯಸ್ಸಿಗೆ ಶೇಕಡ 24.5ರಷ್ಟು ತರುಣಿಯರು ವಿವಾಹ ಆಗುತ್ತಿದ್ದು, 21ರ ನಂತರ ವಿವಾಹವಾಗುತ್ತಿರುವವರ ಸಂಖ್ಯೆ ಶೇ 73.5ರಷ್ಟಿದೆ.

ಗ್ರಾಮೀಣ ಭಾಗದಲ್ಲಿ ಈ ಪ್ರಮಾಣವು ಕ್ರಮವಾಗಿ ಶೇ 2.4, ಶೇ 27.4 ಹಾಗೂ ಶೇ 70.2ರಷ್ಟಿದೆ.






ನಗರ ಭಾಗದಲ್ಲಿ ಶೇ 1.1, ಶೇ 16.6 ಹಾಗೂ ಶೇ 82.2ರಷ್ಟಿದೆ.

2024ರಲ್ಲಿ ದೇಶದಾದ್ಯಂತ ಯುವತಿಯರ ಮದುವೆಯ ಸರಾಸರಿ ವಯಸ್ಸು 23.1ರಷ್ಟಿದೆ. ಗ್ರಾಮೀಣ ಭಾಗದಲ್ಲಿ ಸರಾಸರಿ ವಯಸ್ಸು 22.6ರಷ್ಟಿದ್ದರೆ, ನಗರ ಭಾಗದಲ್ಲಿ 24.4ರಷ್ಟಿದೆ.

ಕರ್ನಾಟಕದಲ್ಲಿ ಯುವತಿಯರ ಮದುವೆಯ ಸರಾಸರಿ ವಯಸ್ಸು 24.8 ವರ್ಷ ಇದ್ದರೆ, ಕೇರಳದಲ್ಲಿ 25.1 ವರ್ಷ ಇದೆ.

**ಆಧಾರ:** ಎಸ್‌ಆರ್‌ಎಸ್ ಸಾಂಖ್ಯಿಕ ವರದಿ

Publication Date
09/06/2026

Presented by ಪ್ರಜಾವಾಣಿ

# ಭಾರತ ಯೋಗ ತಂಡಕ್ಕೆ ಸಮಗ್ರ ಪ್ರಶಸ್ತಿ

## ವಿಶ್ವ ಯೋಗಾಸನ ಚಾಂಪಿಯನ್‌ಷಿಪ್‌ಗೆ ತೆರೆ; 102 ಚಿನ್ನದ ಪದಕ ಗೆದ್ದ ಆತಿಥೇಯರು

• ಬಾಲರಾಜ್ ಎಸ್.

**ಅಹಮದಾಬಾದ್:** ಇತಿಹಾಸ ಪ್ರಸಿದ್ಧ ಕಾಂಕಡಿಯಾ ಕೆರೆಯ ತಟದಲ್ಲಿರುವ 'ಏಕ ಅರೇನಾ'ದಲ್ಲಿ ಐದು ದಿನ ನಡೆದ ಮೊತ್ತಮೊದಲ ವಿಶ್ವ ಯೋಗಾಸನ ಚಾಂಪಿಯನ್‌ಷಿಪ್‌ಗೆ (ಡಬ್ಲ್ಯುವೈಸಿ 2026) ಸೋಮವಾರ ತೆರೆಬಿತ್ತು. ಆತಿಥೇಯ ಭಾರತ ತಂಡವು ನಿರೀಕ್ಷೆಯಂತೆ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

79 ದೇಶಗಳ 500ಕ್ಕೂ ಅಧಿಕ ಯೋಗಪಟುಗಳು ಈ 'ಯೋಗಾಸನ ಸಂಭ್ರಮ'ದಲ್ಲಿ ಉತ್ಸಾಹದಿಂದ ಭಾಗಿಯಾದರು. ಜಗತ್ತಿಗೆ ಯೋಗದ ಮಹತ್ವ ಪರಿಚಯಿಸಿದ ಭಾರತವು 'ಸ್ವರ್ಣ ಶತಕ' (102) ಸಾಧಿಸಿತು. 9 ಬೆಳ್ಳಿ ಸೇರಿ 114 ಪದಕಗಳನ್ನು ಗೆದ್ದು ಪದಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆದುಕೊಂಡಿತು. ಜಪಾನ್ ತಲಾ 3 ಚಿನ್ನ, ಬೆಳ್ಳಿಯೊಂದಿಗೆ ರನ್ನರ್‌ಅಪ್ ಆಯಿತು.

ಕಣಿವೆ ರಾಷ್ಟ್ರ ನೇಪಾಳ 1 ಸ್ವರ್ಣ, 36 ಬೆಳ್ಳಿ ಸೇರಿ 52 ಪದಕಗಳನ್ನು ಗೆದ್ದು ಗಮನ ಸೆಳೆಯಿತು. ಉಜ್ಬೇಕಿಸ್ತಾನದ ಸ್ಪರ್ಧಿಗಳು 1 ಚಿನ್ನ, 13 ಬೆಳ್ಳಿ ಹಾಗೂ 11 ಕಂಚಿನ ಪದಕಗಳನ್ನು ಜಯಿಸಿದರು.

ಭಾರತದ ಪ್ರಾಚೀನ ಪರಂಪರೆಯ ಭಾಗವಾಗಿದ್ದ ಯೋಗಾಸನ, ಜಾಗತಿಕ ಮಟ್ಟದಲ್ಲಿ ಕ್ರೀಡಾ ಸ್ಪರ್ಧೆಯಾಗಿ ರೂಪುಗೊಳ್ಳುತ್ತಿರುವುದಕ್ಕೆ ಈ ಚಾಂಪಿಯನ್‌ಷಿಪ್ ಸಾಕ್ಷಿಯಾಯಿತು. ಒಲಿಂಪಿಕ್ ಆಂದೋಲನದ ಭಾಗವಾಗಿಸುವ ಪ್ರಯತ್ನಕ್ಕೆ ಬಲ, ಹುಮ್ಮಸ್ಸು ತುಂಬಿತು.

ಸಾಂಪ್ರದಾಯಿಕ ಯೋಗಾಸನ (ವೈಯಕ್ತಿಕ), ಫಾರ್ವರ್ಡ್ ಬೆಂಡಿಂಗ್, ಬ್ಯಾಕ್ ಬೆಂಡಿಂಗ್, ಕಾಲುಗಳ ಸಮತೋಲನ (ಲೆಗ್ ಬ್ಯಾಲೆನ್ಸ್), ಕೈಗಳ ಸಮತೋಲನ (ಹ್ಯಾಂಡ್ ಬ್ಯಾಲೆನ್ಸ್), ಟ್ವಿಸ್ಟಿಂಗ್ ಬಾಡಿ, ಸುಪೈನ್, ಕಲಾತ್ಮಕ (ವೈಯಕ್ತಿಕ), ಕಲಾತ್ಮಕ (ಡಬಲ್ಸ್), ಕಲಾತ್ಮಕ (ಗುಂಪು), ಲಯಬದ್ಧ ಯೋಗಾಸನ (ಡಬಲ್ಸ್) ಹಾಗೂ ಸಾಂಪ್ರದಾಯಿಕ ಯೋಗಾಸನ (ಗುಂಪು) ಸ್ಪರ್ಧೆಗಳು ಇದ್ದವು. ಫಲಿತಾಂಶದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಎಲೆಕ್ಟ್ರಾನಿಕ್ ಸ್ಕೋರಿಂಗ್ ವ್ಯವಸ್ಥೆ ಪರಿಚಯಿಸಲಾಗಿತ್ತು.

ಸಮಾರೋಪ ಸಮಾರಂಭದಲ್ಲಿ ವರ್ಚುವಲ್ ಆಗಿ ಮಾತನಾಡಿದ ಯೋಗ ಗುರು ಬಾಬಾ ರಾಮದೇವ್, 'ಈ ಚಾಂಪಿಯನ್‌ಷಿಪ್‌ನೊಂದಿಗೆ ಯೋಗಾಸನದ ಜಾಗತಿಕ ಅಭಿಯಾನ ಆರಂಭವಾಗಿದೆ. ಇಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರೂ ಯೋಗಾಸನದ ರಾಯಭಾರಿಯಾಗಿದ್ದಾರೆ' ಎಂದರು.

**ಭಾರತದ ಪ್ರಾಬಲ್ಯ:** ಭಾರತದ ಯೋಗಪಟುಗಳು ಅಂತಿಮದಿನವೂ ಪದಕಬೇಟೆ ಮುಂದುವರಿಸಿದರು. 'ಯೋಗಾಸನ ಲೋಕ'ದಲ್ಲಿ ಅಂಬೆಗಾಲು ಇಡುತ್ತಿರುವ ಜಪಾನ್, ಅರ್ಜೆಂಟೀನಾ, ಸಿಂಗಪುರದ ಸ್ಪರ್ಧಿಗಳೂ ಪೈಪೋಟಿ ನೀಡಿದರು. ಸೀನಿಯರ್ ಮಹಿಳೆಯರ 'ಹ್ಯಾಂಡ್ ಬ್ಯಾಲೆನ್ಸ್' ಸ್ಪರ್ಧೆಯಲ್ಲಿ ಶಿಲ್ಪಾ ದಾಸ್ 45.79 ಸ್ಕೋರ್‌ನೊಡನೆ ಭಾರತಕ್ಕೆ ಚಿನ್ನ ಗೆದ್ದುಕೊಟ್ಟರು. ಕಜಾಕಸ್ತಾನದ ಐಝುನ್ ಕುವಾನಿಶ್‌ಬಯೇವಾ (39.69) ಹಾಗೂ ನೇಪಾಳದ ಚಡ್ಯನ್ ಪಾರಿಯರ್ (35.05) ಕ್ರಮವಾಗಿ ರಜತ ಹಾಗೂ ಕಂಚು ಜಯಿಸಿದರು.

'ಟ್ವಿಸ್ಟಿಂಗ್ ಬಾಡಿ' ಸ್ಪರ್ಧೆಯ ಸೀನಿಯರ್ ಪುರುಷರ ವಿಭಾಗದಲ್ಲಿ ಶುಭಜೀತ್ ಕರ್ಮಾಕರ್ (45.42) ಹಾಗೂ ಸೀನಿಯರ್ ಮಹಿಳೆಯರ ವಿಭಾಗದಲ್ಲಿ ಮಧುವರ್ಮಾ (44.08) ಸ್ವರ್ಣಕ್ಕೆ ಕೊರಳೊಡ್ಡಿದರು. ಸೀನಿಯರ್ ಮಹಿಳೆಯರ 'ಸುಪೈನ್' ಸ್ಪರ್ಧೆಯಲ್ಲಿ ರಿಯಾ ಚಿನ್ನಕ್ಕೆ ಮುತ್ತಿಟ್ಟರು.

### ಡಬ್ಲ್ಯುವೈಸಿ 2026 ಪದಕ ಪಟ್ಟಿ

| ರಾಷ್ಟ್ರ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|
| ಭಾರತ | 102 | 9 | 3 | 114 |
| ಜಪಾನ್ | 3 | 3 | 5 | 11 |
| ಅರ್ಜೆಂಟೀನಾ | 2 | 3 | 0 | 5 |
| ಸಿಂಗಪುರ | 2 | 2 | 3 | 7 |
| ನೇಪಾಳ | 1 | 36 | 15 | 52 |
| ಉಜ್ಬೇಕಿಸ್ತಾನ | 1 | 13 | 11 | 25 |
| ಜಾಂಬಿಯಾ | 1 | 5 | 8 | 14 |
| ಇಂಡೊನೇಷ್ಯಾ | 1 | 2 | 4 | 7 |
| ರಷ್ಯಾ | 1 | 1 | 2 | 4 |
| ಅಮೆರಿಕ | 1 | 0 | 4 | 5 |




ಸಮಗ್ರ ಪ್ರಶಸ್ತಿ ಗೆದ್ದ ಭಾರತದ ಯೋಗಪಟುಗಳು ಮತ್ತು ಕೋಚ್ ಸಿಬ್ಬಂದಿ ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಸಾಯ್ ಚಿತ್ರ

### ವಿರಾಟ್ ಅಭಿಮಾನಿ ನಬಿಲಾಗೆ ಪಂಚ ಪದಕ

ಅರ್ಜೆಂಟೀನಾದ ನಬಿಲಾ ಸೋಲ್ ಬರಾಝಾ ಅವರು ಎರಡು ಚಿನ್ನ ಹಾಗೂ ಮೂರು ಬೆಳ್ಳಿ ಸೇರಿ ಐದು ಪದಕಗಳನ್ನು ಗೆದ್ದು ಅಮೋಘ ಸಾಧನೆ ಮೆರೆದರು. ಈ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದ ಅರ್ಜೆಂಟೀನಾದ ಏಕೈಕ ಯೋಗಪಟುವಾಗಿದ್ದ ಅವರು, ತಮ್ಮ ದೇಶವು ಪದಕಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆಯಲು ಕಾರಣರಾದರು.

ತಾರಾ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ ಅವರ ಹುಟ್ಟೂರು ರೊಸಾರಿಯೊ ಸಮೀಪದ ಹಳ್ಳಿಯೊಂದರಲ್ಲಿ ಜನಿಸಿದ ನಬಿಲಾ, ಯೋಗ ಕಲಿಯಲಿಕ್ಕಾಗಿಯೇ ಐದು ವರ್ಷಗಳ ಹಿಂದೆ ರಿಷಿಕೇಶಕ್ಕೆ ಬಂದಿದ್ದರು. ಸದ್ಯ ಕೊಲಂಬಿಯಾದಲ್ಲಿ 'ಯೋಗ ಗುರು'ವಾಗಿ ಬದುಕು ಕಟ್ಟಿಕೊಂಡಿರುವುದಾಗಿ ಹೇಳಿದರು. ತಾವು ವಿರಾಟ್ ಕೊಹ್ಲಿ ಅವರ ಅಭಿಮಾನಿ ಎಂದೂ ಹೇಳಿಕೊಂಡರು.

30 ವರ್ಷ ವಯಸ್ಸಿನ ನಬಿಲಾ 'ಟ್ವಿಸ್ಟಿಂಗ್ ಬಾಡಿ' ಹಾಗೂ 'ಬ್ಯಾಕ್‌ಬೆಂಡಿಂಗ್' ಸ್ಪರ್ಧೆಗಳಲ್ಲಿ ಸ್ವರ್ಣ ತಮ್ಮದಾಗಿಸಿಕೊಂಡರು.

'ಈ ಬಾರಿ ಅರ್ಜೆಂಟೀನಾದ ಏಕೈಕ ಪ್ರತಿನಿಧಿಯಾಗಿ ಭಾಗವಹಿಸಿದ್ದೇನೆ. ಭವಿಷ್ಯದಲ್ಲಿ ನನ್ನೊಂದಿಗೆ ಹಲವರು ಕೂಡಿಕೊಳ್ಳುವ ವಿಶ್ವಾಸವಿದೆ' ಎಂದರು.

Publication Date
09/06/2026

Presented by

## ❖ 'ಕಾವೇರಿ' ಕ್ವಾಂಟಮ್ ಚಿಪ್: ತಂತ್ರಜ್ಞಾನ ಕ್ಷೇತ್ರದ ಮೈಲಿಗಲ್ಲು

- ಬೆಂಗಳೂರಿನ 'ಕ್ಯುಪಿಐಎಐ' ಸಂಸ್ಥೆಯು ಸಂಪೂರ್ಣ ಸ್ವದೇಶಿ 64- ಕ್ಯುಬಿಟ್ ಸೂಪರ್ ಕಂಡಕ್ಟಿಂಗ್ ಕ್ವಾಂಟಮ್ ಪ್ರೊಸೆಸರ್ 'ಕಾವೇರಿ' ಅನ್ನು ನಿರ್ಮಿಸಿದೆ. ಈ ತಂತ್ರಜ್ಞಾನ ನಿರ್ಮಿಸಿದ ಎಂಟನೇ ರಾಷ್ಟ್ರವಾಗಿ ಭಾರತ ಹೊರ ಹೊಮ್ಮಿದೆ ಎಂದು ಗೃಹ ಮತ್ತು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.
- 'ತಂತ್ರಜ್ಞಾನ ಕ್ಷೇತ್ರದಲ್ಲಿ ಇದೊಂದು ಮಹತ್ವದ ಮೈಲಿಗಲ್ಲಾಗಿದೆ. ಕ್ವಾಂಟಮ್ ಪ್ರೊಸೆಸರ್ ವಿನ್ಯಾಸ ಮತ್ತು ತಯಾರಿಕಾ ಸಾಮರ್ಥ್ಯದ ಕೀರ್ತಿ ಕರ್ನಾಟಕಕ್ಕೂ ಸಲ್ಲುತ್ತದೆ. ಈವರೆಗೆ ಏಳು ದೇಶಗಳು ಮಾತ್ರ ಇಂತಹ ತಂತ್ರಜ್ಞಾನ ಹೊಂದಿದ್ದವು' ಎಂದು ಅವರು 'ಎಕ್ಸ್' ಮೂಲಕ ಪೋಸ್ಟ್ ಮಾಡಿದ್ದಾರೆ.
- 'ಕಾವೇರಿ' ಅತ್ಯಂತ ಶಕ್ತಿಶಾಲಿ ಕ್ವಾಂಟಮ್ ಚಿಪ್ ಆಗಿದೆ. ಇದು ನಿರ್ದಿಷ್ಟ ಸವಾಲುಗಳ ಕ್ಷೇತ್ರಗಳಲ್ಲಿ ಕ್ವಾಂಟಮ್ ವ್ಯವಸ್ಥೆಗಳು ಸಾಂಪ್ರದಾಯಿಕ ಕಂಪ್ಯೂಟರ್‌ಗಳನ್ನು ಮೀರಿಸಲು ಪ್ರಾರಂಭಿಸುವ ಹಂತವಾಗಿ ವಿಜ್ಞಾನಿಗಳು ಜಾಗತಿಕವಾಗಿ ಗುರುತಿಸುವ ನಿರ್ಣಾಯಕ 50 ಕ್ಯುಬಿಟ್ ಮಿತಿಯನ್ನು ದಾಟಿದೆ ಎಂದಿದ್ದಾರೆ.
- 'ಬೆಂಗಳೂರಿನ ತಂತ್ರಜ್ಞಾನ ವ್ಯವಸ್ಥೆಯು ದೇಶಕ್ಕೆ ನೀಡಬಹುದಾದ ಕೊಡುಗೆಗೆ 'ಕಾವೇರಿ' ಒಂದು ನಿದರ್ಶನ. ಕರ್ನಾಟಕವು ಭಾರತದ ಮೊದಲ ವಾಣಿಜ್ಯ ನಿಯೋಜನೆಯ ಕ್ವಾಂಟಮ್ ಕಂಪ್ಯೂಟರ್ ಅನ್ನು ಐಐಐಟಿ ಧಾರವಾಡ ಮತ್ತು ಐಐಐಟಿ-ರಾಯಚೂರುಗಳಲ್ಲಿ ಸ್ಥಾಪಿಸಿದೆ. ಇದು ಐಟಿ-ಬಿಟಿ ಇಲಾಖೆಯ ಲೀಪ್ ಕಾರ್ಯಕ್ರಮದಡಿ ನಡೆದಿದ್ದು, ಭಾರತದ ಕ್ವಾಂಟಮ್ ಕಂಪ್ಯೂಟಿಂಗ್ ಪಯಣದಲ್ಲಿ ರಾಜ್ಯವನ್ನು ಮುಂಚೂಣಿಯಲ್ಲಿರಿಸಿದೆ' ಎಂದು ತಿಳಿಸಿದ್ದಾರೆ.

## ❖ ನೆಹರೂ ದಾಖಲೆ ಮುರಿದ ಪ್ರಧಾನಿ ನರೇಂದ್ರ ಮೋದಿ

- ದೇಶದ ಮೊದಲ ಪ್ರಧಾನಿ ಜವಾಹರ ಲಾಲ್ ನೆಹರೂ ಅವರ ಆಡಳಿತ ಅವಧಿಯ ದಾಖಲೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮೀರಿಸಿರುವ ಕಾರಣ ಎನ್‌ಡಿಎ ಕೂಟವು ಬುಧವಾರ ಸಭೆ ನಡೆಸಿ, ಅಭಿನಂದನಾ ನಿರ್ಣಯವನ್ನು ಅಂಗೀಕರಿಸಲು ಸಜ್ಜಾಗಿದೆ.
- ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಕೇಂದ್ರದಲ್ಲಿ 12 ವರ್ಷಗಳ ಆಡಳಿತ ಪೂರೈಸಿದೆ. 4,399 ದಿನಗಳ ಕಾಲ ಪ್ರಧಾನಿಯಾಗಿ ಮೋದಿ ಅವರು ಕಾರ್ಯನಿರ್ವಹಿಸಿದ್ದಾರೆ. ಈ ಮೂಲಕ ನೆಹರೂ ಅವರಿಗಿಂತ ಒಂದು ದಿನ ಹೆಚ್ಚಿಗೆ ಮೋದಿ ಅವರು ಆಡಳಿತದಲ್ಲಿ ಇದ್ದಂತಾಗಿದೆ. ಹೀಗಾಗಿ ಎನ್‌ಡಿಎ ಕೂಟದ 72-75 ನಾಯಕರ ಉಪಸ್ಥಿತಿಯಲ್ಲಿ ಸಭೆ ನಡೆಸಿ, ಅಭಿನಂದನಾ ನಿರ್ಣಯ ಅಂಗೀಕರಿಸಲು ನಿರ್ಧರಿಸಲಾಗಿದೆ ಎಂದು ಬಿಜೆಪಿಯ ಹಿರಿಯ ಸಚಿವರೊಬ್ಬರು ಹೇಳಿದ್ದಾರೆ.
- ನೆಹರೂ ಅವರನ್ನು 1947ರಲ್ಲಿ ದೇಶದ ಪ್ರಧಾನಿಯಾಗಿ ನಾಮನಿರ್ದೇಶನ ಮಾಡಲಾಗಿತ್ತಾದರೂ ಅಂದಿನಿಂದ 1952ರವರೆಗಿನ ಅವರ ಅಧಿಕಾರದ ಅವಧಿಯನ್ನು ಬಿಜೆಪಿ ಪರಿಗಣಿಸಿಲ್ಲ. ಬದಲಿಗೆ 1952ರ ಮೇ 13ರಂದು ಚುನಾಯಿತ ಪ್ರಧಾನಿಯಾಗಿ ನೆಹರೂ ಅವರು ಅಧಿಕಾರ ವಹಿಸಿಕೊಂಡಾಗಿನಿಂದ 1964ರ ಮೇ 27ರವರೆಗಿನ ಅವರ ಅಧಿಕಾರಾವಧಿಯನ್ನು ಪರಿಗಣಿಸಿದೆ. ಇದರೊಂದಿಗೆ ಅವರು 4398 ದಿನಗಳ ಕಾಲ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದಂತಾಗಿದೆ ಎಂದೂ ಸಚಿವರು ತಿಳಿಸಿದ್ದಾರೆ.
- ಇಂದಿರಾ ಗಾಂಧಿ ಅವರು 14 ವರ್ಷಗಳ ಕಾಲ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ್ದಾರಾದರೂ ನಿರಂತರವಾಗಿ ಅಧಿಕಾರದಲ್ಲಿ ಇರಲಿಲ್ಲ ಎಂದೂ ಸಚಿವ ಹೇಳಿದ್ದಾರೆ.

Dr Rajkumar IAS/KAS Academy

- ❖ **ಕೇಂದ್ರ ವಾಣಿಜ್ಯ, ಕೈಗಾರಿಕೆ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ದರ್ಪಣ್ ಜೈನ್: 12 ವರ್ಷದಲ್ಲಿ ರಫ್ತು ದುಪ್ಪಟ್ಟು: ಕೇಂದ್ರ**

- 'ಕಳೆದ 12 ವರ್ಷಗಳಲ್ಲಿ ದೇಶದ ರಫ್ತು ಪ್ರಮಾಣದ ವಹಿವಾಟು 46 ಸಾವಿರ ಕೋಟಿ ಡಾಲರ್‌ಗಳಿಂದ 90 ಸಾವಿರ ಕೋಟಿ ಡಾಲರ್ ಮುಟ್ಟಿದೆ. ಇದರಲ್ಲಿ ಸೇವಾ ಕ್ಷೇತ್ರದ ರಫ್ತು ವಹಿವಾಟು ಪ್ರಮುಖ ಪಾತ್ರ ವಹಿಸಿದೆ. ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ದರ್ಪಣ್ ಜೈನ್ ತಿಳಿಸಿದರು.
- 'ಮುಕ್ತ ವ್ಯಾಪಾರ ಒಪ್ಪಂದ ಹಾಗೂ ಐಟಿ ಸೇವೆಗಳ ಕ್ಷೇತ್ರದಲ್ಲಿ ಭಾರತದ 12 ವರ್ಷಗಳ ಪ್ರಗತಿ' ಕುರಿತು ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.
- ಕೋವಿಡ್ ಬಿಕ್ಕಟ್ಟು, ಉಕ್ರೇನ್-ರಷ್ಯಾ ನಡುವಿನ ಯುದ್ಧ ಸೇರಿ ಜಾಗತಿಕ ಅನಿಶ್ಚಿತತೆ ನಡುವೆಯೂ ಈ ಸಾಧನೆ ಮಾಡಲಾಗಿದೆ.' ಎಂದರು.
- 'ಮುಕ್ತ ವ್ಯಾಪಾರ ಒಪ್ಪಂದದ ಮೂಲಕ ರಫ್ತಗೆ ಹೆಚ್ಚಿನ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸುವ ಪ್ರಯತ್ನಗಳು ನಡೆದಿವೆ. ಕಳೆದ ಐದು ವರ್ಷದಲ್ಲಿ 38 ದೇಶಗಳ ಜೊತೆಗೆ 9 ಒಪ್ಪಂದಗಳು ಏರ್ಪಟ್ಟಿದ್ದು, ಇದರಿಂದ ಜಾಗತಿಕ ಆರ್ಥಿಕತೆಯ ಒಟ್ಟು 53 ಲಕ್ಷ ಕೋಟಿ ಡಾಲರ್‌ನಷ್ಟು ವಹಿವಾಟು ಭಾರತದ ಮಾರುಕಟ್ಟೆಗೇ ಸಿಗಲಿದೆ. ಜೊತೆಗೆ, 12 ದಶ ಲಕ್ಷ ಕೋಟಿ ಡಾಲರ್‌ನಷ್ಟು ಆಮದು ವಹಿವಾಟಿನೊಂದಿಗೂ ದೇಶವು ಪೈಪೋಟಿ ನಡೆಸಲು ಸಾಧ್ಯವಾಗುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.
- **ತೆರಿಗೆ ಕಡಿತ**: 'ಕೆಲವು ದೇಶಗಳಲ್ಲಿ ಶೇ 12ರಿಂದ 20ರವರೆಗೂ ರಫ್ತು ತೆರಿಗೆ ಪಾವತಿಸಬೇಕಾಗುತ್ತಿತ್ತು. ಆದರೆ ಮುಕ್ತ ವ್ಯಾಪಾರ ಒಪ್ಪಂದದಿಂದ ಈ ತೆರಿಗೆಗಳು ಮನ್ನಾ ಆಗುತ್ತವೆ. ಅನಿಶ್ಚಿತವಾದ ಜಾಗತಿಕ ಸನ್ನಿವೇಶದಲ್ಲಿ ನಮ್ಮ ರಫ್ತುದಾರರಿಗೆ ಇದು ಹೆಚ್ಚಿನ ಅನುಕೂಲ ಕಲ್ಪಿಸುತ್ತದೆ. ಜೊತೆಗೆ ನಮ್ಮ ಉತ್ಪನ್ನಗಳು ಏಕಕಾಲಕ್ಕೆ ಹಲವು ದೇಶಗಳಿಗೆ ಸಲೀಸಾಗಿ ರಫ್ತಾಗುತ್ತವೆ. ವಿಕಸಿತ ಭಾರತ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಜಾರಿಗೊಳಿಸಲು ಇದು ಮುಖ್ಯ' ಎಂದರು.
- 'ಮುಕ್ತ ವ್ಯಾಪಾರ ಒಪ್ಪಂದಕ್ಕೆ ಅನುಕೂಲಕರವಾಗಿಯೇ ಎರಡು ವರ್ಷದ ಹಿಂದೆ ಡಿಜಿಟಲ್ ವೇದಿಕೆಯನ್ನು ರೂಪಿಸಲಾಗಿದೆ. ರಫ್ತುದಾರರಿಗೆ ಏಕಗವಾಕ್ಷಿ ವ್ಯವಸ್ಥೆಯನ್ನು ತರಲಾಗಿದೆ. ಮೊಬೈಲ್ ಆ್ಯಪ್ ಕೂಡ ಕಾರ್ಯನಿರ್ವಹಿಸುತ್ತಿದೆ. ರಫ್ತುದಾರ ಸ್ನೇಹಿ ಯೋಜನೆಗಳನ್ನು ರೂಪಿಸಿರುವುದರ ಪರಿಣಾಮವಾಗಿಯೇ ದೇಶದ ಅಭಿವೃದ್ಧಿಯ ವೇಗವೂ ಹೆಚ್ಚುತ್ತಿದೆ' ಎಂದು ಹೇಳಿದರು.
- 'ಉದ್ದಿಮೆದಾರರಿಗೆ ಉತ್ತೇಜನ''ರಫ್ತು ಕ್ಷೇತ್ರದಲ್ಲಿ ಕರ್ನಾಟಕವು ಇತರೆ ರಾಜ್ಯಗಳಿಗೆ ಹೋಲಿಸಿದರೆ ಮೊದಲ ಸ್ಥಾನದಲ್ಲಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿರುವ ಬೆಂಗಳೂರಿನ ಉದ್ದಿಮೆದಾರರನ್ನು ಉತ್ತೇಜಿಸುವ ಸಲುವಾಗಿಯೇ ನಾಸ್ಕಾಂ ಸಹಯೋಗದಲ್ಲಿ ಸಮಾಲೋಚನಾ ಸಭೆಗಳನ್ನು ನಡೆಸಲಾಗಿದೆ' ಎಂದು ದರ್ಪಣ್ ಜೈನ್ ತಿಳಿಸಿದರು.
- 'ಬೃಹತ್ ಉದ್ದಿಮೆದಾರರು ಹಾಗೂ ಸಣ್ಣ-ಮಧ್ಯಮ ಉದ್ದಿಮೆದಾರರೊಂದಿಗೆ ಪ್ರತ್ಯೇಕವಾಗಿ ಸಭೆಗಳನ್ನು ನಡೆಸಲಾಯಿತು. ರಫ್ತು ಕ್ಷೇತ್ರದಅವಕಾಶಗಳ ಬಗ್ಗೆ ಸರಳವಾಗಿ ವಿವರಿಸಲಾಗಿದೆ. ಹಲವರ ಅನುಮಾನಗಳನ್ನು ಪರಿಹರಿಸಲಾಗಿದೆ. ಇದು ರಫ್ತು ಕ್ಷೇತ್ರದಲ್ಲಿ ಕರ್ನಾಟಕವನ್ನು ಬಲಪಡಿಸುವಲ್ಲಿ ಆರಂಭಿಕ ಪ್ರಯತ್ನ. ರಫ್ತುದಾರರಿಗೆ ಅನುಕೂಲಕರ ವ್ಯವಸ್ಥೆಯನ್ನು ರೂಪಿಸುವ ಈ ಪ್ರಯತ್ನ ಜಾರಿಯಲ್ಲಿರಲಿದೆ' ಎಂದರು.

Dr. Rajkumar IAS/KAS Academy

# ಗೋಸ್ಟ್ ಮರ್ಮರ್: ಕ್ವಾಂಟಂ ವಿಸ್ಮಯ!




• ವಿಕ್ರಮ ಜೋಶಿ

# ವೈರಾಣುಸಂಹಾರಕ್ಕೆ ಪ್ಲಾಸ್ಟಿಕ್ ರಾಳ

• ಬಿಂಡಿಗನವಿಲೆ ಭಗವಾನ್




## ❖ ಪಡಿತರ ವಿತರಣೆ: ಒಂದು ಬಾರಿಯಷ್ಟೇ ಬಯೊಮೆಟ್ರಿಕ್

- ಆಹಾರ ಇಲಾಖೆ ಮೇ ಮತ್ತು ಜೂನ್ ತಿಂಗಳ ಪಡಿತರ ಬಿಡುಗಡೆ ಮಾಡಿದ್ದು, ಒಂದು ಬಾರಿ ಬಯೊಮೆಟ್ರಿಕ್ ನೀಡಿ ಪಡಿತರ ಪಡೆಯಲು ಗ್ರಾಹಕರಿಗೆ ಅವಕಾಶ ನೀಡಿದೆ.
- ಮೊಬೈಲ್ ಬಳಕೆ ಜನಪ್ರಿಯವಾದ ನಂತರ ಪಡಿತರ ವಿತರಣೆಯಲ್ಲಿ ಉಪಯೋಗಿಸುತ್ತಿದ್ದ (ಒನ್ ಟೈಮ್ ಪಾಸ್‌ವರ್ಡ್) ಸೌಲಭ್ಯ ರದ್ದು ಮಾಡಿ ನ್ಯಾಯಬೆಲೆ ಅಂಗಡಿಗಳೂ ಸೇರಿದಂತೆ ರಾಜ್ಯದ ಪಡಿತರ ವಿತರಣಾ ಕೇಂದ್ರಗಳಲ್ಲಿ ಬಯೋಮೆಟ್ರಿಕ್ ನೀಡಿ ಪಡಿತರ ಪಡೆಯಲು ಸೂಚಿಸಲಾಗಿತ್ತು. ಆದರೆ, ಸರ್ವರ್ ಸಮಸ್ಯೆಯಿಂದ ಜನರು ಸಕಾಲದಲ್ಲಿ ಪಡಿತರ ಪಡೆಯಲು ಸಾಧ್ಯವಾಗದೆ ಪರದಾಡುವಂತಾಗಿತ್ತು. ಇದರಿಂದ ಪೂರ್ಣ ಪ್ರಮಾಣದಲ್ಲಿ ಪಡಿತರ ವಿತರಣೆ ಆಗಿರಲಿಲ್ಲ.
- ಎರಡು ತಿಂಗಳ ಪಡಿತರ ವಿತರಣಾ ಕಾರ್ಯ ಜೂನ್ 5ರಿಂದ ಆರಂಭವಾಗಿದ್ದು, ಬೆಳಿಗ್ಗೆ 6ರಿಂದ ರಾತ್ರಿ 10ರವರೆಗೂ ವಿತರಣೆ ಮಾಡಲು, ಎರಡು ಬಾರಿ ಬಯೋಮೆಟ್ರಿಕ್ ಪಡೆಯುವ ಬದಲು, ಒಂದು ಬಾರಿ ಪಡೆದು ಪಡಿತರ ಪದಾರ್ಥಗಳನ್ನು ನೀಡಲು ಸೂಚಿಸಲಾಗಿದೆ.
- ಪಡಿತರ ವಿತರಣೆಯಲ್ಲಿ ಪ್ರಗತಿ ಸಾಧಿಸಲು ಹಿಂದಿನಂತೆ ಒಟಿಪಿ ಅಗತ್ಯವಿದೆ. ಬಯೊಮೆಟ್ರಿಕ್ ವಿನಾಯಿತಿ ಜತೆಗೆ ಒಟಿಪಿಗೂ ಅವಕಾಶ ಮಾಡಿಕೊಡಬೇಕು ಎಂದು ಹಲವು ಗ್ರಾಹಕರು ಒತ್ತಾಯಿಸಿದ್ದರು.

## ❖ ಮಹಿಳೆಯರ ರಕ್ಷಣೆಗೆ 'ಸಿಂಗಪೆಣ್' ಕಾರ್ಯಪಡೆ

- ಮಹಿಳೆಯರಿಗೆ ಭದ್ರತೆ ಒದಗಿಸುವ ಸಲುವಾಗಿ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು'ಸಿಂಗಪೆಣ್' ಎಂಬ ವಿಶೇಷ ಪೊಲೀಸ್ ಪಡೆಯನ್ನು ಸೋಮವಾರ ಉದ್ಘಾಟಿಸಿದರು.
- ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧ ತಡೆಗಟ್ಟಲು ಮತ್ತು ಅವರಿಗೆ ಭದ್ರತೆ ಒದಗಿಸಲು ನಿಯೋಜಿಸಿದ ವಿಶೇಷ ಕಾರ್ಯಪಡೆಯ ಲಾಂಛನವನ್ನು ಅನಾವರಣಗೊಳಿಸಿಅವರು, ವಿಶೇಷ ಗಸ್ತು ವಾಹನಗಳಿಗೆ ಹಸಿರು ನಿಶಾನೆ ತೋರಿಸಿದರು ಮತ್ತು ಅವರೇ ವಾಹನವನ್ನು ಚಾಲನೆ ಮಾಡಿದರು. ರಾಜರಥಿನಂ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ನಡೆಯಿತು.



ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ

# ಮಕ್ಕಳ ಸಂಖ್ಯೆ ಇಳಿಕೆ ವೃದ್ಧರು ಹೆಚ್ಚಳ

ದಕ್ಷಿಣದ ರಾಜ್ಯಗಳು ಸೇರಿದಂತೆ ದೇಶದಲ್ಲಿ ಒಟ್ಟು ಫಲವಂತಿಕೆ ದರದಲ್ಲಿ (ಟಿಎಫ್‌ಆರ್) ಆಗುತ್ತಿರುವ ಕುಸಿತವು ದೇಶದ ಜನಸಂಖ್ಯೆಯ ಮೇಲೆ ಪರಿಣಾಮ ಬೀರುತ್ತಿದೆ. ಕರ್ನಾಟಕವನ್ನೂ ಒಳಗೊಂಡಂತೆ ಇಡೀ ದೇಶದಲ್ಲಿ 15 ವರ್ಷದೊಳಗಿನ ಮಕ್ಕಳ ಜನಸಂಖ್ಯೆಯಲ್ಲಿ ಕುಸಿತ ಆಗಿರುವುದನ್ನು 2023–24ನೇ ಸಾಲಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ದತ್ತಾಂಶಗಳು ತೋರಿಸಿವೆ. ಇದಕ್ಕೆ ಪ್ರತಿಯಾಗಿ 60 ವರ್ಷಕ್ಕಿಂತ ಹೆಚ್ಚು ವಯಸ್ಸಿನವರ ಜನಸಂಖ್ಯೆಯ ಪ್ರಮಾಣದಲ್ಲಿ ಏರಿಕೆ ಕಂಡು ಬಂದಿದೆ

• ಸೂರ್ಯನಾರಾಯಣ ವಿ.

ಕರ್ನಾಟಕವೂ ಸೇರಿದಂತೆ ದೇಶದ ಬಹುತೇಕ ರಾಜ್ಯಗಳಲ್ಲಿ ಐದು ವರ್ಷದೊಳಗಿನ ಮತ್ತು 6ರಿಂದ 15 ವರ್ಷದೊಳಗಿನ ಮಕ್ಕಳ ಜನಸಂಖ್ಯೆಯ ಪ್ರಮಾಣ ಇಳಿಮುಖವಾಗುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ 60 ವರ್ಷಕ್ಕಿಂತ ಹೆಚ್ಚು ವಯಸ್ಸಿನವರ ಜನಸಂಖ್ಯೆ ಹೆಚ್ಚುತ್ತಿದೆ ಎಂಬುದನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಈಚೆಗೆ ಪ್ರಕಟಿಸಿರುವ 2023–24ನೇ ಸಾಲಿನ 6ನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್‌ಎಫ್‌ಎಚ್‌ಎಸ್–6) ದತ್ತಾಂಶಗಳು ಹೇಳುತ್ತಿವೆ.

2019–21ರ ನಡುವೆ ನಡೆದಿದ್ದ 5ನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ವರದಿಯ ಅಂಕಿ ಅಂಶಗಳಿಗೆ ಹೋಲಿಸಿದರೆ ಕರ್ನಾಟಕ ಮತ್ತು ದೇಶದ ಒಟ್ಟು ಫಲವಂತಿಕೆ ದರದಲ್ಲಿ (ಟಿಎಫ್‌ಆರ್) ಹೆಚ್ಚು ಬದಲಾವಣೆ ಆಗಿಲ್ಲ. ಆದರೆ, 10–15 ವರ್ಷಗಳ ದತ್ತಾಂಶಗಳನ್ನು ಅವಲೋಕಿಸಿದರೆ, ಪ್ರಸ್ತುತ ದೇಶದ ಒಟ್ಟು ಫಲವಂತಿಕೆ ದರವು ಗಣನೀಯವಾಗಿ ಕುಗ್ಗಿದೆ. ದೇಶದ ಟಿಎಫ್‌ಆರ್ 2.0ರಷ್ಟಿದೆ. ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ, ನಗರ ಪ್ರದೇಶಗಳ ಅಂಕಿ ಅಂಶಗಳು ಕಳವಳಕಾರಿಯಾಗಿವೆ. 2023–24ರ ವರದಿಯ ಪ್ರಕಾರ, ದೇಶದ ಗ್ರಾಮೀಣ ಭಾಗದಲ್ಲಿ ಟಿಎಫ್‌ಆರ್ 2.1 ರಷ್ಟಿದ್ದರೆ, ನಗರ ಪ್ರದೇಶಗಳಲ್ಲಿ 1.6ರಷ್ಟಿದೆ.

2019–21 ಅವಧಿಗೆ ಹೋಲಿಸಿದರೆ, ಕರ್ನಾಟಕದಲ್ಲಿ 2023–24ರಲ್ಲಿ ಟಿಎಫ್‌ಆರ್ 0.1ರಷ್ಟು ಹೆಚ್ಚಾಗಿದೆ. 2019–21ರಲ್ಲಿ 1.7 ಇದ್ದರೆ, 2023–24ರಲ್ಲಿ ಅದು 1.8ಕ್ಕೆ ಏರಿದೆ. ಗ್ರಾಮೀಣ ಭಾಗದಲ್ಲಿ 1.8 ಇದ್ದರೆ, ನಗರಗಳಲ್ಲಿ ಈ ದರ 1.7ರಷ್ಟಿದೆ. ಇವೆರಡರ ಸರಾಸರಿ ಲೆಕ್ಕಹಾಕುವಾಗ 1.75 ಆಗುತ್ತದೆ. ವರದಿಯಲ್ಲಿ 1.8 ಎಂದು ಉಲ್ಲೇಖಿಸಲಾಗಿದೆ.

**ಜನಸಂಖ್ಯೆಯ ಮೇಲೆ ಪರಿಣಾಮ:** ಒಟ್ಟು ಫಲವಂತಿಕೆ ದರವು ದೇಶ ಮತ್ತು ರಾಜ್ಯದ ಜನಸಂಖ್ಯೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ತಲೆಮಾರುಗಳ ನಡುವೆ ಸ್ಥಿರವಾದ ಜನಸಂಖ್ಯೆಯನ್ನು ಕಾಪಾಡಬೇಕಾದರೆ ಟಿಎಫ್‌ಆರ್ (ಸಂತಾನೋತ್ಪತ್ತಿ ವಯೋಮಾನದ ಪ್ರತಿಯೊಬ್ಬ ಮಹಿಳೆಯು ಮಕ್ಕಳನ್ನು ಪಡೆಯುವ ಸರಾಸರಿ ಸಾಮರ್ಥ್ಯ) ಕನಿಷ್ಠ 2.1ರಷ್ಟು ಇರಬೇಕು. ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಲ್ಲಿ ಟಿಎಫ್‌ಆರ್ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ. ಇದರಿಂದಾಗಿ ಮಕ್ಕಳ ಜನನ ಕಡಿಮೆಯಾಗುವುದರಿಂದ ಮಕ್ಕಳ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ದತ್ತಾಂಶಗಳಲ್ಲಿ ಇದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಎನ್‌ಎಫ್‌ಎಚ್‌ಎಸ್–5ರ ಪ್ರಕಾರ, ಕರ್ನಾಟಕದಲ್ಲಿ 5 ವರ್ಷದೊಳಗಿನ ಮಕ್ಕಳ ಜನಸಂಖ್ಯೆ ಪ್ರಮಾಣ ಶೇ 7ರಷ್ಟಿತ್ತು. ಎನ್‌ಎಫ್‌ಎಚ್‌ಎಸ್–6ರ ವರದಿಯಲ್ಲಿ ಅದು ಶೇ 6.5ಕ್ಕೆ ಇಳಿದಿದೆ (ಶೇ 0.5ರಷ್ಟು ಕುಸಿತ). ಈ ಪ್ರಮಾಣ ಗ್ರಾಮೀಣ ಭಾಗದಲ್ಲಿ ಶೇ 6.3ರಷ್ಟಿದ್ದರೆ, ನಗರ ಪ್ರದೇಶಗಳಲ್ಲಿ ಶೇ 6.8ರಷ್ಟಿದೆ. 15 ವರ್ಷದೊಳಗಿನ ಮಕ್ಕಳ ಜನಸಂಖ್ಯೆಯಲ್ಲಿ ಶೇ 0.9ರಷ್ಟು ಕುಸಿತ ಕಂಡಿದೆ. 2019–21ರಲ್ಲಿ ಶೇ 22.9ರಷ್ಟು ಇದ್ದಿದ್ದರೆ, 2023–24ರಲ್ಲಿ ಶೇ 22ಕ್ಕೆ ಇಳಿದಿದೆ (ಗ್ರಾಮೀಣ ಶೇ 22, ನಗರ ಶೇ 21.9).

ಇದಕ್ಕೆ ವ್ಯತಿರಿಕ್ತವಾಗಿ 60 ವರ್ಷಕ್ಕಿಂತ ಹೆಚ್ಚು ವಯಸ್ಸಿನವರ ಜನಸಂಖ್ಯೆಯಲ್ಲಿ ಗಮನಾರ್ಹ ಹೆಚ್ಚಳ ಕಂಡು ಬಂದಿದೆ. 2019–21ರಲ್ಲಿ ಶೇ 13.3ರಷ್ಟು ಇದ್ದಿದ್ದರೆ, 2023–24ರಲ್ಲಿ ಶೇ 14.6ಕ್ಕೆ ಹೆಚ್ಚಿದೆ. ಅಂದರೆ, ವೃದ್ಧರ ಸಂಖ್ಯೆ ಶೇ 1.3ರಷ್ಟು ಜಾಸ್ತಿಯಾಗಿದೆ.

ಈ ಪ್ರವೃತ್ತಿ ದೇಶದ ಬಹುತೇಕ ರಾಜ್ಯಗಳಲ್ಲಿ ಮತ್ತು ಒಟ್ಟಾರೆ ದೇಶದಲ್ಲಿ ಕಂಡು ಬರುತ್ತಿದೆ.

### ಜನಸಂಖ್ಯೆ ಪ್ರಮಾಣ (%)

ಕರ್ನಾಟಕ / ಭಾರತ

**5 ವರ್ಷದೊಳಗಿನವರು**

| | ಕರ್ನಾಟಕ | ಭಾರತ |
|---|---|---|
| 2019-21 | 7.0 | 8.2 |
| 2023-24 | 6.5 | 8.0 |

**15 ವರ್ಷದೊಳಗಿನವರು**

| | ಕರ್ನಾಟಕ | ಭಾರತ |
|---|---|---|
| 2019-21 | 22.9 | 26.5 |
| 2023-24 | 22.0 | 25.5 |

**60 ವರ್ಷ ಮೇಲ್ಪಟ್ಟವರು**

| | ಕರ್ನಾಟಕ | ಭಾರತ |
|---|---|---|
| 2019-21 | 13.3 | 11.8 |
| 2023-24 | 14.6 | 12.9 |

### ವರದಿಯ ಪ್ರಮುಖ ಅಂಶಗಳು

- ಸಾಂಕ್ರಾಮಿಕವಲ್ಲದ ರೋಗಗಳಿಗೆ ಜನರು ಒಳಗಾಗಿರುವುದು ಹೆಚ್ಚಾಗಿದೆ
- ಪುರುಷರು, ಮಹಿಳೆಯರಲ್ಲಿ ಸ್ಥೂಲಕಾಯ, ಮಧುಮೇಹ, ರಕ್ತದೊತ್ತಡದ ಸಮಸ್ಯೆ ಜಾಸ್ತಿಯಾಗುತ್ತಿದೆ
- ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಇಳಿಮುಖವಾಗಿದೆ
- ತಂಬಾಕು ಸೇವನೆ ಪ್ರಮಾಣವೂ ಇಳಿದಿದೆ
- ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಗಳಲ್ಲಿ ಸುಧಾರಣೆ ಕಂಡು ಬಂದಿದೆ
- ಮಕ್ಕಳಲ್ಲಿ ಅಪೌಷ್ಟಿಕತೆ ಕೊಂಚ ಕಡಿಮೆಯಾಗಿದೆ
- ಹೆಣ್ಣುಮಕ್ಕಳು 10 ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿಗೆ ಶಿಕ್ಷಣ ಪಡೆಯುವ ಪ್ರವೃತ್ತಿ ಹೆಚ್ಚಾಗಿದೆ
- ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಇಂಟರ್‌ನೆಟ್ ಬಳಸುತ್ತಿರುವ ಮಹಿಳೆಯರ ಪ್ರಮಾಣದಲ್ಲಿ ಏರಿಕೆಯಾಗಿದೆ
- ವಿದ್ಯುತ್ ಮತ್ತು ಕುಡಿಯುವ ನೀರಿನ ಸೌಲಭ್ಯ ಹೊಂದಿರುವ ಕುಟುಂಬಗಳ ಸಂಖ್ಯೆ ಹೆಚ್ಚಿದೆ
- ಆರೋಗ್ಯ ವಿಮೆ/ಆರ್ಥಿಕ ಯೋಜನೆಗಳ ವ್ಯಾಪ್ತಿಗೆ ಒಳಪಟ್ಟಿರುವವರ ಪ್ರಮಾಣದಲ್ಲೂ ಏರಿಕೆ ಕಂಡು ಬಂದಿದೆ
- ಬ್ಯಾಂಕ್ ಖಾತೆ ಅಥವಾ ಅಂಚೆ ಉಳಿತಾಯ ಮಾಡಿಸಿಕೊಂಡಿರುವವರ ಸಂಖ್ಯೆಯೂ ಹೆಚ್ಚಾಗಿದೆ

### ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್)– 6

- **715** — 2 ಹಂತಗಳಲ್ಲಿ ಸಮೀಕ್ಷೆ ನಡೆದ ಜಿಲ್ಲೆಗಳ ಸಂಖ್ಯೆ
- **6.79 ಲಕ್ಷ** — ಸಮೀಕ್ಷೆಗಾಗಿ ಸಂಪರ್ಕಿಸಲಾದ ಕುಟುಂಬಗಳು
- **7.16 ಲಕ್ಷ** — ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಮಹಿಳೆಯರು
- **1.01 ಲಕ್ಷ** — ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಪುರುಷರು

**ಸಮೀಕ್ಷೆ ನಡೆದ ಅವಧಿ**

ಮೊದಲ ಹಂತ: 2023ರ ಮೇ 28ರಿಂದ 2025ರ ಫೆ.2024

ಎರಡನೇ ಹಂತ: 2025ರ ಫೆ.7ರಿಂದ –2024ರ ಡಿ.31

### ಕರ್ನಾಟಕದಲ್ಲಿ...

- **27,169** — ಸಮೀಕ್ಷೆಗಾಗಿ ಸಂಪರ್ಕಿಸಲಾದ ಕುಟುಂಬಗಳು
- **26,425** — ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು
- **3,841** — ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಪುರುಷರು
- 2024ರ ಫೆ.23ರಿಂದ 2024 ಅ.24 ಸಮೀಕ್ಷೆ ನಡೆಸಲಾದ ಅವಧಿ

### ಟಿಎಫ್‌ಆರ್: ಎಸ್‌ಆರ್‌ಎಸ್‌ನಲ್ಲಿ ಇನ್ನೂ ಕಡಿಮೆ

ದೇಶ ಮತ್ತು ಕರ್ನಾಟಕದ ಒಟ್ಟು ಫಲವಂತಿಕೆ ದರಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವಾಲಯ ಇತ್ತೀಚೆಗೆ ಬಿಡುಗಡೆ ಮಾಡಿರುವ 2024ನೇ ಸಾಲಿನ ಮಾದರಿ ನೋಂದಣಿ ಸಮೀಕ್ಷೆಯ (ಎಸ್‌ಆರ್‌ಎಸ್) ವರದಿಯು ಕೊಂಚ ಭಿನ್ನ ಅಂಕಿ ಅಂಶಗಳನ್ನು ನೀಡಿದೆ. ಈ ವರದಿ ಕೂಡ ಕರ್ನಾಟಕ ಮತ್ತು ದೇಶದಲ್ಲಿ ಟಿಎಫ್‌ಆರ್ ಇಳಿಕೆಯಾಗಿರುವುದನ್ನು ಉಲ್ಲೇಖಿಸಿದೆ. ಎನ್‌ಎಫ್‌ಎಚ್‌ಎಸ್–6ಕ್ಕೆ ಹೋಲಿಸಿದರೆ ಎಸ್‌ಆರ್‌ಎಸ್–2024ರ ವರದಿಯಲ್ಲಿನ ಟಿಎಫ್‌ಆರ್ ಇನ್ನೂ ಕಡಿಮೆ ಇದೆ. ರಾಷ್ಟ್ರ ಮಟ್ಟದ ಟಿಎಫ್‌ಆರ್ 1.9ರಷ್ಟು (ಗ್ರಾಮೀಣ 2.1, ನಗರ 1.6) ಇದ್ದರೆ, ಕರ್ನಾಟದ ಟಿಎಫ್‌ಆರ್ 1.5ರಷ್ಟಿದೆ (ಗ್ರಾಮೀಣ 1.6 ಮತ್ತು ನಗರ 1.3).

### ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

### 'ಪ್ರಜಾವಾಣಿ' ಆಶಾಕಿರಣ

'ಪ್ರಜಾವಾಣಿ' ಪತ್ರಿಕೆ ನೀಡಿದ ವಿದ್ಯಾರ್ಥಿ ವೇತನದಿಂದ ನನ್ನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂಥ ಪುಸ್ತಕಗಳನ್ನು ಖರೀದಿ ಮಾಡಿದೆ. ನನ್ನಂಥ ಬಡ ವಿದ್ಯಾರ್ಥಿಗಳ ಪಾಲಿಗೆ 'ಪ್ರಜಾವಾಣಿ' ಆಶಾಕಿರಣವಾಗಿದೆ

**ಫಲಕ್ ನಾಜ್,** ಮಂಡ್ಯ

### ಶುಲ್ಕಪಾವತಿಗೆ ಸಹಾಯ

'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನದಿಂದ ನನ್ನ ಕಾಲೇಜು ಶುಲ್ಕ ಪಾವತಿಗೆ ಅನುಕೂಲವಾಗಿದೆ. ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಆರ್ಥಿಕ ನೆರವು ನೀಡುತ್ತಿರುವ ಆಡಳಿತ ಮಂಡಳಿಗೆ ಧನ್ಯವಾದಗಳು

**ಎ.ವೈ. ಕಾರ್ತಿಕ್,** ಕೊಡಿಯಾಲ, ಮಂಡ್ಯ

### ದೇಶದ ಒಟ್ಟು ಫಲವಂತಿಕೆ ದರ

| ಎನ್‌ಎಫ್‌ಎಚ್‌ಎಸ್ | |
|---|---|
| 1 (1992-93) | 3.4 |
| 2 (1998-99) | 2.9 |
| 3 (2005-06) | 2.7 |
| 4 (2015-16) | 2.2 |
| 5 (2019-21) | 2.0 |
| 6 (2023-24) | 2.0 |

| 2023-24ರಲ್ಲಿ ಟಿಆರ್‌ಎಫ್ | |
|---|---|
| ನಗರ | 1.6 |
| ಗ್ರಾಮೀಣ | 2.1 |

### ಕರ್ನಾಟಕದ ಒಟ್ಟು ಫಲವಂತಿಕೆ ದರ

| ಎನ್‌ಎಫ್‌ಎಚ್‌ಎಸ್ | |
|---|---|
| 3 (2005-06) | 2.07 |
| 4 (2015-16) | 1.80 |
| 5 (2019-21) | 1.67 |
| 6 (2023-24) | 1.8 |

| 2023-24ರಲ್ಲಿ ಟಿಆರ್‌ಎಫ್ | |
|---|---|
| ನಗರ | 1.7 |
| ಗ್ರಾಮೀಣ | 1.8 |

### 131ರ ಬದಲು 101 ವಿಷಯಗಳ ಮಾಹಿತಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಈ ಬಾರಿಯ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಲ್ಲಿ ಒಂದು ಪ್ರಮುಖ ಬದಲಾವಣೆಯನ್ನು ಮಾಡಿದೆ. ಇಲ್ಲಿವರೆಗೂ ಜನಸಂಖ್ಯೆ, ಕುಟುಂಬ, ಆರೋಗ್ಯ ಸೇರಿದಂತೆ ವಿವಿಧ ವಿಭಾಗಗಳಲ್ಲಿ 131 ವಿಷಯಗಳಿಗೆ (ಇಂಡಿಕೇಟರ್) ಸಂಬಂಧಿಸಿದ ಅಂಕಿ ಅಂಶಗಳನ್ನು ನೀಡುತ್ತಿತ್ತು. ಈ ಬಾರಿ 101 ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಮಾತ್ರ ಈಗ ಪ್ರಕಟ ಮಾಡಿರುವ ವರದಿಯಲ್ಲಿ (ಫ್ಯಾಕ್ಟ್‌ಶೀಟ್) ನೀಡಿದೆ. ಮರಣ ಪ್ರಮಾಣ, ಜನನ ಪ್ರಮಾಣ, ರಕ್ತ ಹೀನತೆ, ಲಿಂಗ ಅನುಪಾತ ಸೇರಿದಂತೆ ಇನ್ನೂ ಕೆಲವು ಪ್ರಮುಖ ವಿಷಯಗಳಿಗೆ ಸಂಬಂಧಿಸಿದ ವಿವರಗಳನ್ನು ನೀಡಿಲ್ಲ. ಇದಕ್ಕೆ ಆಕ್ಷೇಪವೂ ವ್ಯಕ್ತವಾಗಿದೆ. ಇದಕ್ಕೆ ಸ್ಪಷ್ಟನೆ ನೀಡಿರುವ ಅಧಿಕಾರಿಗಳು ಈ ವರದಿ ಅಂತಿಮವಲ್ಲ ಎಂದು ಹೇಳಿದ್ದಾರೆ.

# ನಗದೀಕರಣ, ಹೂಡಿಕೆ ಹಿಂತೆಗೆತಕ್ಕೆ ಬಲ?

## ‘ಆಮದು ವೆಚ್ಚ ಜಾಸ್ತಿಯಾಗಿದ್ದರೂ ವಿತ್ತೀಯ ಕೊರತೆ ಮಿತಿ ತಪ್ಪದು’

ನವದೆಹಲಿ (ಪಿಟಿಐ): ಆರ್ಥಿಕ ಸುಧಾರಣಾ ಕ್ರಮಗಳು, ಹೂಡಿಕೆ ಹಿಂತೆಗೆತ ಹಾಗೂ ಆಸ್ತಿ ನಗದೀಕರಣದ ಯೋಜನೆಗಳಿಗೆ ಇನ್ನಷ್ಟು ಬಲ ನೀಡುವ ಉದ್ದೇಶ ಕೇಂದ್ರ ಸರ್ಕಾರಕ್ಕೆ ಇದೆ ಎಂದು ಮೂಲಗಳು ಹೇಳಿವೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದಾಗಿ ಇಂಧನ ಹಾಗೂ ರಸಗೊಬ್ಬರ ವೆಚ್ಚ ಜಾಸ್ತಿ ಆಗಿರುವುದರ ನಡುವೆ, ದೇಶದ ಆರ್ಥಿಕ ಬೆಳವಣಿಗೆ ದರವನ್ನು ಕಾಪಾಡಿಕೊಳ್ಳುವ ಬಯಕೆ ಕೇಂದ್ರ ಸರ್ಕಾರದ್ದಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಬೆಳವಣಿಗೆಗೆ ಧಕ್ಕೆ ಆಗಿಲ್ಲ. ಆದರೆ ಬಾಹ್ಯ ಸವಾಲುಗಳು ಎದುರಾಗಿವೆ...

**ಮುಖ್ಯಾಂಶಗಳು**

- ಬಂಡವಾಳ ಮಾರುಕಟ್ಟೆಗಳ ವ್ಯಾಪ್ತಿ ಹೆಚ್ಚಿಸುವ ಗುರಿ
- ಬಂಡವಾಳ ಹೊರಹರಿವು ನಿರ್ಬಂಧಿಸುವ ಉದ್ದೇಶ ಇಲ್ಲ

ಆರ್ಥಿಕ ಬೆಳವಣಿಗೆ ದರವು ಒಂದು ತ್ರೈಮಾಸಿಕದಿಂದ ಇನ್ನೊಂದು ತ್ರೈಮಾಸಿಕಕ್ಕೆ ಹೆಚ್ಚುತ್ತಿದೆ. ದೇಶಿ ಅರ್ಥ ವ್ಯವಸ್ಥೆಯು ಚೆನ್ನಾಗಿಯೇ ಇದೆ, ಬೇಡಿಕೆಯು ಕಡಿಮೆ ಆಗಿಲ್ಲ’ ಎಂದು




ಮೂಲವು ಹೇಳಿದೆ.

ಬಂಡವಾಳ ಮಾರುಕಟ್ಟೆಗಳ ವ್ಯಾಪ್ತಿಯನ್ನು ಹೆಚ್ಚಿಸುವ ಹಾಗೂ ದೀರ್ಘಾವಧಿಗೆ ವಿದೇಶಿ ಬಂಡವಾಳವನ್ನು ಆಕರ್ಷಿಸುವ ಗುರಿಯೊಂದಿಗೆ ಹಣಕಾಸು ವಲಯದಲ್ಲಿ ಸುಧಾರಣೆಗಳನ್ನು ತರುವ ಕೆಲಸವನ್ನು ಸರ್ಕಾರ ಮುಂದುವರಿಸಲಿದೆ ಎಂದು ಹೇಳಿದೆ.

ಸರ್ಕಾರವು ಹೆಚ್ಚಿನ ಸಾಲ ಮಾಡಬೇಕಾದ ಅಥವಾ ಪೂರಕ ವೆಚ್ಚಗಳಿಗೆ ಮುಂಗಾರು ಅಧಿವೇಶನದಲ್ಲಿ ಸಂಸತ್ತಿನ ಒಪ್ಪಿಗೆ ಪಡೆದುಕೊಳ್ಳಬೇಕಾದ ಅಗತ್ಯವೇನೂ ತಕ್ಷಣಕ್ಕೆ ಕಾಣುತ್ತಿಲ್ಲ... ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಕಂಡುಬಂದ ಬೆಳವಣಿಗೆ ಪ್ರಮಾಣವು ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿಯೂ ಮುಂದುವರಿದಿದೆ ಎಂದು ತಿಳಿಸಿದೆ.

‘ವಿದೇಶಗಳಲ್ಲಿ ಇರುವ ಭಾರತ ಮೂಲದವರು ಭಾರತಕ್ಕೆ ಹಣ ರವಾನೆ ಮಾಡುವ ಪ್ರಮಾಣ ಕೂಡ ಕಡಿಮೆಯಾದ ಸೂಚನೆಗಳು ಇಲ್ಲ’ ಎಂದು ಅಧಿಕಾರಿ ತಿಳಿಸಿದ್ದಾರೆ.

ಆಮದು ವೆಚ್ಚಗಳು ಜಾಸ್ತಿ ಆಗಿದ್ದರೂ ಪ್ರಸಕ್ತ ಹಣಕಾಸು ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಒಟ್ಟು ಜಿಡಿಪಿಯ ಶೇ 4.3ಕ್ಕೆ ಮಿತಿಗೊಳಿಸುವ ಗುರಿ ತಲುಪಲು ಕೂಡ ಸಾಧ್ಯವಿದೆ ಎಂದು ಅವರು ಹೇಳಿದ್ದಾರೆ. ತೆರಿಗೆ ಮೂಲವಷ್ಟೇ ಅಲ್ಲದೆ ತನ್ನ ವರಮಾನವನ್ನು ಹೆಚ್ಚಿಸಿಕೊಳ್ಳಲು ಕೇಂದ್ರ ಸರ್ಕಾರವು ಹೂಡಿಕೆ ಹಿಂತೆಗೆತ ಹಾಗೂ ಆಸ್ತಿ ನಗದೀಕರಣದ ಮಾರ್ಗಗಳನ್ನೂ ಪರಿಶೀಲಿಸುತ್ತಿದೆ ಎನ್ನಲಾಗಿದೆ.

ಐಡಿಬಿಐ ಬ್ಯಾಂಕ್‌ನಲ್ಲಿ ಸರ್ಕಾರ ತಾನು ಹೊಂದಿರುವ ಷೇರುಗಳನ್ನು ಮಾರಾಟ ಮಾಡುವ ಪ್ರಕ್ರಿಯೆಗೆ ಚುರುಕು ನೀಡುವ ನಿರೀಕ್ಷೆ ಇದೆ.

ಮುಂಗಾರು ಹಂಗಾಮಿನ ಪರಿಣಾಮಗಳು ಸ್ಪಷ್ಟವಾದ ನಂತರದಲ್ಲಿ ದೇಶದ ಅರ್ಥವ್ಯವಸ್ಥೆಯ ಸ್ಥಿತಿಯ ಬಗ್ಗೆ ಜುಲೈನಲ್ಲಿ ಮರು ಅವಲೋಕನ ಮಾಡಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿದೇಶಿ ಬಂಡವಾಳ ಆಕರ್ಷಣೆಯ ಉದ್ದೇಶದಿಂದ ಸರ್ಕಾರ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆಯೂ ಇದೆ. ಆದರೆ, ವಿದೇಶಿ ಬಂಡವಾಳದ ಹೊರಹರಿವು ನಿರ್ಬಂಧಿಸುವ ಯಾವುದೇ ಉದ್ದೇಶ ಸದ್ಯಕ್ಕೆ ಇಲ್ಲ ಎಂದು ಗೊತ್ತಾಗಿದೆ.

Publication Date
10/06/2026

Presented by ಪ್ರಜಾವಾಣಿ

### ಡಾರ್ಕ್ ಪ್ಯಾಟರ್ನ್ ಅನುಸರಿಸುತ್ತಿರುವ ವಿವಿಧ ಕಂಪನಿಗಳು

# ವರ್ಷಕ್ಕೆ ₹28 ಸಾವಿರ ಕೋಟಿ ನಷ್ಟ

ನವದೆಹಲಿ (ಪಿಟಿಐ): ಗ್ರಾಹಕರ ಕಣ್ಣಿಗೆ ಮಣ್ಣೆರಚುವ ಉದ್ದೇಶದಿಂದ ಆನ್‌ಲೈನ್ ಮಾರುಕಟ್ಟೆಗಳಲ್ಲಿ ಚಾಲ್ತಿಗೆ ತಂದಿರುವ ಕೆಲವು ಪದ್ಧತಿಗಳ ಪರಿಣಾಮವಾಗಿ ಗ್ರಾಹಕರು ವರ್ಷಕ್ಕೆ ₹28 ಸಾವಿರ ಕೋಟಿವರೆಗೆ ನಷ್ಟ ಅನುಭವಿಸುತ್ತಿದ್ದಾರೆ ಎಂದು ವರದಿಯೊಂದು ಹೇಳಿದೆ.

ಮಾರುಕಟ್ಟೆ ಸಂಶೋಧನಾ ಸಂಸ್ಥೆ ‘ಡಾಟಂ ಇಂಟೆಲಿಜೆನ್ಸ್’ ಈ ವರದಿ ಸಿದ್ಧಪಡಿಸಿದೆ. ‘ದೇಶದಲ್ಲಿ 30.4 ಕೋಟಿ ಮಂದಿ ಆನ್‌ಲೈನ್ ವೇದಿಕೆಗಳ ಮೂಲಕ ಉತ್ಪನ್ನಗಳನ್ನು ಖರೀದಿಸುತ್ತಾರೆ. ಇವರ ಪೈಕಿ ಶೇ 88ರಷ್ಟು ಮಂದಿ ಮರೆಮಾಚಿದ ಶುಲ್ಕಗಳು, ಒತ್ತಾಯದಿಂದಾಗಿ ಖರೀದಿ ಬುಟ್ಟಿಗೆ ಸೇರುವ ಉತ್ಪನ್ನಗಳು, ಚಂದಾದಾರಿಕೆ, ಉತ್ಪನ್ನದ ಬೆಲೆಯನ್ನು ಕಡಿಮೆ ಮಟ್ಟದಲ್ಲಿ ತೋರಿಸುವುದು ಮುಂತಾದ ತಂತ್ರಗಳ ಕಾರಣದಿಂದಾಗಿ ಪ್ರತಿ ತಿಂಗಳು ತಲಾ ₹87ರಷ್ಟು ಕಳೆದು ಕೊಳ್ಳುತ್ತಿದ್ದಾರೆ’ ಎಂದು ವರದಿ ಹೇಳಿದೆ.

‘ಈಗ ಚಾಲ್ತಿಯಲ್ಲಿರುವ ನಿಯಮಗಳು, ಲಕ್ಷಾಂತರ ಮಂದಿ ಗ್ರಾಹಕರ ಮೇಲೆ ಪರಿಣಾಮ ಬೀರುವ ಡಿಜಿಟಲ್ ಮೋಸದ ಇಂತಹ ಪದ್ಧತಿ ಹತ್ತಿಕ್ಕುವಲ್ಲಿ ಸೀಮಿತವಾದ ಯಶಸ್ಸನ್ನು ಮಾತ್ರ ಕಂಡಿವೆ’ ಎಂದು ವರದಿ ತಿಳಿಸಿದೆ.

ಮೊದಲು ಮರೆಮಾಚಲಾಗಿದ್ದ ಕೆಲವು ಶುಲ್ಕಗಳು ಉತ್ಪನ್ನಗಳ ಖರೀದಿಯ ಅಂತಿಮ ಹಂತದಲ್ಲಿ ಕಾಣಿಸಿಕೊಳ್ಳುತ್ತಿರುವುದು ಈಗ ಶೇ 63ರಷ್ಟು ಗ್ರಾಹಕರ ಅನುಭವಕ್ಕೆ ಬಂದಿದೆ. ಅಲ್ಲದೆ ಶೇ 73ರಷ್ಟು ವೇದಿಕೆಗಳು ಗ್ರಾಹಕರು ನಿರ್ದಿಷ್ಟ ಬಗೆಯ ತೀರ್ಮಾನ ತೆಗೆದುಕೊಳ್ಳಬೇಕಾದ ಒತ್ತಡವನ್ನು ಸೃಷ್ಟಿಸುತ್ತಿವೆ.

ಈ ವರದಿಯು ಇ–ವಾಣಿಜ್ಯ, ಕ್ವಿಕ್–ಕಾಮರ್ಸ್ ಹಾಗೂ ಆನ್‌ಲೈನ್ ಮೂಲಕ ಪ್ರವಾಸ ಸೇವೆ ಒದಗಿಸುವ ಒಟ್ಟು 12 ವೇದಿಕೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿತ್ತು. ಅಧ್ಯಯನವನ್ನು ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ನಡೆಸಲಾಗಿದೆ, 50 ನಗರಗಳ 2,590 ಗ್ರಾಹಕರಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ.

ಇ–ವಾಣಿಜ್ಯ ವೇದಿಕೆಗಳ ಪೈಕಿ ಅಮೆಜಾನ್ ಹೆಚ್ಚು ವಿಶ್ವಾಸಾರ್ಹ ಎಂದು ಗ್ರಾಹಕರು ಅಭಿಪ್ರಾಯ ದಾಖಲಿಸಿದ್ದಾರೆ. ತಮ್ಮ ಮೊದಲ ಆಯ್ಕೆ ಅಮೆಜಾನ್ ಎಂದು ಶೇ 50ರಷ್ಟು ಮಂದಿ ಗ್ರಾಹಕರು ಹೇಳಿ ದ್ದಾರೆ. ಫ್ಲಿಪ್‌ಕಾರ್ಟ್ ಬಗ್ಗೆ ವಿಶ್ವಾಸ ವ್ಯಕ್ತ ಪಡಿಸಿದ ಗ್ರಾಹಕರ ಪ್ರಮಾಣಕ್ಕಿಂತ (ಶೇ 37ರಷ್ಟು) ಅವಿಶ್ವಾಸ ವ್ಯಕ್ತಪಡಿಸಿದ ಗ್ರಾಹಕರ (ಶೇ 41ರಷ್ಟು) ಪ್ರಮಾಣ ಜಾಸ್ತಿ ಇದೆ.

Publication Date
10/06/2026

Presented by ಪ್ರಜಾವಾಣಿ

## ❖ ಭಾರತದ ಮಾವಿಗೆ ನೇಪಾಳ ನಿರ್ಬಂಧ

- ಅತಿಯಾದ ಕ್ರಿಮಿನಾಶಕ ಬಳಕೆ ಮಾಡಲಾಗುತ್ತಿದೆ ಎಂಬ ಕಾರಣ ನೀಡಿ ಭಾರತದಿಂದ ಮಾವು ಆಮದು ಮಾಡಿಕೊಳ್ಳುವುದಕ್ಕೆ ನೇಪಾಳ ನಿರ್ಬಂಧ ವಿಧಿಸಿದೆ.
- ಇದರಿಂದ, ಸ್ಥಳೀಯ ಮಾರುಕಟ್ಟೆ ಗಳಲ್ಲಿ ಭಾರತದ ಮಾವುಗಳೊಂದಿಗೆ ಸ್ಪರ್ಧೆ ಇಲ್ಲದೆ ನೇಪಾಳದ ರೈತರು ಅನುಕೂಲ ಪಡೆಯುತ್ತಿದ್ದಾರೆ.
- 'ಈ ಋತುವಿನಲ್ಲಿ ಮಾವಿನ ಹಣ್ಣಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಸರ್ಕಾರವು ಸ್ಥಳೀಯ ಮಾವಿಗೆ ಪ್ರಾಮುಖ್ಯ ನೀಡುತ್ತಿದೆ. ಹೀಗಾಗಿ ಇದು ಸಕಾರಾತ್ಮಕ ಬೆಳವಣಿಗೆ' ಎಂದು ಕೃಷಿ ಇಲಾಖೆಯ ಮಾಹಿತಿ ಅಧಿಕಾರಿ ಅಜಯ್ ಗ್ಯಾವಾಲಿ ಅವರು ಹೇಳಿದರು.

# 12 ಅಣ್ವಸ್ತ್ರ ಸಿಡಿತಲೆ ನಿಯೋಜನೆ

## ಭಾರತದ ಬತ್ತಳಿಕೆಯಲ್ಲಿ 190 ಆಯುಧಗಳು

## • ಯುದ್ಧ ಸನ್ನದ್ಧತೆ– ನೀತಿಯಲ್ಲಿ ಬದಲಾವಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಅಣ್ವಸ್ತ್ರ ಸಿಡಿತಲೆಗಳ ನಿಯೋಜನೆಯೂ ಸೇರಿ ಯುದ್ಧ ಸನ್ನದ್ಧತೆಗೆ ಸಂಬಂಧಿಸಿದ ತನ್ನ ನೀತಿಯಲ್ಲಿ ಗಮನಾರ್ಹ ಬದಲಾವಣೆ ಮಾಡಿಕೊಂಡಿರುವ ಭಾರತ, ಈ ವಿನಾಶಕಾರಿ ಶಸ್ತ್ರಾಸ್ತ್ರಗಳಿಗಾಗಿ ಮಾಡುವ ವೆಚ್ಚವನ್ನು ಕೂಡ ಹೆಚ್ಚಿಸಿದೆ. 12 ಅಣ್ವಸ್ತ್ರ ಸಿಡಿತಲೆಗಳನ್ನು ನಿಯೋಜನೆ, ದಾಳಿ ಮಾಡುವುದಕ್ಕಾಗಿ ಹೊಸ ಬಗೆಯ ಆಯುಧಗಳ ಅಭಿವೃದ್ಧಿಗೂ ಭಾರತ ಒತ್ತು ನೀಡಿದೆ...'

'ಚೀನಾದ ಯಾವುದೇ ಸ್ಥಳವನ್ನು ನಿಖರವಾಗಿ ತಲುಪಿ, ನಾಶ ಮಾಡುವ ಸಾಮರ್ಥ್ಯವಿರುವ ಆಯುಧಗಳನ್ನು ಅಭಿವೃದ್ಧಿಪಡಿಸಲು ಭಾರತ ಒತ್ತು ನೀಡಿದೆ. ತನ್ನೊಂದಿಗೆ ನಿರಂತರ ಹಗೆತನ ಸಾಧಿಸುತ್ತಿರುವ ಪಾಕಿಸ್ತಾನದಿಂದ ಎದುರಾಗಬಹುದಾದ ಬೆದರಿಕೆಗೆ ತಕ್ಕ ಉತ್ತರ ನೀಡುವುದಕ್ಕೂ ಗಮನ ಕೇಂದ್ರೀಕರಿಸಿರುವ ಭಾರತ, ಸಶಸ್ತ್ರ ಪಡೆಗಳ ಆಧುನೀಕರಣಕ್ಕೆ ಗಮನಹರಿಸಿದೆ. ಇದೇ ಜನವರಿಗೆ ಅಂತ್ಯವಾದ ಅವಧಿಯಂತೆ, ಭಾರತದ ಬತ್ತಳಿಕೆಯಲ್ಲಿ 190 ಅಣ್ವಸ್ತ್ರ ಸಿಡಿತಲೆಗಳಿವೆ. ನೆರೆಯ ಪಾಕಿಸ್ತಾನವು 170 ಸಿಡಿತಲೆಗಳನ್ನು ಹೊಂದಿದೆ...'

'ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್' (ಎಸ್‌ಐಪಿಆರ್‌ಐ) ಸೋಮವಾರ ಬಿಡುಗಡೆ ಮಾಡಿರುವ ವಾರ್ಷಿಕ ವರದಿಯಲ್ಲಿ ಈ ಮಾಹಿತಿ ಇದೆ.

ಭಾರತ ಸೇರಿದಂತೆ ವಿಶ್ವದ ಹಲವು



### ಪ್ರಮುಖ ದೇಶಗಳ ಸಾಮರ್ಥ್ಯ
(ಇದೇ ವರ್ಷ ಜನವರಿ ವರೆಗೆ)

| ದೇಶ | ಅಣ್ವಸ್ತ್ರ ಸಿಡಿತಲೆಗಳು | |
|---|---|---|
| | ನಿಯೋಜಿತ | ಒಟ್ಟು |
| ರಷ್ಯಾ | 1,796 | 4,400 |
| ಅಮೆರಿಕ | 1,770 | 3,700 |
| ಚೀನಾ | 34 | 620 |
| ಫ್ರಾನ್ಸ್ | 280 | 290 |
| ಬ್ರಿಟನ್ | 120 | 225 |
| ಭಾರತ | 12 | 190 |
| ಪಾಕಿಸ್ತಾನ | - | 170 |
| ಇಸ್ರೇಲ್ | - | 90 |
| ಉ. ಕೊರಿಯಾ | - | 60 |

ರಾಷ್ಟ್ರಗಳು ಅಣ್ವಸ್ತ್ರಗಳಿಗೆ ಸಂಬಂಧಿಸಿ ಮಾಡುತ್ತಿರುವ ವೆಚ್ಚ, ವಿವಿಧ ರಾಷ್ಟ್ರಗಳು ಹೊಂದಿರುವ ಅಣ್ವಸ್ತ್ರ ಸಿಡಿತಲೆಗಳು, ಕೆಲ ರಾಷ್ಟ್ರಗಳ ನಡುವಿನ ಸಂಘರ್ಷಗಳಲ್ಲಿ ಮೃತಪಟ್ಟವರ ಸಂಖ್ಯೆ ಸೇರಿ ಹಲವು ವಿವರಗಳನ್ನು ಈ ವರದಿ ಒಳಗೊಂಡಿದೆ.

ಪಾಕಿಸ್ತಾನವು ಕಳೆದ ವರ್ಷ ಪರಮಾಣು ಬಾಂಬ್‌ಗಳ ತಯಾರಿಕೆಗೆ ಅಗತ್ಯವಿರುವ ಸಾಮಗ್ರಿಗಳ ಸಂಗ್ರಹ ಹೆಚ್ಚಿಸಿದೆ. ಅಣ್ವಸ್ತ್ರಗಳ ಉಡ್ಡಯನಕ್ಕೆ ಬೇಕಾದ ವ್ಯವಸ್ಥೆಗಳ ಅಭಿವೃದ್ಧಿ ಕಾರ್ಯವನ್ನು ತ್ವರಿತಗೊಳಿಸಿದೆ. ಬರುವ ದಶಕಗಳಲ್ಲಿ ಪಾಕಿಸ್ತಾನವು ತನ್ನ ಅಣ್ವಸ್ತ್ರ ಕಾರ್ಯಕ್ರಮವನ್ನು ವಿಸ್ತರಿಸುವುದರ ಸೂಚನೆ ಇದಾಗಿದೆ ಎಂದು ವರದಿಯು ವಿಶ್ಲೇಷಿಸಿದೆ.

'ಕಳೆದ ವರ್ಷ ಮೇನಲ್ಲಿ ಭಾರತವು ಪಾಕಿಸ್ತಾನದ ವಾಯು ನೆಲೆ ಮತ್ತು ಕ್ಷಿಪಣಿ ಉಡ್ಡಯನ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿತ್ತು. ಈ ದಾಳಿಯು ಪರಮಾಣು ಅಸ್ತ್ರಗಳನ್ನು ಒಳಗೊಂಡಿದ್ದ ಸಾಧ್ಯತೆಯೂ ಇತ್ತು. ಇದೇ ಕಾರಣಕ್ಕೆ, ಉಭಯ ದೇಶಗಳು ಕದನ ವಿರಾಮ ಘೋಷಣೆಗೆ ಮುಂದಾದವು' ಎಂದೂ ವರದಿಯಲ್ಲಿ ಹೇಳಲಾಗಿದೆ.

### ಆಯಕಟ್ಟಿನ ಸ್ಥಳಗಳಲ್ಲಿ ನಿಯೋಜನೆ

ಬದಲಾಗುತ್ತಿರುವ ಭೌಗೋಳಿಕ ರಾಜಕೀಯ ಹಾಗೂ ಅಪಾಯದ ತೀವ್ರತೆ ಕಾರಣದಿಂದ ಭಾರತ ಇದೇ ಮೊದಲ ಬಾರಿಗೆ 12 ಅಣ್ವಸ್ತ್ರ ಸಿಡಿತಲೆಗಳನ್ನು ತನ್ನ ಆಯಕಟ್ಟಿನ ಸ್ಥಳಗಳಲ್ಲಿ ನಿಯೋಜನೆ ಮಾಡಿದ್ದು, ದಾಳಿಗೆ ಅವುಗಳನ್ನು ಸಜ್ಜುಗೊಳಿಸಿದೆ ಎಂದು ಎಸ್‌ಐಪಿಆರ್‌ಐ ವರದಿಯಲ್ಲಿ ಹೇಳಲಾಗಿದೆ.

'ಇತ್ತೀಚಿನ ವರ್ಷಗಳಲ್ಲಿ ಯುದ್ಧ ಸನ್ನದ್ಧತೆಗೆ ಹೆಚ್ಚು ಒತ್ತು ನೀಡುತ್ತಿರುವ ಭಾರತ, ದಾಳಿಗೆ ಸಿದ್ಧವಾಗಿರುವಂತೆ ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತ ಕ್ಷಿಪಣಿಗಳನ್ನು ನಿಯೋಜಿಸಿದೆ. ಯುದ್ಧವಿಮಾನಗಳು ಹಾಗೂ ನೆಲದಿಂದ ಉಡ್ಡಯನ ಮಾಡಬಲ್ಲ ಕ್ಷಿಪಣಿಗಳಲ್ಲಿ ಮಾತ್ರವಲ್ಲ, ಜಲಾಂತರ್ಗಾಮಿಗಳಲ್ಲಿ (ಎಸ್‌ಎಸ್‌ಬಿಎನ್) ಕೂಡ ಅಣ್ವಸ್ತ್ರ ಸಿಡಿತಲೆಗಳನ್ನು ಅಳವಡಿಸಿದೆ' ಎಂದು ವರದಿ ವಿವರಿಸಿದೆ.

### 'ಬದಲಾದ ನೀತಿ'

ಈ ಹಿಂದೆ, ಸಂಘರ್ಷವಿಲ್ಲದ ಸಮಯದಲ್ಲಿ ಅಣ್ವಸ್ತ್ರ ಸಿಡಿತಲೆಗಳು ಹಾಗೂ ಲಾಂಚರ್‌ಗಳನ್ನು ಪ್ರತ್ಯೇಕವಾಗಿ ಇರಿಸಲಾಗುತ್ತಿತ್ತು. ಈ ವಿಚಾರದಲ್ಲಿಯೂ ಭಾರತ ತನ್ನ ನೀತಿಯನ್ನು ಬದಲಾಯಿಸಿದೆ. ಇತ್ತೀಚೆಗೆ ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತ ಕ್ಷಿಪಣಿಗಳನ್ನು ಯುದ್ಧನೌಕೆಗಳಲ್ಲಿ ಇರಿಸಿ, ಗಸ್ತು ಹೆಚ್ಚಿಸಲಾಗಿದೆ ಎಂದು ಎಸ್‌ಐಪಿಆರ್‌ಐ ಹೇಳಿದೆ.

ಕಳೆದ ವರ್ಷ ಭಾರತ ಮತ್ತು ಪಾಕಿಸ್ತಾನ ನಡುವೆ 'ಅಸಾಧಾರಣ ಸೇನಾ ಬಿಕ್ಕಟ್ಟು' ಕಂಡುಬಂದಿತ್ತು. ಭಾರತವು ತನ್ನ ಅಣ್ವಸ್ತ್ರ ನೀತಿಯಲ್ಲಿ ಬದಲಾವಣೆ ಮಾಡಿಕೊಳ್ಳಲು ಈ ಬೆಳವಣಿಗೆಯೂ ಕಾರಣ ಎಂದು ವಿಶ್ಲೇಷಿಸಲಾಗಿದೆ.

### ₹8 ಲಕ್ಷ ಕೋಟಿ ವೆಚ್ಚ

ಭಾರತವು ತನ್ನ ಸಶಸ್ತ್ರ ಪಡೆಗಳಿಗೆ ಶಸ್ತ್ರಾಸ್ತ್ರಗಳನ್ನು ಖರೀದಿಸುವುದಕ್ಕಾಗಿ ಕಳೆದ ವರ್ಷ 92.1 ಶತಕೋಟಿ ಡಾಲರ್ (ಅಂದಾಜು ₹8 ಲಕ್ಷ ಕೋಟಿ) ವ್ಯಯಿಸಿದೆ. ಅದರ ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ, ಈ ವೆಚ್ಚದಲ್ಲಿ ಶೇ8.9ರಷ್ಟು ಏರಿಕೆ ಕಂಡುಬಂದಿದೆ. ಸೇನೆಗಾಗಿ ವೆಚ್ಚ ಮಾಡುವ ವಿಚಾರದಲ್ಲಿ ಭಾರತವು ಜಗತ್ತಿನಲ್ಲಿ 5ನೇ ಸ್ಥಾನದಲ್ಲಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

### ಪ್ರಮುಖ ಅಂಶಗಳು

- ಅಮೆರಿಕ 2025ರಲ್ಲಿ ಸೇನೆಗಳಿಗಾಗಿ 954 ಶತಕೋಟಿ ಡಾಲರ್ (ಅಂದಾಜು ₹90 ಲಕ್ಷ ಕೋಟಿ) ವೆಚ್ಚ ಮಾಡಿದೆ. ಇದು ವಿಶ್ವದಲ್ಲಿಯೇ ಒಂದು ರಾಷ್ಟ್ರ ಮಾಡಿರುವ ಗರಿಷ್ಠ ವೆಚ್ಚ
- 2025ರಲ್ಲಿ ಸೇನೆಗೆ ಮಾಡಿರುವ ವೆಚ್ಚಕ್ಕೆ ಸಂಬಂಧಿಸಿ ಚೀನಾ ಎರಡನೇ ಸ್ಥಾನದಲ್ಲಿದೆ. 336 ಶತಕೋಟಿ ಡಾಲರ್ (ಅಂದಾಜು ₹32 ಲಕ್ಷ ಕೋಟಿ)
- ಮೂರನೇ ಸ್ಥಾನದಲ್ಲಿರುವ ರಷ್ಯಾ ಮಾಡಿರುವ ವೆಚ್ಚ 190 ಶತಕೋಟಿ ಡಾಲರ್ (ಅಂದಾಜು ₹18 ಲಕ್ಷ ಕೋಟಿ)
- 2021–25 ಅವಧಿಯಲ್ಲಿ ಶಸ್ತ್ರಾಸ್ತ್ರಗಳನ್ನು ಖರೀದಿಸಿದ ದೇಶಗಳ ಪೈಕಿ 162 ಪ್ರಮುಖ ರಾಷ್ಟ್ರಗಳನ್ನು ಗುರುತಿಸಲಾಗಿದೆ. ಇವುಗಳ ಪೈಕಿ ಅತಿ ಹೆಚ್ಚು ಶಸ್ತ್ರಾಸ್ತ್ರಗಳನ್ನು ಖರೀದಿ ಮಾಡಿರುವುದು ಉಕ್ರೇನ್, ಭಾರತ, ಸೌದಿ ಅರೇಬಿಯಾ, ಕತಾರ್ ಹಾಗೂ ಪಾಕಿಸ್ತಾನ
- ಸೈಬರ್ ದಾಳಿಗಳು ಆಧುನಿಕ ಸಂಘರ್ಷದ ಅವಿಭಾಜ್ಯ ಅಂಗವಾಗಿವೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಇದಕ್ಕೆ ದೊಡ್ಡ ನಿದರ್ಶನ
- ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದಲ್ಲಿ ಎರಡೂ ದೇಶಗಳು 'ಡಿಜಿಟಲ್ ಪ್ರತೀಕಾರ' (digital retaliation) ನಡೆಸಿವೆ

Publication Date
10/06/2026

Presented by ಪ್ರಜಾವಾಣಿ

## ❖ ಮಸೂದೆ ಮತ್ತೆ ಮಂಡನೆ?

- 'ಇಂಡಿಯಾ' ಒಕ್ಕೂಟದ ಎರಡು ಪಕ್ಷಗಳಲ್ಲಿ ಭಿನ್ನಮತ ಭುಗಿಲೆದ್ದು, ಅವು ಗೊಂದಲದ ಗೂಡಾಗಿವೆ. ಮತ್ತೊಂದು ಪಕ್ಷ ಮೈತ್ರಿಕೂಟದಿಂದಲೇ ಅಂತರ ಕಾಯ್ದುಕೊಂಡಿದೆ. ವಿರೋಧ ಪಕ್ಷಗಳ ಪಾಳಯದಲ್ಲಿನ ಈ ಒಡಕಿನ ಲಾಭ ಪಡೆಯಲು ಮುಂದಾಗಿರುವ ಕೇಂದ್ರ ಸರ್ಕಾರ, ಕ್ಷೇತ್ರಗಳ ಮರುವಿಂಗಡಣೆ ಹಾಗೂ ಮಹಿಳೆಯರಿಗೆ ಮೀಸಲಾತಿ ಮಸೂದೆಗಳನ್ನು ಸಂಸತ್‌ನಲ್ಲಿ ಮತ್ತೊಮ್ಮೆ ಮಂಡಿಸುವ ಉತ್ಸಾಹದಲ್ಲಿದೆ.
- ವಿರೋಧ ಪಕ್ಷಗಳ ಬಹಳಷ್ಟು ಸಂಸದರು ಆಡಳಿತಾರೂಢ ಎನ್‌ಡಿಎ ಜೊತೆ ಗುರುತಿಸಿಕೊಳ್ಳಲು ಮುಂದಾಗಿದ್ದಾರೆ. ಹೀಗಾಗಿ, ಮೂರು ಮಹತ್ವದ ಮಸೂದೆಗಳನ್ನು ಸಂಸತ್‌ನಲ್ಲಿ ಹೊಸದಾಗಿ ಮಂಡಿಸಿ, ಅಂಗೀಕರಿಸುವುದಕ್ಕೆ ಸಂಬಂಧಿಸಿದ ಮಾರ್ಗೋಪಾಯಗಳ ಕುರಿತು ಎನ್‌ಡಿಎ ಚಿಂತನೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.
- ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಕುರಿತ ಸಂವಿಧಾನ (131ನೇ ತಿದ್ದುಪಡಿ) ಮಸೂದೆ- 2026', ಮಹಿಳಾ ಮೀಸಲು ಕಾನೂನಿಗೆ ತಿದ್ದುಪಡಿ ಮಾಡುವ ಸಂವಿಧಾನ (131ನೇ ತಿದ್ದುಪಡಿ) ಮಸೂದೆ-2026 ಹಾಗೂ 'ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳು (ತಿದ್ದುಪಡಿ) ಮಸೂದೆ- 2026' ಅನ್ನು ಕೇಂದ್ರ ಸರ್ಕಾರ ಈ ಹಿಂದೆ ಮಂಡಿಸಿತ್ತು.

- ಈ ಪೈಕಿ, ಏಪ್ರಿಲ್ 17ರಂದು ಲೋಕಸಭೆಯಲ್ಲಿ ಮಂಡಿಸಿದ್ದ ಮಹಿಳಾ ಮೀಸಲಾತಿ ಮಸೂದೆಗೆ ಸೋಲುಂಟಾಗಿತ್ತು.
- ಒಡಕು-ಮುನಿಸು: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಹೀನಾಯವಾಗಿ ಸೋತಿರುವ ಟಿಎಂಸಿಯಲ್ಲಿ ಭಿನ್ನಮತ ಭುಗಿಲೆದ್ದಿದ್ದು, ಪಕ್ಷ ವಿಭಜನೆಯಾಗುವ ಲೋಚಿನಲ್ಲಿದೆ. ಟಿಎಂಸಿಯ ಹೆಚ್ಚು ಸಂಖ್ಯೆಯ ಸಂಸದರು ಎನ್‌ಡಿಎ ಜೊತೆ ಕೈಜೋಡಿಸಲು ಒಲವು ವ್ಯಕ್ತಪಡಿಸಿದ್ದಾರೆ.
- ತಮಿಳುನಾಡಿನಲ್ಲಿ ಅಧಿಕಾರ ಕಳೆದುಕೊಂಡಿರುವ ಡಿಎಂಕೆ. 'ಇಂಡಿಯಾ' ಮೈತ್ರಿಕೂಟದಿಂದ ದೂರವೇ ಉಳಿದಿದೆ. ತನ್ನೊಂದಿಗೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದ್ದ ಕಾಂಗ್ರೆಸ್, ಫಲಿತಾಂಶದ ಬಳಿಕ ಟಿವಿಕೆಗೆ ಬೆಂಬಲ ನೀಡಿ ಸರ್ಕಾರದ ಭಾಗವಾಗಿರುವುದು ಡಿಎಂಕೆ ಮುನಿಸಿಕೊಳ್ಳಲು ಕಾರಣ.
- ಆಮ್ ಆದ್ಮಿ ಪಕ್ಷದ (ಎಎಪಿ) 10 ರಾಜ್ಯಸಭಾ ಸಂಸದರು ಈಗಾಗಲೇ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ. ಇದರಿಂದ ಸಂಸತ್‌ನ ಮೇಲ್ಮನೆಯಲ್ಲಿ ಎನ್‌ಡಿಎ ಸಂಖ್ಯಾಬಲ ಹೆಚ್ಚಿದೆ.

### ಕನಿಷ್ಠ ವೇತನ ಹೆಚ್ಚಿಸಬೇಕು– ಖಂಡ್ರೆ

ಬೆಂಗಳೂರು: 'ವಿಬಿ ಜಿ ರಾಮ್ ಜಿ' ಯೋಜನೆಯಡಿ ನೀಡಲಾಗುವ ಕನಿಷ್ಠ ವೇತನವನ್ನು ಹೆಚ್ಚಳ ಮಾಡಬೇಕು' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಕೇಂದ್ರ ಸಚಿವರನ್ನು ಒತ್ತಾಯಿಸಿದ್ದಾರೆ.

ಕೇಂದ್ರ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಜೊತೆಗಿನ ವಿಡಿಯೊ ಸಂವಾದದಲ್ಲಿ ಭಾಗವಹಿಸಿ ಅವರು ಮಾತನಾಡಿದರು.


'ಯೋಜನೆಯಡಿ ರಾಜ್ಯಕ್ಕೆ ಕೇಂದ್ರ ಸರ್ಕಾರ 60:40ರ ಅನುಪಾತದಲ್ಲಿ ₹5,709.90 ಕೋಟಿ ಮಧ್ಯಂತರ ಹಂಚಿಕೆ ಮಾಡಿದೆ. ಶೇ 40ರ ಅನುಪಾತದಲ್ಲಿ ರಾಜ್ಯ ಸರ್ಕಾರ ₹3,806.60 ಕೋಟಿ ನೀಡಬೇಕಿದೆ. ಈ ಯೋಜನೆ ಅನುಷ್ಠಾನಕ್ಕಾಗಿ ಮುಖ್ಯಮಂತ್ರಿ ಅವರಿಗೆ ಪ್ರಸ್ತಾವ ಸಲ್ಲಿಸಲಾಗುವುದು. ಇದೇ 28 ಮತ್ತು 29ರಂದು ಯೋಜನೆ ಅನುಷ್ಠಾನದ ಬಗ್ಗೆ ಎಲ್ಲ ರಾಜ್ಯಗಳ ಸಚಿವರ ಸಭೆ ಕರೆಯಲಾಗಿದೆ. ಇಲ್ಲಿ ರಾಜ್ಯದ ಬೇಡಿಕೆಗಳನ್ನು ಮಂಡಿಸಲಾಗುವುದು' ಎಂದರು.

### ವಿಬಿ ಜಿ ರಾಮ್ ಜಿ ಕೇಂದ್ರದಿಂದ ಮಧ್ಯಂತರ ಹಂಚಿಕೆ

ನವದೆಹಲಿ (ಪಿಟಿಐ): 'ಯಾವ ರಾಜ್ಯಕ್ಕೂ ಅನುದಾನ ಹಂಚಿಕೆಯಲ್ಲಿ ಕಡಿತವಾಗದಂತೆ ನೋಡಿಕೊಳ್ಳಲಾಗುವುದು. ವಿಜಿ ಜಿ ರಾಮ್ ಜಿ ಯೋಜನೆಗಾಗಿ ರಾಜ್ಯಗಳಿಗೆ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳಿಗಾಗಿ ಒಟ್ಟು ₹95,692 ಕೋಟಿ ಮಧ್ಯಂತರ ಹಂಚಿಕೆ ಮಾಡಲಾಗಿದೆ' ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮಂಗಳವಾರ ಘೋಷಿಸಿದರು. ಈ ಬಗ್ಗೆ ಮಾಧ್ಯಮಗೋಷ್ಠಿ ನಡೆಸಿದ ಅವರು, 'ಹೊಸ ಯೋಜನೆಯನ್ನು ಜಾರಿ ಮಾಡುವ ಸಂಬಂಧ ಪೂರ್ಣಗೊಳಿಸಬೇಕಾದ ಅಗತ್ಯ ಪ್ರಕ್ರಿಯೆಗಳನ್ನು 26 ರಾಜ್ಯಗಳು ಪೂರ್ಣಗೊಳಿಸಿವೆ. ಆದರೆ, ಕರ್ನಾಟಕ, ಜಾರ್ಖಂಡ್, ತೆಲಂಗಾಣ ಮತ್ತು ಮಿಜೋರಾಂ ರಾಜ್ಯಗಳು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿಲ್ಲ' ಎಂದರು.

**ಪಶ್ಚಿಮ ಬಂಗಾಳಕ್ಕೆ ₹8,508 ಕೋಟಿ**

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸರ್ಕಾರ ಇದ್ದ ಸಂದರ್ಭದಲ್ಲಿ ನರೇಗಾ ಅನುದಾನ ಹಂಚಿಕೆ ವಿಚಾರವಾಗಿ ಹಲವು ವರ್ಷಗಳಿಂದ ವಿವಾದ ನಡೆಯುತ್ತಿತ್ತು. ಈಗ ಇಲ್ಲಿ ಬಿಜೆಪಿ ಸರ್ಕಾರ ರಚನೆಯಾಗಿದ್ದು, ರಾಜ್ಯಕ್ಕೆ ₹8,508 ಕೋಟಿ ಮಧ್ಯಂತರ ಹಂಚಿಕೆ ಘೋಷಿಸಲಾಗಿದೆ. ಈ ಬಗ್ಗೆ ಸಚಿವರು ಪ್ರತಿಕ್ರಿಯಿಸಿ, 'ವಿವಾದ ಹಾಗೆಯೇ ಇದೆ. ಉಳಿದ ಅವಧಿಯಲ್ಲಿ ಕೇಂದ್ರ ಸರ್ಕಾರದ ಎಲ್ಲ ನಿಯಮಗಳನ್ನು ಅನುಸರಿಸುವುದಾಗಿ ರಾಜ್ಯ ಸರ್ಕಾರ ಪತ್ರ ಬರೆದಿದೆ. ಜೂನ್ 30ರ ಒಳಗೆ ನರೇಗಾ ಅಡಿಯಲ್ಲಿನ ಕಾಮಗಾರಿಗಳು ಪೂರ್ಣಗೊಳ್ಳುವ ಸಲುವಾಗಿ ₹700 ಕೋಟಿ ನೀಡಲಾಗಿದೆ' ಎಂದರು.



# ಕಾಲ್ಚೆಂಡಿನ ಕೌತುಕ ಇಂದಿನಿಂದ






ಜಾಗತಿಕ ಫುಟ್‌ಬಾಲ್ ಹಬ್ಬವು ಗುರುವಾರ ಆರಂಭವಾಗಲಿದೆ. ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊ ದೇಶಗಳ ಜಂಟಿ ಆತಿಥ್ಯದಲ್ಲಿ 23ನೇ ಫಿಫಾ ವಿಶ್ವಕಪ್ ಟೂರ್ನಿ ನಡೆಯಲಿದೆ. ಜಗತ್ತಿನ ಕೆಲವು ಕಡೆ ಯುದ್ಧದ ಕರಾಳತೆ ತುಂಬಿರುವ ಈ ಹೊತ್ತಿನಲ್ಲಿ ಶಾಂತಿ, ಸಾಮರಸ್ಯದ ಸಂದೇಶದೊಂದಿಗೆ ಕಾಲ್ಚೆಂಡಿನ ಸಂಭ್ರಮ ಗರಿಗೆದರಲಿದೆ.





ಎಂಬಾಪೆ


ರೊನಾಲ್ಡೊ

**ದಿನಾಂಕ: ಜೂನ್ 11ರಿಂದ ಜುಲೈ 19**

**ಒಟ್ಟು ತಂಡಗಳು: 48**

**ಒಟ್ಟು ಪಂದ್ಯಗಳು 104**

**ಹಾಲಿ ಚಾಂಪಿಯನ್: ಅರ್ಜೆಂಟೀನಾ**

**ಹಾಲಿ ರನ್ನರ್ಸ್ ಅಪ್: ಫ್ರಾನ್ಸ್**

ಇನ್ನಷ್ಟು ಸುದ್ದಿಗಳು 11

# ಕಾಲ್ಚಳಕದ ಪುಳಕದಲ್ಲಿ ಮರೆಯಲಿ ಯುದ್ಧದ ಕರಾಳತೆ





• ಗಿರೀಶ ದೊಡ್ಡಮನಿ

ಬೆಂಗಳೂರು: 'ದೇಶದ ಗಾತ್ರ ಅಥವಾ ಆಟಗಾರರ ದೇಹದಾರ್ಢ್ಯಕ್ಕೂ ಫುಟ್‌ಬಾಲ್ ಆಟಕ್ಕೂ ಸಂಬಂಧವಿಲ್ಲ. ಕಠಿಣ ಶ್ರಮ, ಹೃತ್ಪೂರ್ವಕ ಪ್ರೀತಿ ಮತ್ತು ಕೌಶಲಗಳಷ್ಟೇ ಮುಖ್ಯವಾಗುತ್ತವೆ..'

– ಫುಟ್‌ಬಾಲ್ ದಿಗ್ಗಜ ಪೆಲೆ ಅವರ ಈ ಮಾತುಗಳು ಸರ್ವಕಾಲಕ್ಕೂ ಸಲ್ಲುವಂಥದ್ದು. ಏಕೆಂದರೆ; ಗುರುವಾರ ಆರಂಭವಾಗಲಿರುವ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಕೇವಲ 1.80 ಲಕ್ಷ ಜನಸಂಖ್ಯೆಯ ದೇಶ ಕ್ಯುರಾಸಾವೊ ಕಣಕ್ಕಿಳಿಯಲಿದೆ. ಫುಟ್‌ಬಾಲ್ ಆಟದ ದಿಗ್ಗಜ ದೇಶಗಳಾದ ಬ್ರೆಜಿಲ್, ಅರ್ಜೆಂಟಿನಾ, ಫ್ರಾನ್ಸ್, ಇಂಗ್ಲೆಂಡ್, ಪೋರ್ಚುಗಲ್, ಸ್ಪೇನ್, ಜರ್ಮನಿ ಮತ್ತು ದಕ್ಷಿಣ ಆಫ್ರಿಕಾ ಸೇರಿದಂತೆ ಒಟ್ಟು 48 ದೇಶಗಳ ತಂಡಗಳು ಕಣಕ್ಕಿಳಿಯಲಿವೆ. ಇಷ್ಟು ತಂಡಗಳು ಇರುವುದು ಇದೇ ಮೊದಲು.

ಒಲಿಂಪಿಕ್ಸ್ ನಂತರ ಅತಿ ಹೆಚ್ಚು ಜನರು ವೀಕ್ಷಿಸುವ ಕ್ರೀಡೆಯೆಂದರೆ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿ. ಹಲವು ತಾರಾ ವರ್ಚಸ್ಸಿನ ಆಟಗಾರರಿಗೆ ತಮ್ಮ ಸಾಮರ್ಥ್ಯ ಮತ್ತು ಅನುಭವವನ್ನು ಪಣಕ್ಕೊಡ್ಡುವ ಕಣ ಇದು. ಅಲ್ಲದೇ ಹೊಸ ತಾರೆಗಳ ಉದಯಕ್ಕೂ ಇದು ವೇದಿಕೆ. ಹಲವು ಧರ್ಮ, ವರ್ಣ, ಭಾಷೆ ಮತ್ತು ದೇಶಗಳ ಜನರನ್ನು ಒಂದೇ ಸೂರಿನಡಿ ತರುವ ಕಾಲ್ಚೆಂಡು 'ಜಗತ್ತು ಗುಂಡಗಿದೆ. ಎಲ್ಲರೂ ಒಂದಿಲ್ಲೊಂದು ಸಲ ಮುಖಾಮುಖಿಯಾಗಬೇಕು' ಎಂಬ ಸಂದೇಶ ನೀಡುತ್ತದೆ.

ಪ್ರತಿ ಸಲ ಫಿಫಾ ವಿಶ್ವಕಪ್ ಟೂರ್ನಿಗೂ ಒಂದು ತಿಂಗಳು ಮುನ್ನವೇ ಸಡಗರದ ವಾತಾವರಣ ಗರಿಗೆದರುತ್ತಿತ್ತು. ಆದರೆ ಈ ಸಲ ಅಂತಹ ಭರಾಟೆಗಳು ಅಷ್ಟಾಗಿ ಕಾಣುತ್ತಿಲ್ಲ. ಏಕೆಂದರೆ, ಜಗತ್ತನ್ನು ಕಾಡುತ್ತಿರುವ ಸಂಘರ್ಷದ ವಾತಾವರಣ. ಇರಾನ್ ಮೇಲೆ ಯುದ್ಧ ಸಾರಿರುವ ಅಮೆರಿಕವೇ ಮೆಕ್ಸಿಕೊ ಮತ್ತು ಕೆನಡಾ ದೇಶಗಳೊಂದಿಗೆ 23ನೇ ವಿಶ್ವಕಪ್ ಟೂರ್ನಿಯ ಆತಿಥ್ಯ ವಹಿಸುತ್ತಿದೆ. ಆದರೆ ತೈಲ ಬೆಲೆ ಏರಿಕೆ, ವಿಮಾನ ಪ್ರಯಾಣದ ವೆಚ್ಚ ಹೆಚ್ಚಿರುವುದು, ಅಭದ್ರತೆಯ ಭಾವದಿಂದಾಗಿ ಈ ಸುಂದರ ದೇಶಗಳಿಗೆ ಪ್ರಯಾಣಿಸುವವರ ಸಂಖ್ಯೆಯಲ್ಲಿ ಭರಾಟೆ ಕಾಣುತ್ತಿಲ್ಲ ಎಂದು ಸುದ್ದಿಸಂಸ್ಥೆಗಳು ವರದಿ ಮಾಡುತ್ತಿವೆ. ಇರಾನ್-ಇಸ್ರೇಲ್, ಅಮೆರಿಕ ಯುದ್ಧದ ಬಿಸಿಯು ಬೆಂಗಳೂರಿನ ಜನರ ಅಡುಗೆ ಮನೆಗಳಿಗೂ ಎಲ್‌ಪಿಜಿ ಸಿಲಿಂಡರ್ ಕೊರತೆಯ ರೂಪದಲ್ಲಿಯೂ ತಟ್ಟಿದೆ. ಭಾರತ ಫುಟ್‌ಬಾಲ್ ತಂಡವು ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಅರ್ಹತೆಯನ್ನು ಈ ಬಾರಿಯೂ ಗಿಟ್ಟಿಸಿಲ್ಲ. ಆದರೆ ಪ್ರತಿಬಾರಿಯಂತೆ ಪಂದ್ಯವೀಕ್ಷಣೆಗೆ ಇಲ್ಲಿಂದ ತೆರಳುವ ಭಾರತೀಯರಿಗೇನೂ ಕಮ್ಮಿಯಿಲ್ಲ.

ಟೂರ್ನಿ ಆರಂಭವಾದ ನಂತರ ಕಳೆಗಟ್ಟುವ ನಿರೀಕ್ಷೆ ಇದೆ. ಲಯೊನೆಲ್ ಮೆಸ್ಸಿ, ಕ್ರಿಸ್ಟಿಯಾನೊ ರೊನಾಲ್ಡೊ, ನೇಮರ್, ಕೈಲಿಯನ್ ಎಂಬಾಪೆ ಅವರಂತಹ ತಾರೆಯರ ಆಟದ ವೈಭವ ತಾರಕಕ್ಕೇರಬಹುದೆನೋ?

ಮೆಸ್ಸಿ, ರೊನಾಲ್ಡೊ ಹಾಗೂ ಎಂಬಾಪೆ ಹೊರತುಪಡಿಸಿ ಬ್ರೆಜಿಲ್ ದೇಶದ ನೇಮರ್, ವಿನಿಶಿಯಸ್ ಜೂನಿಯರ್, ನಾರ್ವೆಯ ಎರ್ಲಿಂಗ್ ಹೋಲ್ಯಾಂಡ್, ಸ್ಪೇನ್ ದೇಶದ ಲಮಿನ್ ಯಮಾಲ್, ಇಂಗ್ಲೆಂಡ್‌ನ ಹ್ಯಾರಿ ಕೇನ್, ಈಜಿಪ್ಟ್‌ನ ಮೊಹಮ್ಮದ್ ಸಲಾ ಅವರತ್ತಲೂ ನಿರೀಕ್ಷೆಯ ನೋಟಗಳಿವೆ. ಇವರೆಲ್ಲರೊಂದಿಗೆ ಮತ್ತಷ್ಟು ಹೊಸಪ್ರತಿಭೆಗಳ ಮಿಂಚು ಕೂಡ ಮನಗೆಲ್ಲಬಹುದು. ಹೊಸ ತಂತ್ರಜ್ಞಾನದ ಮೋಡಿಯೂ ಮನಸೆಳೆಯಬಹುದು. ಒಟ್ಟಾರೆ ಎಲ್ಲವೂ ಅಂದುಕೊಂಡಂತೆ ಸುಸೂತ್ರವಾಗಿ ನಡೆದು ಯುದ್ಧದ ಕರಾಳತೆಯನ್ನು ಮರೆಸಿ ಸೌಹಾರ್ದತೆಯ ಸಂದೇಶ ಪಸರಿಸಿದರೆ ಫುಟ್‌ಬಾಲ್ ಗೆದ್ದಂತಾಗಲಿದೆ.



ಉದ್ಘಾಟನಾ ಪಂದ್ಯ ನಡೆಯುವ ನ್ಯೂ ಮೆಕ್ಸಿಕೊದ ಎಸ್ಟಾಡಿಯೊ ಅಝ್ಟೆಕಾ ಕ್ರೀಡಾಂಗಣದ ಹೊರನೋಟ —ಎಎಫ್‌ಪಿ ಚಿತ್ರ



## ರೊನಾಲ್ಡೊ ಕನಸು ಕೈಗೂಡುವುದೇ?

ಮೆಸ್ಸಿಯ ಪ್ರತಿಸ್ಪರ್ಧಿ ಮತ್ತು ಈ ಕಾಲಘಟ್ಟದ ಮತ್ತೊಬ್ಬ ದಿಗ್ಗಜ ಪೋರ್ಚುಗಲ್ ತಂಡದ ಕ್ರಿಸ್ಟಿಯಾನೊ ರೊನಾಲ್ಡೊ ಫುಟ್‌ಬಾಲ್ ಅಂಗಳದಲ್ಲಿ ಎಲ್ಲ ಸಾಧನೆಗಳನ್ನೂ ಮಾಡಿದ್ದಾರೆ. ಆದರೆ ಅವರಿಗೆ ಏಕೈಕ ಕೊರಗು ವಿಶ್ವಕಪ್ ವಿಜಯದ್ದು. 41 ವರ್ಷದ ರೊನಾಲ್ಡೊಗೆ ಇದು ಬಹುತೇಕ ಕೊನೆಯ ವಿಶ್ವಕಪ್ ಟೂರ್ನಿ. ಅತ್ಯಂತ ಶ್ರೀಮಂತ ಫುಟ್‌ಬಾಲ್ ಆಟಗಾರನೆಂಬ ಹೆಗ್ಗಳಿಕೆಯಿರುವ ರೊನಾಲ್ಡೊಗೆ ವಿಶ್ವದಾದ್ಯಂತ ಅಭಿಮಾನಿಗಳಿದ್ದಾರೆ. ಪ್ರತಿಷ್ಠಿತ ಪ್ರಶಸ್ತಿಗಳನ್ನೂ ಗೆದ್ದಿದ್ದಾರೆ. ದೇಶಕ್ಕಾಗಿ ಮೊದಲ ಟ್ರೋಫಿ ಜಯಿಸಿಕೊಡಲು ಇದು ಕೊನೆಯ ಅವಕಾಶವೂ ಆಗಿದೆ.

## ಹೆಚ್ಚು ಬಾರಿ ಪ್ರಶಸ್ತಿ ಗೆದ್ದ ದೇಶಗಳು

- 5 ಬಾರಿ — ಬ್ರೆಜಿಲ್ — 1958, 1962, 1970, 1994, 2002
- 4 ಬಾರಿ — ಜರ್ಮನಿ — 1954, 1974, 1990, 2014
- 4 ಬಾರಿ — ಇಟಲಿ — 1934, 1938, 1982, 2006
- 3 ಬಾರಿ — ಅರ್ಜೆಂಟೀನಾ — 1978, 1986, 2022

Publication Date 11/06/2026

## ಮತ್ತೆ ಮಿಂಚುವರೇ ಮೆಸ್ಸಿ?

ವಿಶ್ವದ ಅಗ್ರಮಾನ್ಯ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ ಅವರಿಗೆ 2022ರವರೆಗೂ ಎಂಟು ಬ್ಯಾಲನ್ ಡಿ ಓವರ್ ಗೌರವಗಳು, ಒಲಿಂಪಿಕ್ಸ್ ಚಿನ್ನ, ಕೊಪಾ ಅಮೆರಿಕ ಟ್ರೋಫಿ, ಲಾ ಲೀಗಾ ಸೇರಿದಂತೆ ಪ್ರತಿಷ್ಠಿತ ಟ್ರೋಫಿಗಳು ಒಲಿದಿದ್ದವು. ಅವರ ಸಂಗ್ರಹದಲ್ಲಿ ಏಕೈಕ ಕೊರತೆಯೆಂದರೆ ವಿಶ್ವಕಪ್ ಟ್ರೋಫಿಯದ್ದು. ಆ ಕನಸು ಕತಾರ್‌ನಲ್ಲಿ ಕೈಗೂಡಿತ್ತು.

ಅವತ್ತು ಚಿನ್ನದ ಟ್ರೋಫಿಗೆ ಮುತ್ತಿಟ್ಟು ಭಾವಪರವಶರಾದ ಮೆಸ್ಸಿ ಅವರ ಚಿತ್ರ ಈಗಲೂ ಕಣ್ಣಿಗೆ ಕಟ್ಟಿದಂತಿದೆ. 38 ವರ್ಷದ ಮೆಸ್ಸಿ ಈ ಬಾರಿಯೂ ಅರ್ಜೆಂಟಿನಾಕ್ಕೆ ಪ್ರಶಸ್ತಿ ಗೆಲ್ಲಿಸಿಕೊಡುವರೇ ಎಂಬ ಕುತೂಹಲ ಮನೆಮಾಡಿದೆ. ದಂತಕತೆ ಡಿಯಾಗೊ ಮರಡೋನಾ ನಂತರ ಈ ದೇಶಕ್ಕೆ ಸಿಕ್ಕಿರುವ ಅಪ್ರತಿಮ ತಾರೆ ಮೆಸ್ಸಿ ಅಂತಹ ಸಾಧನೆ ಮಾಡಬಲ್ಲ ಸಮರ್ಥರು. ಹೋದ ಸಲ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಫ್ರಾನ್ಸ್ ತಂಡದ ಕಠಿಣ ಸವಾಲನ್ನು ಮೀರಿ ನಿಲ್ಲುವಲ್ಲಿ ಮೆಸ್ಸಿ ಆಟವೇ ಪ್ರಮುಖವಾಗಿತ್ತು. ಆ ಪಂದ್ಯದ ನಂತರ ಅವರು ನಿವೃತ್ತಿಯಾಗಬಹುದೆಂಬ ಮಾತುಗಳೂ ಕೇಳಿಬಂದಿದ್ದವು. ಆದರೆ ತಮ್ಮ ಫಿಟ್‌ನೆಸ್ ಮತ್ತು ಕೌಶಲಗಳಿಗೆ ಮತ್ತಷ್ಟು ಸಾಣೆ ಹಿಡಿದಿರುವ ಅವರು ಹೊಸ ಕನಸಿನೊಂದಿಗೆ ಕಣಕ್ಕಿಳಿಯುತ್ತಿದ್ದಾರೆ.


ಮೆಕ್ಸಿಕೊ ಸಿಟಿಯಲ್ಲಿ ಅಭಿಮಾನಿಗಳು ಫಿಫಾ ಫುಟ್‌ಬಾಲ್ ವಿಶ್ವಕಪ್ ಟ್ರೋಫಿಯ ಪ್ರತಿರೂಪದೊಂದಿಗೆ ಪೋಸ್ ನೀಡಿದರು ಎಎಫ್‌ಪಿ ಚಿತ್ರ

## ವಿಶ್ವಕಪ್‌ನಲ್ಲಿ ಹೆಚ್ಚು ಪಂದ್ಯ ಆಡಿದ ದೇಶಗಳು

| | |
|---|---|
| ಬ್ರೆಜಿಲ್ | 114 |
| ಜರ್ಮನಿ | 112 |
| ಅರ್ಜೆಂಟೀನಾ | 88 |
| ಇಟಲಿ | 83 |
| ಇಂಗ್ಲೆಂಡ್ | 74 |

## ವಿಶ್ವಕಪ್‌ನಲ್ಲಿ ಗರಿಷ್ಠ ಪಂದ್ಯ ಆಡಿದವರು

| ಪಂದ್ಯ | ಆಟಗಾರ | ದೇಶ |
|---|---|---|
| 26 | ಲಯೊನೆಲ್ ಮೆಸ್ಸಿ | ಅರ್ಜೆಂಟೀನಾ |
| 25 | ಲೋಥರ್ ಮ್ಯಾಥ್ಯೂಸ್ | ಜರ್ಮನಿ |
| 24 | ಮಿರೋಸ್ಲಾವ್ ಕ್ಲೋಸ್ | ಜರ್ಮನಿ |
| 23 | ಪಾವೊಲೊ ಮಾಲ್ಡಿನಿ | ಇಟಲಿ |
| 22 | ಕ್ರಿಸ್ಟಿಯಾನೊ ರೊನಾಲ್ಡೊ | ಪೋರ್ಚುಗಲ್ |

- ₹416 ಕೋಟಿ — ಚಾಂಪಿಯನ್ ತಂಡವು ಪಡೆಯುವ ಬಹುಮಾನ
- ₹275 ಕೋಟಿ — ರನ್ನರ್ಸ್ ಅಪ್ ತಂಡವು ಗಳಿಸುವ ಬಹುಮಾನ
- ₹241 ಕೋಟಿ — ತೃತೀಯ ಸ್ಥಾನ ಪಡೆಯುವ ತಂಡ ಗಳಿಸುವ ಮೊತ್ತ
- ₹225 ಕೋಟಿ — ನಾಲ್ಕನೇ ಸ್ಥಾನ ಪಡೆಯುವ ತಂಡ ಗಳಿಸುವ ಮೊತ್ತ

## ಉದ್ಘಾಟನಾ ಕಾರ್ಯಕ್ರಮ

ಜೂನ್ 11: ಮೆಕ್ಸಿಕೊ ಸಿಟಿಯಲ್ಲಿ ಸಮಾರಂಭ (ಸಂಜೆ 6.30)
ಜೂನ್ 12: ಟೊರಾಂಟೊದಲ್ಲಿ ಕಾರ್ಯಕ್ರಮ (ಸಂಜೆ 6.30)
ಜೂನ್ 12: ಲಾಸ್ ಏಂಜಲೀಸ್ ಸಮಾರಂಭ (ತಡರಾತ್ರಿ 12.30)
ಪ್ರಮುಖ ಆಕರ್ಷಣೆ: ಖ್ಯಾತ ಗಾಯಕಿ ಶಕೀರಾ ಮತ್ತು ಬರ್ನಾ ಬಾಯ್ ಜೋಡಿ ಅಧಿಕೃತ ಹಾಡು 'ದೈ ದೈ..' ಪ್ರಸ್ತುತಪಡಿಸುವರು.

## ದಾಖಲೆ ಮೇಲೆ ಕೈಲಿಯನ್ ಎಂಬಾಪೆ ಕಣ್ಣು

ಕಳೆದ ಎಂಟು ವರ್ಷಗಳಲ್ಲಿ ಫುಟ್‌ಬಾಲ್ ಪ್ರಿಯರ ಗಮನವನ್ನು ಸತತವಾಗಿ ಸೆಳೆದವರು ಫ್ರಾನ್ಸ್ ತಂಡದ ಕೈಲಿಯನ್ ಎಂಬಾಪೆ. ಫ್ರಾನ್ಸ್ ತಂಡವು ಸತತ ಮೂರನೇ ಬಾರಿ ಫೈನಲ್ ಪ್ರವೇಶಿಸುವತ್ತ ಚಿತ್ತ ನೆಟ್ಟಿದೆ. ಹಾಗೆ ಎಂಬಾಪೆ ಅವರೂ 'ಹ್ಯಾಟ್ರಿಕ್' ಸಾಧನೆ ಮಾಡುವ ಗುರಿ ಇಟ್ಟುಕೊಂಡಿದ್ದಾರೆ. ತಂಡವು 2018ರಲ್ಲಿ ಕ್ರೊವೇಷ್ಯಾದ ಎದುರು ಫೈನಲ್‌ನಲ್ಲಿ ಗೆದ್ದಿತ್ತು. 2022ರಲ್ಲಿ ಅರ್ಜೆಂಟಿನಾ ಎದುರು ಸೋತು ರನ್ನರ್ಸ್ ಅಪ್ ಆಗಿದ್ದರು. ಆ ಟೂರ್ನಿಯಲ್ಲಿ ಎಂಬಾಪೆ ಅವರು ಚಿನ್ನದ ಬೂಟು ಗಳಿಸಿದ್ದರು.

27 ವರ್ಷದ ಎಂಬಾಪೆ ಅವರ ಡ್ರಿಬ್ಲಿಂಗ್ ಹಾಗೂ ವೇಗದ ಓಟ ಫುಟ್‌ಬಾಲ್ ಪ್ರಿಯರನ್ನು ಸೂಜಿಗಲ್ಲಿನಂತೆ ಸೆಳೆದಿದೆ. ಈ ಬಾರಿಯೂ ಅವರು ಅಂತಹದೇ ಮೋಡಿ ತೋರುವರೇ ಕಾದು ನೋಡಬೇಕು.

## ವಿಶ್ವಕಪ್‌ನಲ್ಲಿ ಹೆಚ್ಚು ಗೋಲು ಗಳಿಸಿದವರು

- 16 — ಮಿರೋಸ್ಲಾವ್ ಕ್ಲೋಸ್ — ಜರ್ಮನಿ
- 15 — ರೊನಾಲ್ಡೊ — ಬ್ರೆಜಿಲ್
- 14 — ಗರ್ಡ್ ಮುಲ್ಲರ್ — ಜರ್ಮನಿ
- 13 — ಲಯೊನೆಲ್ ಮೆಸ್ಸಿ — ಅರ್ಜೆಂಟೀನಾ
- 13 — ಜಸ್ಟ್ ಫಾಂಟೈನ್ — ಫ್ರಾನ್ಸ್

ಬಹರೇನ್, ಕುವೈತ್, ಜೋರ್ಡನ್ ಮೇಲೆ ಇರಾನ್ ದಾಳಿ: ಶಾಂತಿ ಸ್ಥಾಪನೆಗೆ ಹಿನ್ನಡೆ

# ಇರಾನ್ ಮೇಲೆ ಅಮೆರಿಕ ವಾಯು ದಾಳಿ

ದುಬೈ(ಎಪಿ): ಅಮೆರಿಕ ಮತ್ತು ಇರಾನ್ ನಡುವೆ ಬುಧವಾರ ಮತ್ತೆ ಸಂಘರ್ಷ ಆರಂಭವಾಗಿದ್ದು, ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆ ಕುರಿತ ಪ್ರಯತ್ನಗಳಿಗೆ ಹಿನ್ನಡೆಯಾಗುವ ಆತಂಕ ಮನೆ ಮಾಡಿದೆ.

ತನ್ನ ಅಪಾಚೆ ಹೆಲಿಕಾಪ್ಟರ್ ಪತನಗೊಂಡಿದ್ದು, ಇದಕ್ಕೆ ಇರಾನ್ ನಡೆಸಿದ ದಾಳಿಯೇ ಕಾರಣ ಎಂದು ಅಮೆರಿಕ ದೂರಿದೆ. ಇರಾನ್‌ನ ಹಲವು ಪ್ರದೇಶಗಳ ಮೇಲೆ ವಾಯು ದಾಳಿ ನಡೆಸಿದೆ. ಇದಕ್ಕೆ ಪ್ರತೀಕಾರವಾಗಿ, ಬಹರೇನ್ ಮತ್ತು ಕುವೈತ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ. ಇರಾನ್ ಉಡ್ಡಯನ ಮಾಡಿದ್ದ ಐದು ಕ್ಷಿಪಣಿಗಳನ್ನು ಹೊಡೆದುರುಳಿಸಿದ್ದಾಗಿ ಜೋರ್ಡನ್ ಕೂಡ ಹೇಳಿಕೊಂಡಿದೆ.

ಜೋರ್ಡನ್‌ನ ಮುವಾಫಾಕ್ ಸಾಲ್ಟಿ ವಾಯು ನೆಲೆ ಗುರಿಯಾಗಿಸಿ ದಾಳಿ ನಡೆಸಿದ್ದಾಗಿ ಇರಾನ್ ಹೇಳಿದೆ. ಈ ವಾಯು ನೆಲೆಯಲ್ಲಿ ಅಮೆರಿಕದ ಎಫ್–35 ಯುದ್ಧ ವಿಮಾನಗಳಿವೆ.

ಸಂಘರ್ಷ ಮತ್ತೆ ಉಲ್ಬಣಗೊಂಡ ಬೆನ್ನಲ್ಲೇ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ಬೆಲೆಯಲ್ಲೂ (ಪ್ರತಿ ಬ್ಯಾರೆಲ್‌ಗೆ 91 ಡಾಲರ್) ಏರಿಕೆ ಕಂಡುಬಂತು.

> ನಮ್ಮ ಮೇಲಿನ ದಾಳಿಗೆ ಪ್ರತ್ಯುತ್ತರ ಕೊಡದೇ ಇರುವುದಿಲ್ಲ. ನೀವು ಸುರಕ್ಷಿತವಾಗಿರಬೇಕು ಎಂದಾದಲ್ಲಿ ಈ ಪ್ರದೇಶ ತೊರೆಯಿರಿ
> **ಅಬ್ಬಾಸ್ ಅರಾಘ್ಚಿ**, ಇರಾನ್ ವಿದೇಶಾಂಗ ಸಚಿವ

**ದಾಳಿ:** 'ಇರಾನ್‌ನ ವಾಯು ಪ್ರದೇಶ ರಕ್ಷಣಾ ವ್ಯವಸ್ಥೆ, ನಿಯಂತ್ರಣ ಕೇಂದ್ರಗಳು ಹಾಗೂ ರೇಡಾರ್‌ಗಳನ್ನು ಗುರಿಯಾಗಿಸಿ ವಾಯು ದಾಳಿ ನಡೆಸಲಾಗಿದೆ' ಎಂದು ಅಮೆರಿಕ ಸೇನೆಯ ಸೆಂಟ್ರಲ್ ಕಮಾಂಡ್ ಹೇಳಿದೆ.

ಅಮೆರಿಕ ದಾಳಿ ನಡೆಸಿರುವುದನ್ನು ಇರಾನ್ ಖಚಿತಪಡಿಸಿದೆ. ಬಂದರ್ ಅಬ್ಬಾಸ್, ಕೆಶಮ್ ದ್ವೀಪ ಗುರಿಯಾಗಿಸಿ ಅಮೆರಿಕ ದಾಳಿ ನಡೆಸಿದೆ ಎಂದಿರುವ ಇರಾನ್, ಹಾನಿ ಕುರಿತು ಮಾಹಿತಿ ನೀಡಿಲ್ಲ.

## ಭಾರಿ ಬೆಲೆ ತೆರಬೇಕಾಗುತ್ತದೆ: ಟ್ರಂಪ್

ವಾಷಿಂಗ್ಟನ್(ಎಎಫ್‌ಪಿ): 'ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವನ್ನು ಅಂತ್ಯಗೊಳಿಸುವ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲು ಇರಾನ್ ವಿಪರೀತ ವಿಳಂಬ ಮಾಡುತ್ತಿದೆ. ಇದಕ್ಕಾಗಿ ಈಗ ಅದು ಭಾರಿ ಬೆಲೆ ತೆರಬೇಕಾಗುತ್ತದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಗುಡುಗಿದ್ದಾರೆ.

ಈ ಕುರಿತು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ 'ಟ್ರೂತ್ ಸೋಷಿಯಲ್'ನಲ್ಲಿ ಬರೆದುಕೊಂಡಿರುವ ಅವರು, 'ಅಮೆರಿಕ ಪಡೆಗಳು ಇರಾನ್ ಅನ್ನು ಸಂಪೂರ್ಣ ಪರಾಭವಗೊಳಿಸಿವೆ' ಎಂದಿದ್ದಾರೆ.

'ಪಶ್ಚಿಮ ಏಷ್ಯಾಕ್ಕೆ ಎದುರಾಗಿದ್ದ ಬೆದರಿಕೆ ಸಂಪೂರ್ಣ ನಾಶವಾಗಿದೆ. ಶಾಂತಿ ಒಪ್ಪಂದ ಮಾಡಿಕೊಂಡಿದ್ದರೆ ಇರಾನ್‌ಗೆ ಹೆಚ್ಚು ಅನುಕೂಲವಾಗುತ್ತಿತ್ತು. ಈಗ ಸಾಕಷ್ಟು ವಿಳಂಬವಾಗಿದೆ. ಇದಕ್ಕಾಗಿ ಅವರು ಬೆಲೆ ತೆರಲಿದ್ದಾರೆ' ಎಂದು ಪೋಸ್ಟ್‌ನಲ್ಲಿ ಹೇಳಿದ್ದಾರೆ.



'ಇರಾನ್ ಜೊತೆಗಿನ ಮಾತುಕತೆಯಲ್ಲಿ ಪ್ರಗತಿ ಕಂಡುಬರುತ್ತಿಲ್ಲ. ಇರಾನ್‌ನ ವಿದ್ಯುತ್ ಸ್ಥಾವರಗಳು ಹಾಗೂ ಸೇತುವೆಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗುವುದು' ಎಂದಿದ್ದಾರೆ.

Publication Date
11/06/2026

Presented by ಪ್ರಜಾವಾಣಿ

## ಇರಾನ್ ಯುದ್ಧ / ಪಶ್ಚಿಮ ಏಷ್ಯಾ ಸಂಘರ್ಷದಿಂದ ಸುದ್ದಿಯಲ್ಲಿರುವ ಸ್ಥಳಗಳು ಮತ್ತು ಪ್ರದೇಶಗಳು

**ಸಂದರ್ಭ:** ಇರಾನ್–ಇಸ್ರೇಲ್ / ಪಶ್ಚಿಮ ಏಷ್ಯಾ ಸಂಘರ್ಷದ ಕಾರಣದಿಂದ **ಕಾರ್ಯತಂತ್ರದ ಜಲಸಂಧಿಗಳು, ಅಣು ಕೇಂದ್ರಗಳು, ಕೊಲ್ಲಿ ಪ್ರದೇಶದ ಇಂಧನ ಕೇಂದ್ರಗಳು, ಅಮೆರಿಕದ ಸೈನಿಕ ನೆಲೆಗಳು ಮತ್ತು ಪ್ರಾಕ್ಸಿ ಸಂಘರ್ಷ ಪ್ರದೇಶಗಳು** ಸುದ್ದಿಯಲ್ಲಿವೆ. ಪರೀಕ್ಷಾ ದೃಷ್ಟಿಯಿಂದ ಮುಖ್ಯವಾಗಿ **ನಕ್ಷೆ ಆಧಾರಿತ ಭೂಗೋಳಶಾಸ್ತ್ರ** + **ಇಂಧನ ಭದ್ರತೆ** + **ಭಾರತದ ಹಿತಾಸಕ್ತಿ** ಮುಖ್ಯವಾಗುತ್ತದೆ.

### 1. ಅತ್ಯಂತ ಪ್ರಮುಖ ನಕ್ಷೆ ಸ್ಥಳಗಳು

| ಸ್ಥಳ / ಪ್ರದೇಶ | ಸ್ಥಳದ ಸುಳಿವು | ಏಕೆ ಸುದ್ದಿಯಲ್ಲಿದೆ? | ಪರೀಕ್ಷಾ ದೃಷ್ಟಿಯಿಂದ |
|---|---|---|---|
| **ಹೋರ್ಮುಜ್ ಜಲಸಂಧಿ** | **ಇರಾನ್ ಮತ್ತು ಒಮಾನ್** ನಡುವೆ; **ಪರ್ಷಿಯನ್ ಕೊಲ್ಲಿ → ಒಮಾನ್ ಕೊಲ್ಲಿ → ಅರಬ್ಬಿ ಸಮುದ್ರ**ವನ್ನು ಸಂಪರ್ಕಿಸುತ್ತದೆ | ಇರಾನ್ ಹೋರ್ಮುಜ್ ಜಲಸಂಧಿಯನ್ನು ಮುಚ್ಚುವ ಬೆದರಿಕೆ ನೀಡಿದ ಕಾರಣ ತೈಲ ಬೆಲೆ ಏರಿಕೆ ಆತಂಕ ಹೆಚ್ಚಾಗಿದೆ. ಇದು ಜಗತ್ತಿನ ಪ್ರಮುಖ ತೈಲ ಸಾಗಣೆ ಚೋಕ್ ಪಾಯಿಂಟ್‌ಗಳಲ್ಲಿ ಒಂದು. | ಪ್ರಿಲಿಮ್ಸ್: ಜಲಸಂಧಿ, ತೈಲ ಮಾರ್ಗ, ಸುತ್ತಮುತ್ತಲಿನ ದೇಶಗಳು |
| **ಪರ್ಷಿಯನ್ ಕೊಲ್ಲಿ** | ಇರಾನ್, ಇರಾಕ್, ಕುವೈತ್, ಸೌದಿ ಅರೇಬಿಯಾ, ಬಹರೈನ್, ಖತಾರ್, ಯುಎಇಗಳಿಂದ ಸುತ್ತುವರಿದ ಕೊಲ್ಲಿ | ಸಂಘರ್ಷ ಮತ್ತು ಇಂಧನದ ಕೇಂದ್ರ ಪ್ರದೇಶ; ತೈಲ ಮತ್ತು LNG ರಫ್ತು ಮಾರ್ಗಗಳು ಪರಿಣಾಮಕ್ಕೆ ಒಳಗಾಗಬಹುದು. | ನಕ್ಷೆ: ಪರ್ಷಿಯನ್ ಕೊಲ್ಲಿಗೆ ತಾಗಿರುವ ದೇಶಗಳು |
| **ಒಮಾನ್ ಕೊಲ್ಲಿ** | ಒಮಾನ್, ಇರಾನ್ ಮತ್ತು ಅರಬ್ಬಿ ಸಮುದ್ರದ ನಡುವೆ | ಹೋರ್ಮುಜ್‌ನಿಂದ ಮುಕ್ತ ಸಮುದ್ರಕ್ಕೆ ಹೊರಡುವ ದಾರಿ; ನೌಕಾ ಚಟುವಟಿಕೆ ಮತ್ತು ಟ್ಯಾಂಕರ್ ಸಂಚಾರಕ್ಕೆ ಮುಖ್ಯ | ಹೋರ್ಮುಜ್ ಅನ್ನು ಅರಬ್ಬಿ ಸಮುದ್ರಕ್ಕೆ ಸಂಪರ್ಕಿಸುತ್ತದೆ |

| ಸ್ಥಳ / ಪ್ರದೇಶ | ಸ್ಥಳದ ಸುಳಿವು | ಏಕೆ ಸುದ್ದಿಯಲ್ಲಿದೆ? | ಪರೀಕ್ಷಾ ದೃಷ್ಟಿಯಿಂದ |
|---|---|---|---|
| **ಅರಬ್ಬಿ ಸಮುದ್ರ** | ಭಾರತದ ಪಶ್ಚಿಮ ಭಾಗದಲ್ಲಿ; ಇರಾನ್–ಪಾಕಿಸ್ತಾನ–ಒಮಾನ್ ದಕ್ಷಿಣ ಭಾಗದಲ್ಲಿ | ಕೊಲ್ಲಿ ಪ್ರದೇಶದ ತೈಲವು ಭಾರತ ಮತ್ತು ಏಷ್ಯಾಕ್ಕೆ ಬರುವ ಅಂತಿಮ ಸಮುದ್ರ ಮಾರ್ಗ | ಭಾರತದ ಇಂಧನ ಭದ್ರತೆ |
| **ಕೆಂಪು ಸಮುದ್ರ** | ಆಫ್ರಿಕಾ ಮತ್ತು ಅರೇಬಿಯನ್ ಉಪಖಂಡದ ನಡುವೆ | ಯೆಮನ್‌ನ ಹೌತಿ ಗುಂಪುಗಳು ಇಸ್ರೇಲ್‌ಗೆ ಸಂಬಂಧಿಸಿದ ಹಡಗುಗಳಿಗೆ ಬೆದರಿಕೆ ನೀಡಿದ ಕಾರಣ ಸುದ್ದಿಯಲ್ಲಿ | ಪರ್ಯಾಯ ವ್ಯಾಪಾರ ಮಾರ್ಗ; ಸೂಯೆಜ್ ಕಾಲುವೆ ಸಂಪರ್ಕ |
| **ಬಾಬ್-ಎಲ್-ಮಂಡೆಬ್ ಜಲಸಂಧಿ** | ಯೆಮನ್ ಮತ್ತು ಜಿಬೂಟಿ/ಎರಿಟ್ರಿಯಾ ನಡುವೆ; ಕೆಂಪು ಸಮುದ್ರವನ್ನು ಅಡನ್ ಕೊಲ್ಲಿಗೆ ಸಂಪರ್ಕಿಸುತ್ತದೆ | ಹೌತಿ ಬೆದರಿಕೆಗಳಿಂದ ಕೆಂಪು ಸಮುದ್ರ–ಸೂಯೆಜ್ ವ್ಯಾಪಾರ ಮಾರ್ಗಕ್ಕೆ ಅಡಚಣೆ ಉಂಟಾಗಬಹುದು | ಚೋಕ್‌ಪಾಯಿಂಟ್: ಕೆಂಪು ಸಮುದ್ರ ↔ ಅಡನ್ ಕೊಲ್ಲಿ |
| **ಸೂಯೆಜ್ ಕಾಲುವೆ** | ಈಜಿಪ್ಟ್‌ನಲ್ಲಿ; ಕೆಂಪು ಸಮುದ್ರವನ್ನು ಮೆಡಿಟರೇನಿಯನ್ ಸಮುದ್ರಕ್ಕೆ ಸಂಪರ್ಕಿಸುತ್ತದೆ | ಕೆಂಪು ಸಮುದ್ರದಲ್ಲಿ ಅಡಚಣೆ ಉಂಟಾದರೆ ಏಷ್ಯಾ–ಯುರೋಪ್ ವ್ಯಾಪಾರಕ್ಕೆ ಪರಿಣಾಮ | ಚೋಕ್‌ಪಾಯಿಂಟ್ + ಜಾಗತಿಕ ವ್ಯಾಪಾರ ಮಾರ್ಗ |

## 2. ಇರಾನ್‌ನಲ್ಲಿ ಸುದ್ದಿಯಲ್ಲಿರುವ ಪ್ರಮುಖ ಸ್ಥಳಗಳು

| ಸ್ಥಳ | ಸ್ಥಳ / ಲಕ್ಷಣ | ಮಹತ್ವ |
|---|---|---|
| **ಟೆಹ್ರಾನ್** | ಇರಾನ್‌ನ ರಾಜಧಾನಿ | ರಾಜಕೀಯ ಮತ್ತು ಸೈನಿಕ ಕಮಾಂಡ್ ಕೇಂದ್ರ; ರಾಜತಾಂತ್ರಿಕ ಮತ್ತು ಸೈನಿಕ ಸುದ್ದಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ |
| **ನಟಾನ್ಜ್** | ಮಧ್ಯ ಇರಾನ್ | ಪ್ರಮುಖ ಯುರೇನಿಯಂ ಸಮೃದ್ಧೀಕರಣ ಕೇಂದ್ರ; ಅಮೆರಿಕ–ಇಸ್ರೇಲ್ ದಾಳಿಗಳ ಸಂದರ್ಭದಲ್ಲಿ ಸುದ್ದಿಯಲ್ಲಿತ್ತು |
| **ಫೋರ್ಡೋ** | ಇರಾನ್‌ನ ಕೋಮ್ ಸಮೀಪ | ಭೂಗರ್ಭ ಅಣು ಸಮೃದ್ಧೀಕರಣ ಕೇಂದ್ರ; ನಟಾನ್ಜ್ ಮತ್ತು ಇಸ್ಫಹಾನ್ ಜೊತೆಗೆ ಪರೀಕ್ಷೆಯಲ್ಲಿ ಕೇಳಬಹುದಾದ ಸ್ಥಳ |
| **ಇಸ್ಫಹಾನ್** | ಮಧ್ಯ ಇರಾನ್ | ಪ್ರಮುಖ ಅಣು ತಂತ್ರಜ್ಞಾನ / ಸಂಶೋಧನಾ ಕೇಂದ್ರ; ಇರಾನ್‌ನ ಪ್ರಮುಖ ಅಣು ಸ್ಥಳಗಳಲ್ಲಿ ಒಂದು |
| **ಸೌತ್ ಪಾರ್ಸ್ ಅನಿಲ ಕ್ಷೇತ್ರ** | ಪರ್ಷಿಯನ್ ಕೊಲ್ಲಿಯ ಸಮುದ್ರದಡಿ; ಖತಾರ್‌ನ ನಾರ್ತ್ ಫೀಲ್ಡ್ ಜೊತೆಗೆ ಹಂಚಿಕೊಂಡಿದೆ | ಜಗತ್ತಿನ ಅತಿ ದೊಡ್ಡ ಸಮುದ್ರದಡಿ ನೈಸರ್ಗಿಕ ಅನಿಲ ಕ್ಷೇತ್ರ; ಇರಾನ್‌ನ ಅನಿಲ ಉತ್ಪಾದನೆ ಮತ್ತು ಇಂಧನ ಭದ್ರತೆಗೆ ಮುಖ್ಯ |
| **ಅಸಲುಯೆಹ್** | ಇರಾನ್‌ನ ಪರ್ಷಿಯನ್ ಕೊಲ್ಲಿ ಕರಾವಳಿ | ಸೌತ್ ಪಾರ್ಸ್ ಅನಿಲ ಕ್ಷೇತ್ರಕ್ಕೆ ಸಂಬಂಧಿಸಿದ ಸಂಸ್ಕರಣಾ ಕೇಂದ್ರ; ಇಂಧನ ಮೂಲಸೌಕರ್ಯದ ಮೇಲೆ ದಾಳಿಗಳ ನಂತರ ಸುದ್ದಿಯಲ್ಲಿ |
| **ಬಂದರ್ ಅಬ್ಬಾಸ್** | ದಕ್ಷಿಣ ಇರಾನ್; ಹೋರ್ಮುಜ್ ಜಲಸಂಧಿ ಸಮೀಪ | ಹೋರ್ಮುಜ್ ಸಮೀಪದ ಪ್ರಮುಖ ಬಂದರು ಮತ್ತು ನೌಕಾ ನೆಲೆ |
| **ಕೇಶ್ಮ್ ದ್ವೀಪ** | ಹೋರ್ಮುಜ್ ಜಲಸಂಧಿ ಸಮೀಪ | ಇರಾನ್‌ನ ಹೋರ್ಮುಜ್ ಕರಾವಳಿಯ ಸಮೀಪದ ಕಾರ್ಯತಂತ್ರದ ದ್ವೀಪ |

Dr Rajkumar IAS/KAS Academy

## 3. ಸುದ್ದಿಯಲ್ಲಿರುವ ಕೊಲ್ಲಿ ರಾಷ್ಟ್ರಗಳು

| ದೇಶ / ಸ್ಥಳ | ಈಗ ಏಕೆ ಮುಖ್ಯ? | ಪ್ರಿಲಿಮ್ಸ್ ಕೇಂದ್ರೀಕರಣ |
|---|---|---|
| **ಒಮಾನ್** | ಇರಾನ್ ಜೊತೆಗೆ ಹೋರ್ಮುಜ್ ಜಲಸಂಧಿಯ ದಕ್ಷಿಣ ಭಾಗವನ್ನು ನಿಯಂತ್ರಿಸುತ್ತದೆ; ಇರಾನ್ ಸಂಬಂಧಿತ ರಾಜತಾಂತ್ರಿಕ ಮಧ್ಯಸ್ಥಿಕೆಯಲ್ಲಿ ಪಾತ್ರ | ಮುಸಂದಮ್ ಉಪಖಂಡ, ಒಮಾನ್ ಕೊಲ್ಲಿ |
| **ಯುಎಇ** | ಫುಜೈರಾ ಬಂದರು ಮತ್ತು ಇಂಧನ ಮೂಲಸೌಕರ್ಯ ಮುಖ್ಯ, ಏಕೆಂದರೆ ಫುಜೈರಾ ಹೋರ್ಮುಜ್ ಜಲಸಂಧಿಯ ಹೊರಭಾಗದಲ್ಲಿದೆ | ಅಬುಧಾಬಿ, ದುಬೈ, ಫುಜೈರಾ, ಹಬ್ಷಾನ್ |
| **ಖತಾರ್** | ಪ್ರಮುಖ LNG ಉತ್ಪಾದಕ; ರಾಸ್ ಲಾಫಾನ್ ಮತ್ತು ನಾರ್ತ್ ಫೀಲ್ಡ್ / ಸೌತ್ ಪಾರ್ಸ್ ಪ್ರದೇಶ ಮುಖ್ಯ | ನಾರ್ತ್ ಫೀಲ್ಡ್, ರಾಸ್ ಲಾಫಾನ್, ಅಲ್ ಉದೈದ್ ವಾಯುನೆಲೆ |
| **ಬಹರೈನ್** | ಅಮೆರಿಕದ Fifth Fleet ನೆಲೆ ಇರುವ ದೇಶ; ಇರಾನ್ ಸಂಬಂಧಿತ ಸೈನಿಕ ಉದ್ವಿಗ್ನತೆಯಿಂದ ಸುದ್ದಿಯಲ್ಲಿ | ಮನಾಮಾ, ಪರ್ಷಿಯನ್ ಕೊಲ್ಲಿಯ ದ್ವೀಪ ರಾಷ್ಟ್ರ |
| **ಕುವೈತ್** | ಅಮೆರಿಕದ ಸೈನಿಕ ಹಾಜರಾತಿ ಮತ್ತು ಕೊಲ್ಲಿ ತೈಲ ಮೂಲಸೌಕರ್ಯದಿಂದ ಮಹತ್ವದ್ದು | ಉತ್ತರ ಪರ್ಷಿಯನ್ ಕೊಲ್ಲಿ |
| **ಸೌದಿ ಅರೇಬಿಯಾ** | ಪ್ರಮುಖ ತೈಲ ಉತ್ಪಾದಕ; ಕೊಲ್ಲಿ ಇಂಧನ ಮೂಲಸೌಕರ್ಯಕ್ಕೆ ಅಡಚಣೆ ಉಂಟಾದರೆ ಜಾಗತಿಕ ತೈಲ ಮಾರುಕಟ್ಟೆಗೆ ಪರಿಣಾಮ | ಅರಾಮ್ಕೊ, ರಾಸ್ ತನೂರಾ, ಪೂರ್ವ ತೈಲ ವಲಯ |
| **ಜೋರ್ಡನ್** | ವಿಶಾಲ ಪ್ರಾದೇಶಿಕ ಉದ್ವಿಗ್ನತೆಯಲ್ಲಿ ಅಮೆರಿಕದ ನೆಲೆಗಳು / ದಾಳಿಗಳ ವಿಚಾರದಲ್ಲಿ ಸುದ್ದಿಗೆ ಬಂದಿದೆ | ಕೊಲ್ಲಿ ರಾಷ್ಟ್ರವಲ್ಲ; ಇಸ್ರೇಲ್, ಸಿರಿಯಾ, ಇರಾಕ್, ಸೌದಿ ಅರೇಬಿಯಾ ಗಡಿಗಳನ್ನು ಹೊಂದಿದೆ |

## 4. ಇಸ್ರೇಲ್–ಲೆವಾಂಟ್–ಪ್ರಾಕ್ಸಿ ಸಂಘರ್ಷ ಪ್ರದೇಶಗಳು

| ಪ್ರದೇಶ | ಏಕೆ ಸುದ್ದಿಯಲ್ಲಿದೆ? | ಪರೀಕ್ಷಾ ದೃಷ್ಟಿಯಿಂದ |
|---|---|---|
| **ಇಸ್ರೇಲ್** | ಇರಾನ್ ಜೊತೆ ನೇರ ಸಂಘರ್ಷ; ಕ್ಷಿಪಣಿ ಮತ್ತು ಡ್ರೋನ್ ದಾಳಿಗಳು | ಟೆಲ್ ಅವೀವ್, ಹೈಫಾ, ನೆಗೇವ್, ಗೋಲನ್ ಹೈಟ್ಸ್ |
| **ಲೆಬನಾನ್** | ಹಿಜ್ಬುಲ್ಲಾ ಅಂಶ; ಇಸ್ರೇಲ್–ಲೆಬನಾನ್ ಕದನ ವಿರಾಮವು ವಿಶಾಲ ಇರಾನ್ ಯುದ್ಧ ರಾಜತಾಂತ್ರಿಕತೆಯ ಭಾಗವಾಗಿದೆ | ಹಿಜ್ಬುಲ್ಲಾ, ಲಿಟಾನಿ ನದಿ, ಬ್ಲೂ ಲೈನ್ |
| **ಸಿರಿಯಾ** | ಇರಾನ್ ಬೆಂಬಲಿತ ಗುಂಪುಗಳು ಮತ್ತು ಲೆಬನಾನ್ ನಡುವಿನ ಕಾರ್ಯತಂತ್ರದ ಕಾರಿಡಾರ್; ಇಸ್ರೇಲ್ ದಾಳಿಗಳು ಸಿರಿಯಾದ ಪ್ರದೇಶಗಳನ್ನೂ ಒಳಗೊಂಡಿರುತ್ತವೆ | ಡಮಾಸ್ಕಸ್, ಗೋಲನ್ ಹೈಟ್ಸ್, ಇರಾನ್–ಹಿಜ್ಬುಲ್ಲಾ ಕಾರಿಡಾರ್ |
| **ಇರಾಕ್** | ಇರಾನ್‌ನ ಪಶ್ಚಿಮ ನೆರೆ ರಾಷ್ಟ್ರ; ಇರಾನ್ ಬೆಂಬಲಿತ ಮಿಲಿಷಿಯಾ ಗುಂಪುಗಳು ಮತ್ತು ಅಮೆರಿಕದ ಹಾಜರಾತಿ | ಶಟ್ ಅಲ್-ಅರಬ್, ಬಸ್ರಾ, ಬಾಗ್ದಾದ್ |
| **ಯೆಮನ್** | ಹೌತಿ ಗುಂಪುಗಳು ಕೆಂಪು ಸಮುದ್ರದಲ್ಲಿ ಇಸ್ರೇಲ್‌ಗೆ ಸಂಬಂಧಿಸಿದ ಹಡಗುಗಳಿಗೆ ಬೆದರಿಕೆ ನೀಡಿದ ಕಾರಣ | ಹೌತಿ, ಬಾಬ್-ಎಲ್-ಮಂಡೆಬ್, ಅಡನ್ ಕೊಲ್ಲಿ |

## ಭಾರತದ ದೃಷ್ಟಿಯಿಂದ ಪ್ರಸ್ತುತ ವಿಷಯ

ಭಾರತವು ವಿಶೇಷವಾಗಿ **ಹೋರ್ಮುಜ್ ಜಲಸಂಧಿ, ಚಾಬಹಾರ್ ಬಂದರು, ಪರ್ಷಿಯನ್ ಕೊಲ್ಲಿ, ಕೆಂಪು ಸಮುದ್ರ, ಬಾಬ್-ಎಲ್-ಮಂಡೆಬ್ ಮತ್ತು ಸೂಯೆಜ್ ಕಾಲುವೆ** ಮೇಲೆ ಗಮನ ಇರಿಸಬೇಕು. ಕಾರಣ,

Dr. Rajkumar IAS/KAS Academy

ಭಾರತದ ಕಚ್ಚಾ ತೈಲ ಆಮದು, ವಿದೇಶಿ ವ್ಯಾಪಾರ, ಕೊಲ್ಲಿ ರಾಷ್ಟ್ರಗಳಲ್ಲಿನ ಭಾರತೀಯರ ಭದ್ರತೆ ಮತ್ತು ಸಮುದ್ರ ಮಾರ್ಗಗಳ ಸುರಕ್ಷತೆ ಈ ಪ್ರದೇಶಗಳ ಮೇಲೆ ಅವಲಂಬಿತವಾಗಿದೆ.

**ಪರೀಕ್ಷೆಗೆ ನೆನಪಿಡಿ:**

**ಇರಾನ್ → ಹೋರ್ಮುಜ್ ಜಲಸಂಧಿ → ಒಮಾನ್ ಕೊಲ್ಲಿ → ಅರಬ್ಬಿ ಸಮುದ್ರ → ಭಾರತ**

ಇದು ಭಾರತದ ಪಶ್ಚಿಮ ಏಷ್ಯಾ ಇಂಧನ ಭದ್ರತಾ ಪ್ರಶ್ನೆಯಲ್ಲಿ ಅತ್ಯಂತ ಮುಖ್ಯ ಮಾರ್ಗ.

## ಸಾಧ್ಯವಾದ MCQ ವಿಷಯಗಳು

1. **ಹೋರ್ಮುಜ್ ಜಲಸಂಧಿ ಸಂಪರ್ಕಿಸುವುದು:** ಪರ್ಷಿಯನ್ ಕೊಲ್ಲಿ ಮತ್ತು ಒಮಾನ್ ಕೊಲ್ಲಿ.
2. **ಹೋರ್ಮುಜ್ ಸುತ್ತಲಿನ ದೇಶಗಳು:** ಇರಾನ್ ಮತ್ತು ಒಮಾನ್; ಯುಎಇ ಸಮೀಪದಲ್ಲಿದೆ.
3. **ಬಾಬ್-ಎಲ್-ಮಂಡೆಬ್ ಸಂಪರ್ಕಿಸುವುದು:** ಕೆಂಪು ಸಮುದ್ರ ಮತ್ತು ಅಡನ್ ಕೊಲ್ಲಿ.
4. **ಸೌತ್ ಪಾರ್ಸ್ / ನಾರ್ತ್ ಫೀಲ್ಡ್:** ಇರಾನ್ ಮತ್ತು ಖತಾರ್ ಹಂಚಿಕೊಂಡಿರುವ ಅನಿಲ ಕ್ಷೇತ್ರ.
5. **ಚಾಬಹಾರ್ ಬಂದರು:** ಇರಾನ್‌ನಲ್ಲಿ ಇದೆ; ಭಾರತಕ್ಕೆ ಅಫ್ಘಾನಿಸ್ತಾನ ಮತ್ತು ಮಧ್ಯ ಏಷ್ಯಾಗೆ ಸಂಪರ್ಕ ನೀಡಲು ಮುಖ್ಯ.
6. **ಕೆಂಪು ಸಮುದ್ರ ಸಂಕಷ್ಟ:** ಯೆಮನ್‌ನ ಹೌತಿ ಗುಂಪುಗಳು ಮತ್ತು ಜಾಗತಿಕ ಹಡಗು ಸಾಗಣೆಗೆ ಸಂಬಂಧಿಸಿದೆ.

**ಪಶ್ಚಿಮ ಏಷ್ಯಾ**

| | **ವಿವರಣೆ** |
|---|---|
| **ಪಶ್ಚಿಮ ಏಷ್ಯಾದ ಅರ್ಥ** | ಪಶ್ಚಿಮ ಏಷ್ಯಾ ಎಂದರೆ **ಏಷ್ಯಾ ಖಂಡದ ಪಶ್ಚಿಮ ಭಾಗ**. ಇದು **ಯುರೋಪ್, ಆಫ್ರಿಕಾ ಮತ್ತು ದಕ್ಷಿಣ ಏಷ್ಯಾ**ಗಳ ನಡುವೆ ಇದೆ. |
| **ಸಾಮಾನ್ಯವಾಗಿ ಕರೆಯುವ ಹೆಸರು** | **ಮಧ್ಯಪ್ರಾಚ್ಯ / Middle East** |
| **ಪಶ್ಚಿಮ ಏಷ್ಯಾ ಎಂದು ಏಕೆ ಕರೆಯುತ್ತಾರೆ?** | ಭಾರತ/ಏಷ್ಯಾದ ಭೌಗೋಳಿಕ ದೃಷ್ಟಿಯಿಂದ ಈ ಪ್ರದೇಶವು **ಏಷ್ಯಾದ ಪಶ್ಚಿಮ ಭಾಗದಲ್ಲಿ** ಇರುವುದರಿಂದ ಇದನ್ನು ಪಶ್ಚಿಮ ಏಷ್ಯಾ ಎಂದು ಕರೆಯುತ್ತಾರೆ. |
| **ಸ್ಥಳ** | **ಮೆಡಿಟರೇನಿಯನ್ ಸಮುದ್ರ, ಕೆಂಪು ಸಮುದ್ರ, ಅರಬ್ಬಿ ಸಮುದ್ರ, ಪರ್ಷಿಯನ್ ಕೊಲ್ಲಿ ಮತ್ತು ಕ್ಯಾಸ್ಪಿಯನ್ ಸಮುದ್ರ**ಗಳ ನಡುವೆ ಇದೆ. |
| **ಮಹತ್ವ** | ತೈಲ, ನೈಸರ್ಗಿಕ ಅನಿಲ, ಇಸ್ಲಾಂ ಧರ್ಮದ ಪವಿತ್ರ ಸ್ಥಳಗಳು, ವ್ಯಾಪಾರ ಮಾರ್ಗಗಳು, ಕಾರ್ಯತಂತ್ರದ ಜಲಸಂಧಿಗಳು ಮತ್ತು ಭಾರತದ ಇಂಧನ ಭದ್ರತೆಗಾಗಿ ಮಹತ್ವದ್ದು. |
| **ಪ್ರಮುಖ ಸಂಘರ್ಷ ಪ್ರದೇಶಗಳು** | ಇಸ್ರೇಲ್–ಪ್ಯಾಲೆಸ್ಟೈನ್, ಇರಾನ್–ಇಸ್ರೇಲ್, ಯೆಮನ್, ಸಿರಿಯಾ, ಲೆಬನಾನ್, ಇರಾಕ್ |
| **ಪ್ರಮುಖ ಜಲಸಂಧಿಗಳು / ಚೋಕ್‌ಪಾಯಿಂಟ್‌ಗಳು** | ಹೋರ್ಮುಜ್ ಜಲಸಂಧಿ, ಬಾಬ್-ಎಲ್-ಮಂಡೆಬ್ ಜಲಸಂಧಿ, ಸೂಯೆಜ್ ಕಾಲುವೆ, ಟರ್ಕಿಶ್ ಜಲಸಂಧಿಗಳು |
| **ಭಾರತದ ಆಸಕ್ತಿ** | ಕಚ್ಚಾ ತೈಲ ಆಮದು, ಕೊಲ್ಲಿ ರಾಷ್ಟ್ರಗಳಲ್ಲಿನ ಭಾರತೀಯ ಕಾರ್ಮಿಕರು, ವಿದೇಶಿ ಹಣ ರವಾನೆ, ಚಾಬಹಾರ್ ಬಂದರು, ವ್ಯಾಪಾರ ಮಾರ್ಗಗಳ ಭದ್ರತೆ |

Dr. Rajkumar IAS/KAS Academy

**ಪಶ್ಚಿಮ ಏಷ್ಯಾದ ದೇಶಗಳು**

| ಪ್ರದೇಶ / ಗುಂಪು | ದೇಶಗಳು |
|---|---|
| **ಕೊಲ್ಲಿ ರಾಷ್ಟ್ರಗಳು / GCC** | ಸೌದಿ ಅರೇಬಿಯಾ, ಯುಎಇ, ಖತಾರ್, ಕುವೈತ್, ಬಹರೈನ್, ಒಮಾನ್ |
| **ಇರಾನ್–ಇರಾಕ್ ಪ್ರದೇಶ** | ಇರಾನ್, ಇರಾಕ್ |
| **ಲೆವಾಂಟ್ ಪ್ರದೇಶ** | ಇಸ್ರೇಲ್, ಪ್ಯಾಲೆಸ್ಟೈನ್, ಲೆಬನಾನ್, ಸಿರಿಯಾ, ಜೋರ್ಡನ್ |
| **ಅರೇಬಿಯನ್ ಉಪಖಂಡ** | ಸೌದಿ ಅರೇಬಿಯಾ, ಯೆಮನ್, ಒಮಾನ್, ಯುಎಇ, ಖತಾರ್, ಬಹರೈನ್, ಕುವೈತ್ |
| **ಅನಾಟೋಲಿಯಾ / ಪೂರ್ವ ಮೆಡಿಟರೇನಿಯನ್ ಪ್ರದೇಶ** | ತುರ್ಕಿಯೆ, ಸೈಪ್ರಸ್ |
| **ಕೆಲವೊಮ್ಮೆ ಸೇರಿಸಲಾಗುವ ಕಾಕಸಸ್ ಪ್ರದೇಶ** | ಆರ್ಮೇನಿಯಾ, ಅಜರ್ಬೈಜಾನ್, ಜಾರ್ಜಿಯಾ |

**ಪರೀಕ್ಷೆಗೆ ಬಹಳ ಮುಖ್ಯ**

| ಪದ | ಅರ್ಥ |
|---|---|
| **ಪಶ್ಚಿಮ ಏಷ್ಯಾ** | ಭೌಗೋಳಿಕ ಪದ |
| **ಮಧ್ಯಪ್ರಾಚ್ಯ** | ರಾಜಕೀಯ / ಕಾರ್ಯತಂತ್ರದ ಪದ; ಮುಖ್ಯವಾಗಿ ಪಾಶ್ಚಾತ್ಯ ರಾಷ್ಟ್ರಗಳು ಬಳಸುವ ಪದ |
| **ಕೊಲ್ಲಿ ರಾಷ್ಟ್ರಗಳು** | ಪರ್ಷಿಯನ್ ಕೊಲ್ಲಿಯ ಸುತ್ತಲಿನ ದೇಶಗಳು, ವಿಶೇಷವಾಗಿ GCC ಸದಸ್ಯ ರಾಷ್ಟ್ರಗಳು |
| **ಲೆವಾಂಟ್** | ಪೂರ್ವ ಮೆಡಿಟರೇನಿಯನ್ ಪ್ರದೇಶ: ಇಸ್ರೇಲ್, ಪ್ಯಾಲೆಸ್ಟೈನ್, ಲೆಬನಾನ್, ಸಿರಿಯಾ, ಜೋರ್ಡನ್ |
| **ಅರೇಬಿಯನ್ ಉಪಖಂಡ** | ಸೌದಿ ಅರೇಬಿಯಾ, ಯೆಮನ್, ಒಮಾನ್, ಯುಎಇ, ಖತಾರ್, ಬಹರೈನ್, ಕುವೈತ್ |

**ಸರಳ ವಾಕ್ಯ:**
**ಪಶ್ಚಿಮ ಏಷ್ಯಾ = ಏಷ್ಯಾದ ಮಧ್ಯಪ್ರಾಚ್ಯ ಪ್ರದೇಶ. ಇದು ತೈಲ, ಇಸ್ಲಾಂ ಧರ್ಮ, ಭೂರಾಜಕೀಯ ಮತ್ತು ಭಾರತದ ಇಂಧನ ಭದ್ರತೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದು.**

Dr. Rajkumar IAS/KAS Academy

## ಪ್ರತಿ ಯೂನಿಟ್‌ಗೆ ₹9.08ರಂತೆ ರಾಷ್ಟ್ರೀಯ ಗ್ರಿಡ್‌ಗೆ ಮಾರಾಟ: ಜಾರ್ಜ್

# ವಿದ್ಯುತ್ ಮಾರಾಟ: ₹423 ಕೋಟಿ ಗಳಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರತಿ ಯೂನಿಟ್‌ಗೆ ₹9.08ರಂತೆ ಎರಡೂವರೆ ತಿಂಗಳಲ್ಲಿ ₹423 ಕೋಟಿ ಮೊತ್ತದ ವಿದ್ಯುತ್ ಅನ್ನು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ (ಪಿಸಿಕೆಎಲ್) ಮೂಲಕ ರಾಷ್ಟ್ರೀಯ ಗ್ರಿಡ್‌ಗೆ ಮಾರಾಟ ಮಾಡಲಾಗಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಎರಡನೇ ಬಾರಿಗೆ ಇಂಧನ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಬುಧವಾರ ಇಲ್ಲಿ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಅವರು, ಮುಂಗಾರಿಗೆ ಸಿದ್ಧತೆ, ಕುಸುಮ್ ಯೋಜನೆ, ಮುಖ್ಯಮಂತ್ರಿ ಸೌರ ಕೃಷಿ ಯೋಜನೆ ಸೇರಿದಂತೆ ವಿವಿಧ



ಕೆ.ಜೆ. ಜಾರ್ಜ್

ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ಹಗಲಿನ ವೇಳೆ ಕಡಿಮೆ ದರಕ್ಕೆ ವಿದ್ಯುತ್ ಖರೀದಿಸಲಾಗಿದೆ. ಅಲ್ಲದೆ ರಾತ್ರಿ ವೇಳೆ ಜಲ ಮತ್ತು ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ವಿದ್ಯುತ್ ಉತ್ಪಾದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗಿದೆ.

ಈ ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆಯನ್ನು ಸಮರ್ಥವಾಗಿ ಎದುರಿಸುವ ಜತೆಗೆ ಈ ಸಾಧನೆ ಮಾಡಿದ್ದೇವೆ. ವಿದ್ಯುತ್ ಉತ್ಪಾದನೆ, ಗ್ರಿಡ್ ನಿರ್ವಹಣೆ ಮತ್ತು ಇಂಧನ ಮಾರುಕಟ್ಟೆಯಲ್ಲಿನ ವ್ಯಾವಹಾರಿಕ ಜಾಣ್ಮೆಯಿಂದಾಗಿ ಇದು ಸಾಧ್ಯವಾಗಿದೆ' ಎಂದರು.

**ಮುಂಗಾರಿಗೆ ಸಿದ್ಧತೆ:** ಮಳೆ ಮತ್ತು ಗಾಳಿಯಿಂದ ಹಾನಿಯಾದಾಗ ತ್ವರಿತವಾಗಿ ದುರಸ್ತಿ ಕಾರ್ಯಗಳನ್ನು ಕೈಗೊಂಡು, ವಿದ್ಯುತ್ ಪೂರೈಕೆಗೆ ಯಾವುದೇ ರೀತಿಯ ಸಮಸ್ಯೆ ಆಗದಂತೆ ಎಚ್ಚರವಹಿಸಬೇಕು ಎಂದು ಜಾರ್ಜ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಈ ಕುರಿತು ಮಾಹಿತಿ ನೀಡಿದ ಅಧಿಕಾರಿಗಳು, 'ಎಸ್ಕಾಂಗಳ ವ್ಯಾಪ್ತಿಯಲ್ಲಿ ಹಾನಿಗೊಳಗಾದ 33,400 ಕಂಬಗಳು, 1,441 ವಿದ್ಯುತ್ ಪರಿವರ್ತಕಗಳು ಮತ್ತು 343.56 ಕಿ.ಮೀ. ವಿದ್ಯುತ್ ಮಾರ್ಗಗಳನ್ನು ಬದಲಾಯಿಸಲಾಗಿದೆ. 20,012 ಲೈನ್‌ಮೆನ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಮಳೆಗಾಲದ ಕಾರಣ ಹೆಚ್ಚುವರಿಯಾಗಿ 4,883 ಲೈನ್‌ಮೆನ್‌ಗಳನ್ನು ನೇಮಿಸಲಾಗಿದೆ. 99,530 ಕಂಬಗಳು, 12,733 ವಿದ್ಯುತ್ ಪರಿವರ್ತಕಗಳ ದಾಸ್ತಾನು ಇದೆ' ಎಂದರು.

ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ರಾಮ್ ಪ್ರಸಾತ್ ಮನೋಹರ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್, ಪಿಸಿಕೆಎಲ್ ವ್ಯವಸ್ಥಾಪಕ ನಿರ್ದೇಶಕ ಕೋದಂಡಪಾಣಿ, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ, ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

Publication Date
11/06/2026

Presented by ಪ್ರಜಾವಾಣಿ

Dr. Rajkumar IAS/KAS ,

## ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆ

**ಮುಖ್ಯ ಅರ್ಥ**: ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆ ಮುಖ್ಯವಾಗಿ **ಜಲವಿದ್ಯುತ್, ಉಷ್ಣ ವಿದ್ಯುತ್, ಸೌರ ಶಕ್ತಿ, ಗಾಳಿ ಶಕ್ತಿ, ಜೈವಿಕ ಇಂಧನ, ಕೋ-ಜನರೇಷನ್ ಮತ್ತು ಮಿನಿ ಹೈಡಲ್** ಮೂಲಗಳಿಂದ ಆಗುತ್ತದೆ. ರಾಜ್ಯದ ಇಂಧನ ವಲಯದಲ್ಲಿ ಈಗ **ನವೀಕರಿಸಬಹುದಾದ ಶಕ್ತಿ** ಅತ್ಯಂತ ವೇಗವಾಗಿ ಬೆಳೆಯುತ್ತಿದೆ.

## 1. **ಕರ್ನಾಟಕದ ವಿದ್ಯುತ್ ಉತ್ಪಾದನೆಯ ಪ್ರಮುಖ ಮೂಲಗಳು**

| ವಿದ್ಯುತ್ ಮೂಲ | ಕನ್ನಡ ಅರ್ಥ | ಕರ್ನಾಟಕದಲ್ಲಿ ಮಹತ್ವ |
|---|---|---|
| **Hydro Power** | ಜಲವಿದ್ಯುತ್ | ಪಶ್ಚಿಮ ಘಟ್ಟಗಳು, ಶರಾವತಿ, ಕಾಳಿ, ವರಾಹಿ, ಕೃಷ್ಣಾ ನದಿ ವ್ಯವಸ್ಥೆಯಿಂದ ಉತ್ಪಾದನೆ |
| **Thermal Power** | ಉಷ್ಣ ವಿದ್ಯುತ್ | ಕಲ್ಲಿದ್ದಲು ಆಧಾರಿತ ವಿದ್ಯುತ್; ರಾಯಚೂರು, ಬಳ್ಳಾರಿ, ಯರಮರಸ್ ಪ್ರಮುಖ ಕೇಂದ್ರಗಳು |
| **Solar Power** | ಸೌರ ವಿದ್ಯುತ್ | ಪಾವಗಡ ಸೌರ ಪಾರ್ಕ್, ಬಿಸಿಲು ಹೆಚ್ಚು ಇರುವ ಉತ್ತರ/ಮಧ್ಯ ಕರ್ನಾಟಕ ಪ್ರದೇಶಗಳು |
| **Wind Power** | ಗಾಳಿ ವಿದ್ಯುತ್ | ಗಾಳಿ ವೇಗ ಹೆಚ್ಚು ಇರುವ ಬೆಟ್ಟ ಪ್ರದೇಶಗಳು ಮತ್ತು ಒಣ ಪ್ರದೇಶಗಳು |
| **Mini Hydel** | ಸಣ್ಣ ಜಲವಿದ್ಯುತ್ | ಸಣ್ಣ ನದಿ/ಕಾಲುವೆ/ಅಣೆಕಟ್ಟುಗಳ ಮೂಲಕ ಉತ್ಪಾದನೆ |
| **Biomass** | ಜೈವಿಕ ಇಂಧನ ವಿದ್ಯುತ್ | ಕೃಷಿ ಅವಶೇಷ, ಬಯೋಮಾಸ್ ಮೂಲಕ ವಿದ್ಯುತ್ |
| **Co-generation** | ಸಹ-ಉತ್ಪಾದನೆ | ಸಕ್ಕರೆ ಕಾರ್ಖಾನೆಗಳಲ್ಲಿ ಬಗಾಸ್ ಬಳಸಿ ವಿದ್ಯುತ್ ಉತ್ಪಾದನೆ |
| **Captive Power** | ಸ್ವಂತ ಬಳಕೆಯ ವಿದ್ಯುತ್ | ಕೈಗಾರಿಕೆಗಳು ತಮ್ಮ ಅಗತ್ಯಕ್ಕೆ ತಾವೇ ಉತ್ಪಾದಿಸುವ ವಿದ್ಯುತ್ |

## 2. ಮೂಲವಾರು ಸ್ಥಾಪಿತ ಸಾಮರ್ಥ್ಯ – ಕರ್ನಾಟಕ

ಕರ್ನಾಟಕ ಇಂಧನ ಇಲಾಖೆಯ ಅಧಿಕೃತ ಪುಟದ ಪ್ರಕಾರ, **31.12.2022ರ ವೇಳೆಗೆ** ರಾಜ್ಯದ ಒಟ್ಟು ಸ್ಥಾಪಿತ ಸಾಮರ್ಥ್ಯ **31,669.41 MW** ಆಗಿತ್ತು. ಇದರಲ್ಲಿ, ಸೌರ, ಗಾಳಿ, ಜಲವಿದ್ಯುತ್ ಮತ್ತು ಉಷ್ಣ ವಿದ್ಯುತ್ ಪ್ರಮುಖ ಮೂಲಗಳಾಗಿವೆ. (Karnataka Energy Department)

| ಮೂಲ | ಸ್ಥಾಪಿತ ಸಾಮರ್ಥ್ಯ — MW |
|---|---:|
| ಜಲವಿದ್ಯುತ್ | 3,798 |
| ಉಷ್ಣ ವಿದ್ಯುತ್ | 5,020 |
| ಕೇಂದ್ರ ಉತ್ಪಾದನಾ ಪಾಲು — CGS | 4,294.35 |
| ಗಾಳಿ ವಿದ್ಯುತ್ | 5,224.89 |
| ಕೋ-ಜನರೇಷನ್ | 1,731.16 |
| ಮಿನಿ ಹೈಡಲ್ | 903.46 |
| ಬಯೋಮಾಸ್ | 139.03 |
| ಸೌರ ವಿದ್ಯುತ್ | 7,911.22 |
| ಕ್ಯಾಪ್ಟಿವ್ ವಿದ್ಯುತ್ | 997.30 |
| IPP | 1,200 |
| **ಒಟ್ಟು** | **31,669.41** |

## 3. 2026ರ ಪ್ರಸ್ತುತ ನವೀಕರಿಸಬಹುದಾದ ಶಕ್ತಿ ಸ್ಥಿತಿ

KREDL / MNRE ಮಾಹಿತಿಯ ಪ್ರಕಾರ, **ಏಪ್ರಿಲ್ 2026ರ ವೇಳೆಗೆ** ಕರ್ನಾಟಕದ ನವೀಕರಿಸಬಹುದಾದ ಶಕ್ತಿ ಸ್ಥಾಪಿತ ಸಾಮರ್ಥ್ಯ **25.84 GW** ಆಗಿದೆ. ಟಾಪ್ 5 ರಾಜ್ಯಗಳಲ್ಲಿ ಕರ್ನಾಟಕ 5ನೇ ಸ್ಥಾನದಲ್ಲಿದೆ. ಗಾಳಿ ವಿದ್ಯುತ್‌ನಲ್ಲಿ ಕರ್ನಾಟಕ **8.609 GW** ಸಾಮರ್ಥ್ಯದೊಂದಿಗೆ 3ನೇ ಸ್ಥಾನದಲ್ಲಿದ್ದು, ಸೌರ ವಿದ್ಯುತ್‌ನಲ್ಲಿ **10.61 GW** ಸಾಮರ್ಥ್ಯದೊಂದಿಗೆ 5ನೇ ಸ್ಥಾನದಲ್ಲಿದೆ.

| ವಿಭಾಗ | ಕರ್ನಾಟಕದ ಸ್ಥಿತಿ — ಏಪ್ರಿಲ್ 2026 |
|---|---:|
| ಒಟ್ಟು ನವೀಕರಿಸಬಹುದಾದ ಶಕ್ತಿ | 25.84 GW |
| ಗಾಳಿ ವಿದ್ಯುತ್ | 8.609 GW |
| ಸೌರ ವಿದ್ಯುತ್ | 10.61 GW |
| RE ಟಾಪ್ ರಾಜ್ಯಗಳಲ್ಲಿ ಸ್ಥಾನ | 5ನೇ ಸ್ಥಾನ |
| ಗಾಳಿ ಶಕ್ತಿಯಲ್ಲಿ ಸ್ಥಾನ | 3ನೇ ಸ್ಥಾನ |
| ಸೌರ ಶಕ್ತಿಯಲ್ಲಿ ಸ್ಥಾನ | 5ನೇ ಸ್ಥಾನ |

Dr. Rajkumar IAS/KAS Academy

## 4. ಕರ್ನಾಟಕದ ಪ್ರಮುಖ ವಿದ್ಯುತ್ ಸ್ಥಾವರಗಳು

| ವಿದ್ಯುತ್ ಸ್ಥಾವರ | ಪ್ರಕಾರ | ಜಿಲ್ಲೆ / ಪ್ರದೇಶ | ಸ್ಥಾಪಿತ ಸಾಮರ್ಥ್ಯ |
|---|---|---|---|
| **ರಾಯಚೂರು ಉಷ್ಣ ವಿದ್ಯುತ್ ಸ್ಥಾವರ — RTPS** | ಉಷ್ಣ ವಿದ್ಯುತ್ | ರಾಯಚೂರು | 1,720 MW |
| **ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರ — BTPS** | ಉಷ್ಣ ವಿದ್ಯುತ್ | ಬಳ್ಳಾರಿ | 1,700 MW |
| **ಯರಮರಸ್ ಉಷ್ಣ ವಿದ್ಯುತ್ ಸ್ಥಾವರ — YTPS** | ಉಷ್ಣ ವಿದ್ಯುತ್ | ರಾಯಚೂರು | 1,600 MW |
| **ಶರಾವತಿ ವಿದ್ಯುತ್ ಯೋಜನೆ** | ಜಲವಿದ್ಯುತ್ | ಶಿವಮೊಗ್ಗ | 1,035 MW |
| **ನಾಗಝರಿ / Nagjhari** | ಜಲವಿದ್ಯುತ್ | ಉತ್ತರ ಕನ್ನಡ | 900 MW |
| **ವರಾಹಿ ಯೋಜನೆ** | ಜಲವಿದ್ಯುತ್ | ಉಡುಪಿ / ಶಿವಮೊಗ್ಗ ಭಾಗ | 460 MW |
| **ಆಲಮಟ್ಟಿ** | ಜಲವಿದ್ಯುತ್ | ವಿಜಯಪುರ / ಬಾಗಲಕೋಟೆ ಭಾಗ | 290 MW |
| **ಗೆರುಸೊಪ್ಪಾ** | ಜಲವಿದ್ಯುತ್ | ಉತ್ತರ ಕನ್ನಡ | 240 MW |
| **ಕದ್ರಾ** | ಜಲವಿದ್ಯುತ್ | ಉತ್ತರ ಕನ್ನಡ | 150 MW |
| **ಕೋಡಸಳ್ಳಿ** | ಜಲವಿದ್ಯುತ್ | ಉತ್ತರ ಕನ್ನಡ | 120 MW |
| **ಸೂಪಾ** | ಜಲವಿದ್ಯುತ್ | ಉತ್ತರ ಕನ್ನಡ | 100 MW |
| **ಶಿವನಸಮುದ್ರ** | ಜಲವಿದ್ಯುತ್ | ಮಂಡ್ಯ / ಚಾಮರಾಜನಗರ ಭಾಗ | 42 MW |

ಈ ಸ್ಥಾವರಗಳ ಸಾಮರ್ಥ್ಯಗಳ ಪಟ್ಟಿಯನ್ನು ಕರ್ನಾಟಕ ಇಂಧನ ಇಲಾಖೆ ಪ್ರಕಟಿಸಿದೆ. (Karnataka Energy Department)

## 5. ಪಾವಗಡ ಸೌರ ಪಾರ್ಕ್

| ಅಂಶ | ಮಾಹಿತಿ |
|---|---|
| **ಸ್ಥಳ** | ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ |
| **ಪ್ರಕಾರ** | ಸೌರ ವಿದ್ಯುತ್ ಪಾರ್ಕ್ |
| **ಸಾಮರ್ಥ್ಯ** | 2,000 MW |
| **ವಿಶೇಷತೆ** | ಭಾರತದ ಪ್ರಮುಖ ಅಲ್ಟ್ರಾ ಮೆಗಾ ಸೌರ ಪಾರ್ಕ್‌ಗಳಲ್ಲಿ ಒಂದು |
| **ಪ್ರಾಮುಖ್ಯತೆ** | ಭೂಸ್ವಾಧೀನಕ್ಕೆ ಬದಲಾಗಿ ಭೂ ಲೀಸ್ ಮಾದರಿ; ರೈತರಿಗೆ ಆದಾಯ + ಸೌರ ವಿದ್ಯುತ್ ಉತ್ಪಾದನೆ |

PIB ಪ್ರಕಾರ, ಪಾವಗಡ ಸೌರ ಪಾರ್ಕ್ **2,000 MW ಸಾಮರ್ಥ್ಯದಿಂದ ಡಿಸೆಂಬರ್ 2019ರಿಂದ ಸಂಪೂರ್ಣ ಕಾರ್ಯಾಚರಣೆಯಲ್ಲಿದೆ**. (Press Information Bureau)

## 6. ಕರ್ನಾಟಕದಲ್ಲಿ ಜಲವಿದ್ಯುತ್ ಉತ್ಪಾದನೆ

| ನದಿ / ಕಣಿವೆ | ಪ್ರಮುಖ ಯೋಜನೆಗಳು |
|---|---|
| **ಶರಾವತಿ ನದಿ** | ಶರಾವತಿ, ಲಿಂಗನಮಕ್ಕಿ, ಗೆರುಸೊಪ್ಪಾ |
| **ಕಾಳಿ ನದಿ** | ನಾಗಝರಿ, ಸೂಪಾ, ಕದ್ರಾ, ಕೋಡಸಳ್ಳಿ |
| **ವರಾಹಿ ನದಿ** | ವರಾಹಿ ಜಲವಿದ್ಯುತ್ ಯೋಜನೆ |

Dr. Rajkumar IAS/KAS Academy

| ನದಿ / ಕಣಿವೆ | ಪ್ರಮುಖ ಯೋಜನೆಗಳು |
|---|---|
| **ಕೃಷ್ಣಾ ನದಿ** | ಆಲಮಟ್ಟಿ |
| **ಕಾವೇರಿ ನದಿ** | ಶಿವನಸಮುದ್ರ, ಶಿಂಷಾ |

**ಶಿವನಸಮುದ್ರ**ದಲ್ಲಿ 1902ರಿಂದ ಕಾರ್ಯನಿರ್ವಹಿಸುತ್ತಿರುವ ಜಲವಿದ್ಯುತ್ ಉತ್ಪಾದನಾ ಕೇಂದ್ರವು ಏಷ್ಯಾದ ಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ಒಂದಾಗಿ ಪ್ರಸಿದ್ಧವಾಗಿದೆ.

## 7. ಕರ್ನಾಟಕದಲ್ಲಿ ಸೌರ ಮತ್ತು ಗಾಳಿ ಶಕ್ತಿ ಏಕೆ ಹೆಚ್ಚು?

| ಕಾರಣ | ವಿವರಣೆ |
|---|---|
| **ಒಣ ಹವಾಮಾನ ಪ್ರದೇಶಗಳು** | ಉತ್ತರ ಕರ್ನಾಟಕ, ಮಧ್ಯ ಕರ್ನಾಟಕದಲ್ಲಿ ಸೂರ್ಯನ ಬೆಳಕು ಹೆಚ್ಚು |
| **ವಿಶಾಲ ಭೂ ಪ್ರದೇಶಗಳು** | ದೊಡ್ಡ ಸೌರ ಪಾರ್ಕ್‌ಗಳಿಗೆ ಅನುಕೂಲ |
| **ಗಾಳಿ ವೇಗ** | ಕೆಲವು ಬೆಟ್ಟ ಪ್ರದೇಶಗಳು ಮತ್ತು ಪೀಠಭೂಮಿಗಳಲ್ಲಿ ಗಾಳಿ ಶಕ್ತಿ ಉತ್ಪಾದನೆಗೆ ಅನುಕೂಲ |
| **ಖಾಸಗಿ ಹೂಡಿಕೆ** | ಸೌರ ಮತ್ತು ಗಾಳಿ ಕ್ಷೇತ್ರದಲ್ಲಿ ಖಾಸಗಿ ಕಂಪನಿಗಳ ಹೂಡಿಕೆ ಹೆಚ್ಚಾಗಿದೆ |
| **ರಾಜ್ಯ ನೀತಿಗಳು** | ಕರ್ನಾಟಕ ಸೌರ ನೀತಿ, ನವೀಕರಿಸಬಹುದಾದ ಶಕ್ತಿ ಪ್ರೋತ್ಸಾಹ |
| **ತಂತ್ರಜ್ಞಾನ ಬೆಳವಣಿಗೆ** | ಸೌರ ಫಲಕಗಳ ವೆಚ್ಚ ಕಡಿಮೆಯಾಗಿರುವುದು |

Invest Karnataka ಪ್ರಕಾರ, ಕರ್ನಾಟಕದ **ಸೌರ PV ಸಾಮರ್ಥ್ಯ ಅಂದಾಜು 24.7 GW** ಮತ್ತು ಗಾಳಿ ಶಕ್ತಿ ಸಾಮರ್ಥ್ಯ **ಸುಮಾರು 14 GWಗಿಂತ ಹೆಚ್ಚು** ಎಂದು ಅಂದಾಜಿಸಲಾಗಿದೆ.

## 8. ಪ್ರಮುಖ ಸಂಸ್ಥೆಗಳು

| ಸಂಸ್ಥೆ | ಪಾತ್ರ |
|---|---|
| **KPCL — Karnataka Power Corporation Limited** | ರಾಜ್ಯದ ಪ್ರಮುಖ ವಿದ್ಯುತ್ ಉತ್ಪಾದನಾ ಸಂಸ್ಥೆ |
| **KPTCL — Karnataka Power Transmission Corporation Limited** | ವಿದ್ಯುತ್ ಪ್ರಸರಣ ವ್ಯವಸ್ಥೆ |
| **KREDL — Karnataka Renewable Energy Development Limited** | ನವೀಕರಿಸಬಹುದಾದ ಶಕ್ತಿ ಅಭಿವೃದ್ಧಿ |
| **BESCOM, MESCOM, HESCOM, GESCOM, CESC** | ವಿದ್ಯುತ್ ವಿತರಣೆ ಕಂಪನಿಗಳು |
| **CEA** | ಕೇಂದ್ರ ವಿದ್ಯುತ್ ಪ್ರಾಧಿಕಾರ; ರಾಷ್ಟ್ರೀಯ ಮಟ್ಟದ ಯೋಜನೆ ಮತ್ತು ಅಂಕಿಅಂಶಗಳು |
| **MNRE** | ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ |

## 9. ಮುಖ್ಯ ಅಂಶಗಳು

| ಪ್ರಶ್ನೆ | ಉತ್ತರ |
|---|---|
| ಕರ್ನಾಟಕದ ಪ್ರಮುಖ ಉಷ್ಣ ವಿದ್ಯುತ್ ಸ್ಥಾವರಗಳು ಯಾವುವು? | RTPS, BTPS, YTPS |
| ಕರ್ನಾಟಕದ ಪ್ರಮುಖ ಜಲವಿದ್ಯುತ್ ಯೋಜನೆ ಯಾವುದು? | ಶರಾವತಿ ಜಲವಿದ್ಯುತ್ ಯೋಜನೆ |
| ಪಾವಗಡ ಸೌರ ಪಾರ್ಕ್ ಎಲ್ಲಿದೆ? | ತುಮಕೂರು ಜಿಲ್ಲೆ |
| ಪಾವಗಡ ಸೌರ ಪಾರ್ಕ್ ಸಾಮರ್ಥ್ಯ ಎಷ್ಟು? | 2,000 MW |

Dr. Rajkumar IAS KAS Academy

| ಪ್ರಶ್ನೆ | ಉತ್ತರ |
|---|---|
| ಕರ್ನಾಟಕದಲ್ಲಿ ಗಾಳಿ ವಿದ್ಯುತ್ ಸಾಮರ್ಥ್ಯ ಹೆಚ್ಚು ಇರುವುದಕ್ಕೆ ಕಾರಣವೇನು? | ಪೀಠಭೂಮಿ, ಬೆಟ್ಟ ಪ್ರದೇಶಗಳು ಮತ್ತು ಗಾಳಿ ವೇಗ |
| ಶಿವನಸಮುದ್ರ ವಿದ್ಯುತ್ ಸ್ಥಾವರ ಯಾವ ಕಾರಣಕ್ಕೆ ಪ್ರಸಿದ್ಧ? | ಏಷ್ಯಾದ ಮೊದಲ ಜಲವಿದ್ಯುತ್ ಕೇಂದ್ರಗಳಲ್ಲಿ ಒಂದು |
| ಕರ್ನಾಟಕದ RE ಸಾಮರ್ಥ್ಯ ಏಪ್ರಿಲ್ 2026ರಲ್ಲಿ ಎಷ್ಟು? | 25.84 GW |
| ಕರ್ನಾಟಕದಲ್ಲಿ ಸೌರ ಶಕ್ತಿ ಸಾಮರ್ಥ್ಯ ಏಪ್ರಿಲ್ 2026ರಲ್ಲಿ ಎಷ್ಟು? | 10.61 GW |
| ಕರ್ನಾಟಕದಲ್ಲಿ ಗಾಳಿ ಶಕ್ತಿ ಸಾಮರ್ಥ್ಯ ಏಪ್ರಿಲ್ 2026ರಲ್ಲಿ ಎಷ್ಟು? | 8.609 GW |

## ಸಾರಾಂಶ

**ಕರ್ನಾಟಕವು ಭಾರತದಲ್ಲಿ ನವೀಕರಿಸಬಹುದಾದ ಶಕ್ತಿ ಉತ್ಪಾದನೆಯಲ್ಲಿ ಪ್ರಮುಖ ರಾಜ್ಯವಾಗಿದೆ. ರಾಜ್ಯದಲ್ಲಿ ಶರಾವತಿ, ಕಾಳಿ, ವರಾಹಿ ನದಿಗಳಿಂದ ಜಲವಿದ್ಯುತ್; ರಾಯಚೂರು, ಬಳ್ಳಾರಿ, ಯರಮರಸ್‌ನಲ್ಲಿ ಉಷ್ಣ ವಿದ್ಯುತ್; ಪಾವಗಡದಂತಹ ದೊಡ್ಡ ಸೌರ ಪಾರ್ಕ್‌ಗಳಿಂದ ಸೌರ ವಿದ್ಯುತ್; ಮತ್ತು ಪೀಠಭೂಮಿ ಪ್ರದೇಶಗಳಿಂದ ಗಾಳಿ ವಿದ್ಯುತ್ ಉತ್ಪಾದನೆ ನಡೆಯುತ್ತದೆ.**

## ರಾಷ್ಟ್ರೀಯ ಗ್ರಿಡ್ — National Grid

**ರಾಷ್ಟ್ರೀಯ ಗ್ರಿಡ್** ಎಂದರೆ ದೇಶದ ವಿವಿಧ ರಾಜ್ಯಗಳು ಮತ್ತು ಪ್ರದೇಶಗಳಲ್ಲಿರುವ **ವಿದ್ಯುತ್ ಉತ್ಪಾದನಾ ಕೇಂದ್ರಗಳು, ಪ್ರಸರಣ ಮಾರ್ಗಗಳು, ಸಬ್‌ಸ್ಟೇಷನ್‌ಗಳು ಮತ್ತು ಲೋಡ್ ಡಿಸ್ಪ್ಯಾಚ್ ಕೇಂದ್ರಗಳನ್ನು** ಒಂದೇ ವ್ಯವಸ್ಥೆಯಾಗಿ ಜೋಡಿಸುವ ರಾಷ್ಟ್ರೀಯ ವಿದ್ಯುತ್ ಜಾಲ.

ಭಾರತದಲ್ಲಿ ಪ್ರಾದೇಶಿಕ ಗ್ರಿಡ್‌ಗಳ ಹಂತ ಹಂತದ ಏಕೀಕರಣ 1992ರಿಂದ ಆರಂಭವಾಗಿ, **31 ಡಿಸೆಂಬರ್ 2013ರಂದು ದಕ್ಷಿಣ ಪ್ರಾದೇಶಿಕ ಗ್ರಿಡ್ ಉಳಿದ ಭಾರತೀಯ ಗ್ರಿಡ್‌ಗೆ ಸಂಪರ್ಕಗೊಂಡಾಗ "One Nation–One Grid–One Frequency" ಸಾಧಿಸಲಾಯಿತು**. ಇದರಲ್ಲಿ **765 kV ರಾಯಚೂರು–ಸೋಲಾಪುರ ಪ್ರಸರಣ ಮಾರ್ಗ** ಪ್ರಮುಖ ಪಾತ್ರ ವಹಿಸಿತು. (Power Ministry)

## ರಾಷ್ಟ್ರೀಯ ಗ್ರಿಡ್

| ಅಂಶ | ವಿವರಣೆ |
|---|---|
| **ಅರ್ಥ** | ದೇಶದ ವಿವಿಧ ಭಾಗಗಳಲ್ಲಿ ಉತ್ಪಾದನೆಯಾಗುವ ವಿದ್ಯುತ್‌ನ್ನು ಒಂದೇ ರಾಷ್ಟ್ರೀಯ ಪ್ರಸರಣ ವ್ಯವಸ್ಥೆಯ ಮೂಲಕ ಬೇಡಿಕೆ ಇರುವ ಪ್ರದೇಶಗಳಿಗೆ ಸಾಗಿಸುವ ಜಾಲ |
| **ಮುಖ್ಯ ಉದ್ದೇಶ** | ವಿದ್ಯುತ್ ಹೆಚ್ಚಿರುವ ಪ್ರದೇಶದಿಂದ ವಿದ್ಯುತ್ ಕೊರತೆ ಇರುವ ಪ್ರದೇಶಕ್ಕೆ ವಿದ್ಯುತ್ ವರ್ಗಾವಣೆ |
| **ಸ್ಲೋಗನ್ / ಪರಿಕಲ್ಪನೆ** | **One Nation – One Grid – One Frequency** |
| **ಭಾರತದಲ್ಲಿ ಪೂರ್ಣ ಏಕೀಕರಣ** | **31 ಡಿಸೆಂಬರ್ 2013** |
| **ಕರ್ನಾಟಕದ ಸಂಪರ್ಕ** | ದಕ್ಷಿಣ ಗ್ರಿಡ್ ಅನ್ನು ರಾಷ್ಟ್ರೀಯ ಗ್ರಿಡ್‌ಗೆ ಸಂಪರ್ಕಿಸಿದ **ರಾಯಚೂರು–ಸೋಲಾಪುರ 765 kV ಲೈನ್** ಕರ್ನಾಟಕಕ್ಕೆ ಸಂಬಂಧಿಸಿದೆ |
| **ಮುಖ್ಯ ಸಂಸ್ಥೆ** | **POWERGRID / Power Grid Corporation of India Limited** — bulk power transmission ನಲ್ಲಿ ಪ್ರಮುಖ ಪಾತ್ರ |
| **ಗ್ರಿಡ್ ಕಾರ್ಯಾಚರಣೆ** | **Grid Controller of India Limited — GRID-INDIA** ರಾಷ್ಟ್ರೀಯ ಮತ್ತು ಪ್ರಾದೇಶಿಕ ಗ್ರಿಡ್ ಕಾರ್ಯಾಚರಣೆಯನ್ನು ನೋಡಿಕೊಳ್ಳುತ್ತದೆ |

Dr. Rajkumar IAS Academy

| ಅಂಶ | ವಿವರಣೆ |
|---|---|
| **ಪ್ರಯೋಜನ** | ವಿದ್ಯುತ್ ಭದ್ರತೆ, ಕಡಿಮೆ ವೆಚ್ಚದ ವಿದ್ಯುತ್ ವರ್ಗಾವಣೆ, ಗ್ರಿಡ್ ಸ್ಥಿರತೆ, ನವೀಕರಿಸಬಹುದಾದ ಶಕ್ತಿಯ ಏಕೀಕರಣ |
| **ಪರೀಕ್ಷಾ ಮಹತ್ವ** | ವಿದ್ಯುತ್ ಪ್ರಸರಣ, ಇಂಧನ ಭದ್ರತೆ, Renewable Energy Integration, Green Energy Corridor |

## ವಿದ್ಯುತ್ ವ್ಯವಸ್ಥೆಯ ಸರಳ ಸರಣಿ

| ಹಂತ | ಅರ್ಥ | ಉದಾಹರಣೆ |
|---|---|---|
| **ಉತ್ಪಾದನೆ — Generation** | ವಿದ್ಯುತ್ ಉತ್ಪಾದಿಸುವುದು | ಜಲವಿದ್ಯುತ್, ಉಷ್ಣ ವಿದ್ಯುತ್, ಸೌರ, ಗಾಳಿ |
| **ಪ್ರಸರಣ — Transmission** | ಹೆಚ್ಚಿನ ವೋಲ್ಟೇಜ್‌ನಲ್ಲಿ ದೂರದ ಪ್ರದೇಶಗಳಿಗೆ ವಿದ್ಯುತ್ ಸಾಗಿಸುವುದು | POWERGRID, KPTCL ಪ್ರಸರಣ ಮಾರ್ಗಗಳು |
| **ವಿತರಣೆ — Distribution** | ಮನೆ, ಕೈಗಾರಿಕೆ, ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ | BESCOM, MESCOM, HESCOM, GESCOM, CESC |
| **ಗ್ರಿಡ್ ನಿಯಂತ್ರಣ — Load Despatch** | ಬೇಡಿಕೆ ಮತ್ತು ಪೂರೈಕೆಯನ್ನು ಸಮತೋಲನದಲ್ಲಿಡುವುದು | NLDC, RLDC, SLDC |

## ಭಾರತದಲ್ಲಿ ಗ್ರಿಡ್ ವ್ಯವಸ್ಥೆ

| ಮಟ್ಟ | ಸಂಸ್ಥೆ / ವ್ಯವಸ್ಥೆ | ಪಾತ್ರ |
|---|---|---|
| **ರಾಷ್ಟ್ರೀಯ ಮಟ್ಟ** | **NLDC — National Load Despatch Centre** | ದೇಶದ ಒಟ್ಟಾರೆ ವಿದ್ಯುತ್ ಗ್ರಿಡ್‌ನ ಸಮನ್ವಯ |
| **ಪ್ರಾದೇಶಿಕ ಮಟ್ಟ** | **RLDC — Regional Load Despatch Centre** | ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ ಪ್ರಾದೇಶಿಕ ಗ್ರಿಡ್‌ಗಳ ನಿರ್ವಹಣೆ |
| **ರಾಜ್ಯ ಮಟ್ಟ** | **SLDC — State Load Despatch Centre** | ರಾಜ್ಯದ ವಿದ್ಯುತ್ ಬೇಡಿಕೆ–ಪೂರೈಕೆ ಮತ್ತು ಗ್ರಿಡ್ ಕಾರ್ಯಾಚರಣೆ |
| **ಕರ್ನಾಟಕ** | Karnataka SLDC / KPTCL ವ್ಯವಸ್ಥೆ | ರಾಜ್ಯದ ವಿದ್ಯುತ್ ಪ್ರಸರಣ ಮತ್ತು ಲೋಡ್ ನಿರ್ವಹಣೆ |

GRID-INDIA ಪ್ರಕಾರ, ಅದು ಭಾರತದ ವಿದ್ಯುತ್ ವ್ಯವಸ್ಥೆಯ **grid security, reliability ಮತ್ತು integrated operation** ನೋಡಿಕೊಳ್ಳುವ ಸಂಸ್ಥೆಯಾಗಿದೆ. (grid-india.in)

## ರಾಷ್ಟ್ರೀಯ ಗ್ರಿಡ್‌ನ ಅಗತ್ಯ ಏಕೆ?

| ಕಾರಣ | ವಿವರಣೆ |
|---|---|
| **ಸಂಪನ್ಮೂಲಗಳ ಅಸಮಾನ ಹಂಚಿಕೆ** | ಕಲ್ಲಿದ್ದಲು ಪೂರ್ವ/ಮಧ್ಯ ಭಾರತದಲ್ಲಿ, ಜಲವಿದ್ಯುತ್ ಹಿಮಾಲಯ ಪ್ರದೇಶದಲ್ಲಿ, ಸೌರ-ಗಾಳಿ ಶಕ್ತಿ ಕರ್ನಾಟಕ, ತಮಿಳುನಾಡು, ರಾಜಸ್ಥಾನ, ಗುಜರಾತ್ ಮುಂತಾದ ರಾಜ್ಯಗಳಲ್ಲಿ ಹೆಚ್ಚು ಇದೆ |
| **ವಿದ್ಯುತ್ ಬೇಡಿಕೆ ಬೇರೆ ಬೇರೆ** | ಕೈಗಾರಿಕಾ ಪ್ರದೇಶಗಳು ಮತ್ತು ನಗರಗಳಲ್ಲಿ ವಿದ್ಯುತ್ ಬೇಡಿಕೆ ಹೆಚ್ಚು |
| **Surplus to Deficit Transfer** | ವಿದ್ಯುತ್ ಹೆಚ್ಚಿರುವ ರಾಜ್ಯದಿಂದ ಕೊರತೆ ಇರುವ ರಾಜ್ಯಕ್ಕೆ ಸಾಗಿಸಲು |
| **ನವೀಕರಿಸಬಹುದಾದ ಶಕ್ತಿ** | ಸೌರ ಮತ್ತು ಗಾಳಿ ವಿದ್ಯುತ್ ಸ್ಥಿರವಾಗಿರದ ಕಾರಣ, ದೊಡ್ಡ ಗ್ರಿಡ್ ಮೂಲಕ ಸಮತೋಲನ ಸಾಧ್ಯ |
| **ಗ್ರಿಡ್ ಸ್ಥಿರತೆ** | ಆಕಸ್ಮಿಕ ಬೇಡಿಕೆ/ಉತ್ಪಾದನಾ ಬದಲಾವಣೆಗಳನ್ನು ನಿರ್ವಹಿಸಲು |

Dr. Rajkumar IAS/KAS Academy

| ಕಾರಣ | ವಿವರಣೆ |
|---|---|
| **ಒಂದೇ ಮಾರುಕಟ್ಟೆ** | ವಿದ್ಯುತ್ ವಿನಿಮಯ ಮಾರುಕಟ್ಟೆಯಲ್ಲಿ ಏಕರೂಪತೆ ಮತ್ತು ಉತ್ತಮ ಬೆಲೆ ಕಂಡುಹಿಡಿಯಲು |

ಭಾರತದಲ್ಲಿ ಇಂಧನ ಸಂಪನ್ಮೂಲಗಳು ಸಮವಾಗಿ ಹಂಚಿಕೆಯಾಗಿಲ್ಲ; ಅದಕ್ಕಾಗಿ ವಿದ್ಯುತ್ ಹೆಚ್ಚಿರುವ ಪ್ರದೇಶದಿಂದ ಕೊರತೆ ಇರುವ ಪ್ರದೇಶಕ್ಕೆ ವರ್ಗಾಯಿಸಲು ಬಲಿಷ್ಠ ಪ್ರಸರಣ ವ್ಯವಸ್ಥೆ ಅಗತ್ಯವಾಯಿತು ಎಂದು ವಿದ್ಯುತ್ ಸಚಿವಾಲಯ ವಿವರಿಸುತ್ತದೆ. (Power Ministry)

## POWERGRID ಪಾತ್ರ

| ಅಂಶ | ಮಾಹಿತಿ |
|---|---|
| **ಪೂರ್ಣ ಹೆಸರು** | Power Grid Corporation of India Limited |
| **ಸ್ವರೂಪ** | ಕೇಂದ್ರ ಸರ್ಕಾರದ Maharatna Public Sector Enterprise |
| **ಪಾತ್ರ** | ದೇಶದ bulk power transmission ನಲ್ಲಿ ಪ್ರಮುಖ ಸಂಸ್ಥೆ |
| **Transmission network** | 31 ಮೇ 2025ರ ವೇಳೆಗೆ POWERGRID ಜಾಲವು ಸುಮಾರು **1,80,239 ckm EHV transmission lines** ಮತ್ತು **283 EHV AC & HVDC sub-stations** ಹೊಂದಿತ್ತು |
| **Inter-regional transfer capacity** | ರಾಷ್ಟ್ರೀಯ ಗ್ರಿಡ್‌ನ inter-regional capacity ಸುಮಾರು **1,18,740 MW** ಆಗಿದೆ |

POWERGRID ಭಾರತದ ದೊಡ್ಡ ಮತ್ತು ಪ್ರಮುಖ ವಿದ್ಯುತ್ ಪ್ರಸರಣ ಸಂಸ್ಥೆಯಾಗಿದ್ದು, ರಾಷ್ಟ್ರೀಯ ಗ್ರಿಡ್ ವಿಸ್ತರಣೆ ಮತ್ತು ನವೀಕರಿಸಬಹುದಾದ ಶಕ್ತಿಯ ಪ್ರಸರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. (Power Ministry)

# ಕರ್ನಾಟಕಕ್ಕೆ ಸಂಬಂಧಿಸಿದ ಮುಖ್ಯ ಅಂಶಗಳು

| ಅಂಶ | ವಿವರಣೆ |
|---|---|
| **ರಾಯಚೂರು–ಸೋಲಾಪುರ ಲೈನ್** | ದಕ್ಷಿಣ ಭಾರತವನ್ನು ರಾಷ್ಟ್ರೀಯ ಗ್ರಿಡ್‌ಗೆ synchronous ಆಗಿ ಜೋಡಿಸಿದ ಪ್ರಮುಖ 765 kV ಪ್ರಸರಣ ಮಾರ್ಗ |
| **ನವೀಕರಿಸಬಹುದಾದ ಶಕ್ತಿ** | ಕರ್ನಾಟಕದಲ್ಲಿ ಸೌರ ಮತ್ತು ಗಾಳಿ ಶಕ್ತಿ ಹೆಚ್ಚಿರುವುದರಿಂದ ರಾಷ್ಟ್ರೀಯ ಗ್ರಿಡ್‌ಗೆ ವಿದ್ಯುತ್ ಪೂರೈಕೆಯಲ್ಲಿ ರಾಜ್ಯದ ಪಾತ್ರ ಹೆಚ್ಚಾಗಿದೆ |
| **KPTCL** | ಕರ್ನಾಟಕದ ಪ್ರಸರಣ ವ್ಯವಸ್ಥೆ |
| **SLDC Karnataka** | ರಾಜ್ಯದ ಲೋಡ್ ಡಿಸ್ಪ್ಯಾಚ್ ಮತ್ತು ವಿದ್ಯುತ್ ಸಮತೋಲನ |
| **ಪಾವಗಡ ಸೌರ ಪಾರ್ಕ್** | ದೊಡ್ಡ ಪ್ರಮಾಣದ ಸೌರ ವಿದ್ಯುತ್ ಉತ್ಪಾದನೆಯನ್ನು ಗ್ರಿಡ್‌ಗೆ ಸೇರಿಸುವ ಉದಾಹರಣೆ |

## National Grid vs Smart Grid vs Green Energy Corridor

| ಪದ | ಅರ್ಥ | ಮುಖ್ಯ ವ್ಯತ್ಯಾಸ |
|---|---|---|
| **National Grid** | ದೇಶದ ವಿದ್ಯುತ್ ಪ್ರಸರಣ ಜಾಲ | ಉತ್ಪಾದನಾ ಕೇಂದ್ರದಿಂದ ದೇಶದ ಬೇರೆ ಭಾಗಗಳಿಗೆ ವಿದ್ಯುತ್ ಸಾಗಣೆ |
| **Smart Grid** | ಡಿಜಿಟಲ್ ತಂತ್ರಜ್ಞಾನ ಬಳಸಿ ವಿದ್ಯುತ್ ನಿರ್ವಹಣೆ | ಸ್ಮಾರ್ಟ್ ಮೀಟರ್, automation, demand response |
| **Green Energy Corridor** | ನವೀಕರಿಸಬಹುದಾದ ಶಕ್ತಿಗಾಗಿ ವಿಶೇಷ ಪ್ರಸರಣ ಮಾರ್ಗಗಳು | ಸೌರ/ಗಾಳಿ ವಿದ್ಯುತ್‌ನ್ನು ಗ್ರಿಡ್‌ಗೆ ಸೇರಿಸಲು |

Dr. Rajkumar IAS/KAS Academy

| ಪದ | ಅರ್ಥ | ಮುಖ್ಯ ವ್ಯತ್ಯಾಸ |
|---|---|---|
| Micro Grid | ಸಣ್ಣ ಸ್ಥಳೀಯ ಗ್ರಿಡ್ | ಗ್ರಾಮ, ದ್ವೀಪ, ಕ್ಯಾಂಪಸ್ ಮಟ್ಟದ ವಿದ್ಯುತ್ ವ್ಯವಸ್ಥೆ |


## One-liners

1. **ರಾಷ್ಟ್ರೀಯ ಗ್ರಿಡ್** = ಭಾರತದ ಏಕೀಕೃತ ವಿದ್ಯುತ್ ಪ್ರಸರಣ ಜಾಲ.
2. **One Nation–One Grid–One Frequency** ಭಾರತದಲ್ಲಿ **31 ಡಿಸೆಂಬರ್ 2013**ರಂದು ಸಾಧಿಸಲಾಯಿತು.
3. ದಕ್ಷಿಣ ಗ್ರಿಡ್ ರಾಷ್ಟ್ರೀಯ ಗ್ರಿಡ್‌ಗೆ ಜೋಡಣೆಯಾಗಲು **ರಾಯಚೂರು–ಸೋಲಾಪುರ 765 kV ಲೈನ್** ಪ್ರಮುಖವಾಗಿತ್ತು.
4. **POWERGRID** ದೇಶದ bulk power transmission ನಲ್ಲಿ ಪ್ರಮುಖ ಸಂಸ್ಥೆ.
5. **GRID-INDIA** ವಿದ್ಯುತ್ ಗ್ರಿಡ್‌ನ ನೈಜ-ಸಮಯದ ಕಾರ್ಯಾಚರಣೆ ಮತ್ತು ಭದ್ರತೆಯನ್ನು ನೋಡಿಕೊಳ್ಳುತ್ತದೆ.
6. **NLDC** ರಾಷ್ಟ್ರೀಯ ಮಟ್ಟದಲ್ಲಿ, **RLDC** ಪ್ರಾದೇಶಿಕ ಮಟ್ಟದಲ್ಲಿ, **SLDC** ರಾಜ್ಯ ಮಟ್ಟದಲ್ಲಿ ಗ್ರಿಡ್ ನಿಯಂತ್ರಣ ಮಾಡುತ್ತವೆ.
7. ರಾಷ್ಟ್ರೀಯ ಗ್ರಿಡ್ ನವೀಕರಿಸಬಹುದಾದ ಶಕ್ತಿಯ ಏಕೀಕರಣಕ್ಕೆ ಅತ್ಯಂತ ಮುಖ್ಯ.

**ಸಾರಾಂಶ:**

**ರಾಷ್ಟ್ರೀಯ ಗ್ರಿಡ್ ಎಂದರೆ ಭಾರತದಲ್ಲಿನ ವಿದ್ಯುತ್ ಉತ್ಪಾದನಾ ಪ್ರದೇಶಗಳನ್ನು ವಿದ್ಯುತ್ ಬೇಡಿಕೆ ಇರುವ ಪ್ರದೇಶಗಳೊಂದಿಗೆ ಸಂಪರ್ಕಿಸುವ ಏಕೀಕೃತ ವಿದ್ಯುತ್ ಪ್ರಸರಣ ಜಾಲ. ಇದು "One Nation–One Grid–One Frequency" ಪರಿಕಲ್ಪನೆಯ ಆಧಾರವಾಗಿದೆ.**

Dr. Rajkumar IAS/KAS Academy



# ಕುದಿಯುತ್ತಿದೆ ಪಿಒಕೆ

ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಅಗ್ನಿಕುಂಡವಾಗಿದೆ. ಮುಜಫ್ಫರಾಬಾದ್ ಮತ್ತು ರಾವಲ್‌ಕೋಟ್ ಸೇರಿದಂತೆ ಹಲವು ಪ್ರದೇಶಗಳಲ್ಲಿ ಹಿಂಸಾಚಾರ ಭುಗಿಲೆದ್ದಿದೆ. ಪ್ರತಿಭಟನೆ, ಸಂಘರ್ಷ, ಶವಯಾತ್ರೆಗಳ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ರಾಜಕೀಯ ಪ್ರಾತಿನಿಧ್ಯ, ಸಂಘಟನೆಯೊಂದರ ನಿಷೇಧ, ಆಡಳಿತ ಮತ್ತು ಮಾನವ ಹಕ್ಕುಗಳಿಗೆ ಸಂಬಂಧಿಸಿದ ಪ್ರತಿಭಟನೆಗಳು ಹಿಂಸಾಚಾರ ಮತ್ತು ಹತ್ತಾರು ಜೀವಗಳ ಸಾವಿಗೆ ಕಾರಣವಾಗಿವೆ. ಮೂಲಭೂತ ಹಕ್ಕು, ವ್ಯವಸ್ಥಿತ ಸೇವೆಗಳಿಗಾಗಿ ಪ್ರತಿಭಟನೆಗಿಳಿದ ಜನರ ಮೇಲೆ ಪಾಕಿಸ್ತಾನದ ಸೇನೆ ದಮನ ನೀತಿ ಅನುಸರಿಸುತ್ತಿದೆ ಎನ್ನುವ ಖಂಡನೆ ವ್ಯಕ್ತವಾಗಿದೆ

ಪ್ರಜಾವಾಣಿ ವಾರ್ತೆ

## ರಾಜಕೀಯ ಪ್ರಾತಿನಿಧ್ಯ, ವಿದ್ಯುತ್ ಸಬ್ಸಿಡಿ, ಪಾರದರ್ಶಕ ಆಡಳಿತಕ್ಕೆ ಜನರ ಆಗ್ರಹ

ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ರಾಜಧಾನಿ, ಹಿಂಸಾಚಾರಪೀಡಿತ ಮುಜಫ್ಫರಾಬಾದ್‌ನಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ –ಎಎಫ್‌ಪಿ ಚಿತ್ರ

## ಸರ್ಕಾರದ ಮೇಲೆ ಅಸಮಾಧಾನ

## 1947ರಲ್ಲಿ ಏನಾಗಿತ್ತು?

ಹಿಂಸಾಚಾರ ನಡೆದ ಮುಜಫ್ಫರಾಬಾದ್‌ನಲ್ಲಿ ಅಗತ್ಯ ವಸ್ತುಗಳ ಮಾರಾಟಗಾರರು ಗ್ರಾಹಕರ ನಿರೀಕ್ಷೆಯಲ್ಲಿದ್ದರು –ಪಿಟಿಐ ಚಿತ್ರ

## ಪಿಒಕೆ ಆಡಳಿತ ವ್ಯವಸ್ಥೆ ಹೇಗಿದೆ?

## ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

## ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್- ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

## 'ಕಾಲೇಜು ಶುಲ್ಕ ತುಂಬಿದೆ'

## ಪಿಯು ಶಿಕ್ಷಣಕ್ಕೆ ಉಪಯೋಗ

<u>PoK Borders</u>

**PoK = Pakistan Occupied Kashmir / ಪಾಕಿಸ್ತಾನ ಆಕ್ರಮಿತ ಕಾಶ್ಮೀರ**
ಭಾರತದ ದೃಷ್ಟಿಯಲ್ಲಿ ಇದು **ಜಮ್ಮು-ಕಾಶ್ಮೀರ ಮತ್ತು ಲಡಾಖ್‌ನ ಭಾಗ**, ಆದರೆ ಪ್ರಸ್ತುತ ಪಾಕಿಸ್ತಾನದ ನಿಯಂತ್ರಣದಲ್ಲಿದೆ.

PoK **ಯಾವ ಪ್ರದೇಶಗಳನ್ನು ಒಳಗೊಂಡಿದೆ**?

| ಭಾಗ | ವಿವರ |
|---|---|
| **1. ಆಜಾದ್ ಜಮ್ಮು ಮತ್ತು ಕಾಶ್ಮೀರ** — AJK | ಪಾಕಿಸ್ತಾನ ಆಡಳಿತದ ಕಾಶ್ಮೀರದ ದಕ್ಷಿಣ ಭಾಗ |
| **2. ಗಿಲ್ಗಿಟ್-ಬಾಲ್ಟಿಸ್ತಾನ್** | ಪಾಕಿಸ್ತಾನ ನಿಯಂತ್ರಣದ ಉತ್ತರ ಭಾಗ; ಕರಾಕೋರಂ ಪರ್ವತ ಪ್ರದೇಶ |

PoK Borders

| ದಿಕ್ಕು | ಗಡಿ ಹೊಂದಿರುವ ಪ್ರದೇಶ / ದೇಶ | ಮುಖ್ಯ ಮಾಹಿತಿ |
|---|---|---|
| **ಪೂರ್ವ** | ಭಾರತದ **ಜಮ್ಮು-ಕಾಶ್ಮೀರ ಮತ್ತು ಲಡಾಖ್** | **Line of Control — LoC** ಮೂಲಕ ವಿಭಜನೆ |
| **ದಕ್ಷಿಣ** | ಪಾಕಿಸ್ತಾನದ **ಪಂಜಾಬ್ ಪ್ರಾಂತ್ಯ** | ಆಜಾದ್ ಜಮ್ಮು ಮತ್ತು ಕಾಶ್ಮೀರ ಭಾಗಕ್ಕೆ ಸಮೀಪ |

| ದಿಕ್ಕು | ಗಡಿ ಹೊಂದಿರುವ ಪ್ರದೇಶ / ದೇಶ | ಮುಖ್ಯ ಮಾಹಿತಿ |
|---|---|---|
| **ಪಶ್ಚಿಮ** | ಪಾಕಿಸ್ತಾನದ **ಖೈಬರ್ ಪಖ್ತುನ್ಖ್ವಾ** | ಪಾಕಿಸ್ತಾನದ ಪರ್ವತ ಪ್ರದೇಶಗಳ ಸಂಪರ್ಕ |
| **ಉತ್ತರ** | **ಅಫ್ಘಾನಿಸ್ತಾನದ ವಾಖಾನ್ ಕಾರಿಡಾರ್** ಸಮೀಪ | ಗಿಲ್ಗಿಟ್-ಬಾಲ್ಟಿಸ್ತಾನ್ ಉತ್ತರ ಭಾಗದ ಬಳಿ |
| **ಈಶಾನ್ಯ** | **ಚೀನಾ — ಶಿನ್ಜಿಯಾಂಗ್ ಪ್ರದೇಶ** | ಕರಾಕೋರಂ ಪರ್ವತ ಮತ್ತು ಕಾರಾಕೋರಂ ಹೆದ್ದಾರಿ ಪ್ರದೇಶ |
| **ಆಗ್ನೇಯ** | ಭಾರತದ **ಲಡಾಖ್ / ಸಿಯಾಚಿನ್ ಪ್ರದೇಶ** | ಭಾರತ–ಪಾಕಿಸ್ತಾನ–ಚೀನಾ ತ್ರಿಕೋನೀಯ ಕಾರ್ಯತಂತ್ರದ ಪ್ರದೇಶ |

## ಪ್ರಮುಖ ಸ್ಥಳಗಳು / ಪ್ರದೇಶಗಳು

| ಸ್ಥಳ | ಮಹತ್ವ |
|---|---|
| **ಮುಜಫ್ಫರಾಬಾದ್** | PoK / AJK ರಾಜಧಾನಿ |
| **ಮಿರ್ಪುರ್** | AJKನ ಪ್ರಮುಖ ನಗರ |
| **ಗಿಲ್ಗಿಟ್** | ಗಿಲ್ಗಿಟ್-ಬಾಲ್ಟಿಸ್ತಾನ್‌ನ ಪ್ರಮುಖ ನಗರ |
| **ಸ್ಕಾರ್ಡು** | ಬಾಲ್ಟಿಸ್ತಾನ್ ಪ್ರದೇಶದ ಪ್ರಮುಖ ನಗರ; ಲಡಾಖ್ ಸಮೀಪ |
| **ಹುನ್ಜಾ** | ಗಿಲ್ಗಿಟ್-ಬಾಲ್ಟಿಸ್ತಾನ್‌ನ ಪರ್ವತ ಪ್ರದೇಶ |
| **ಕಾರಾಕೋರಂ ಹೆದ್ದಾರಿ** | ಪಾಕಿಸ್ತಾನ–ಚೀನಾ ಸಂಪರ್ಕಿಸುವ ಕಾರ್ಯತಂತ್ರದ ಮಾರ್ಗ |
| **ಶಕ್ಸ್ಗಾಂ ಕಣಿವೆ** | 1963ರಲ್ಲಿ ಪಾಕಿಸ್ತಾನ ಚೀನಾಕ್ಕೆ ಹಸ್ತಾಂತರಿಸಿದ ಪ್ರದೇಶ; ಭಾರತ ಇದನ್ನು ತನ್ನ ಭಾಗವೆಂದು ಹೇಳುತ್ತದೆ |

One-liners

| ಪ್ರಶ್ನೆ | ಉತ್ತರ |
|---|---|
| PoK ಯಾವ ದೇಶದ ನಿಯಂತ್ರಣದಲ್ಲಿದೆ? | ಪಾಕಿಸ್ತಾನ |
| ಭಾರತ ಯಾವ ನಿಲುವು ಹೊಂದಿದೆ? | PoK ಭಾರತಕ್ಕೆ ಸೇರಿದ ಜಮ್ಮು-ಕಾಶ್ಮೀರ ಮತ್ತು ಲಡಾಖ್‌ನ ಅವಿಭಾಜ್ಯ ಭಾಗ |
| PoKನ ಎರಡು ಪ್ರಮುಖ ಭಾಗಗಳು ಯಾವುವು? | ಆಜಾದ್ ಜಮ್ಮು ಮತ್ತು ಕಾಶ್ಮೀರ, ಗಿಲ್ಗಿಟ್-ಬಾಲ್ಟಿಸ್ತಾನ್ |
| PoK ಮತ್ತು ಭಾರತದ ನಡುವಿನ ಗಡಿ ರೇಖೆ ಯಾವುದು? | **Line of Control — LoC** |
| ಗಿಲ್ಗಿಟ್-ಬಾಲ್ಟಿಸ್ತಾನ್ ಯಾವ ಪರ್ವತ ಪ್ರದೇಶದಲ್ಲಿದೆ? | ಕರಾಕೋರಂ–ಹಿಮಾಲಯ ಪ್ರದೇಶ |
| PoK ಚೀನಾದ ಯಾವ ಪ್ರದೇಶಕ್ಕೆ ಸಮೀಪ? | ಶಿನ್ಜಿಯಾಂಗ್ |
| PoK ಅಫ್ಘಾನಿಸ್ತಾನದ ಯಾವ ಪ್ರದೇಶಕ್ಕೆ ಸಮೀಪ? | ವಾಖಾನ್ ಕಾರಿಡಾರ್ |
| PoKನ ರಾಜಧಾನಿ ಯಾವುದು? | ಮುಜಫ್ಫರಾಬಾದ್ |

Dr. Rajkumar IAS/KAS Academy

**ಸಾರಾಂಶ**

**PoKಗೆ ಪೂರ್ವದಲ್ಲಿ ಭಾರತದ ಜಮ್ಮು-ಕಾಶ್ಮೀರ ಮತ್ತು ಲಡಾಖ್, ಉತ್ತರದಲ್ಲಿ ಅಫ್ಘಾನಿಸ್ತಾನದ ವಾಖಾನ್ ಕಾರಿಡಾರ್ ಸಮೀಪ, ಈಶಾನ್ಯದಲ್ಲಿ ಚೀನಾ, ಪಶ್ಚಿಮದಲ್ಲಿ ಖೈಬರ್ ಪಖ್ತುನ್ಖ್ವಾ ಮತ್ತು ದಕ್ಷಿಣದಲ್ಲಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯ ಗಡಿಗಳಿವೆ.**

# ರಿಲಯನ್ಸ್, ಮೆಟಾದಿಂದ ದತ್ತಾಂಶ ಕೇಂದ್ರ

ಮುಂಬೈ (ಎಎಫ್‌ಪಿ): ಫೇಸ್‌ಬುಕ್‌ನ ಮಾತೃಸಂಸ್ಥೆ ಮೆಟಾ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಜೊತೆಯಾಗಿ ಗುಜರಾತ್‌ನಲ್ಲಿ ಎ.ಐ. ಬಲದ ದತ್ತಾಂಶ ಕೇಂದ್ರವನ್ನು ನಿರ್ಮಿಸಲಿವೆ. ಇದು ಜಾಮ್‌ನಗರದಲ್ಲಿ ನಿರ್ಮಾಣ ಆಗಲಿದೆ.

ಒಪ್ಪಂದದ ಭಾಗವಾಗಿ ರಿಲಯನ್ಸ್ ಕಂಪನಿಯು 168 ಮೆಗಾವಾಟ್ ಸಾಮರ್ಥ್ಯದ ದತ್ತಾಂಶ ಕೇಂದ್ರ ಅಭಿವೃದ್ಧಿಪಡಿಸಲಿದೆ. ಇದು ಎರಡು ವರ್ಷಗಳಲ್ಲಿ ನಿರ್ಮಾಣ ಆಗಲಿದೆ. ಮೆಟಾ ಕಂಪನಿಯು ಈ ಕೇಂದ್ರದ ಸಾಮರ್ಥ್ಯವನ್ನು ಗುತ್ತಿಗೆ ಆಧಾರದಲ್ಲಿ ಬಳಸಿಕೊಳ್ಳಲಿದೆ.

ಒಪ್ಪಂದದ ಹಣಕಾಸು ಆಯಾಮದ ಬಗ್ಗೆ ಕಂಪನಿಗಳು ಮಾಹಿತಿ ಒದಗಿಸಿಲ್ಲ. 'ಮೆಟಾ ಕಂಪನಿಯಂತಹ ಜಾಗತಿಕ ತಂತ್ರಜ್ಞಾನ ನಾಯಕನ ಅಗತ್ಯಕ್ಕೆ ತಕ್ಕಂತೆ ನಿರ್ಮಾಣ ಮಾಡಿರುವ ಭಾರತದ ಮೊದಲ ದತ್ತಾಂಶ ಕೇಂದ್ರ ಇದು' ಎಂದು ರಿಲಯನ್ಸ್ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದ್ದಾರೆ.

Publication Date
11/06/2026

Presented by ಪ್ರಜಾವಾಣಿ

# ಎರಡನೇ ಸುತ್ತಿಗೆ ಸಿಂಧು, ತನ್ವಿ

## ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್: ಮಾಳವಿಕಾ ಮುನ್ನಡೆ ● ಪುರುಷರಿಗೆ ನಿರಾಸೆ



ಭಾರತದ ತನ್ವಿ ಶರ್ಮಾ ಅವರ ಬ್ಯಾಕ್‌ಹ್ಯಾಂಡ್ ಹೊಡೆತದ ಪರಿ —'ಬಿಎಐ' ಚಿತ್ರ

ಸಿಡ್ನಿ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ಬುಧವಾರ ಸುಲಭ ಗೆಲುವು ಸಾಧಿಸಿದರು. ಆದರೆ ಮೊದಲ ದಿನ ಗಮನಸೆಳೆದಿದ್ದು ಐದನೇ ಶ್ರೇಯಾಂಕದ ಚಿಯು ಪಿನ್ ಚಿಯಾನ್ ಅವರಿಗೆ ಆಘಾತ ನೀಡಿದ ಹದಿಹರೆಯದ ಆಟಗಾರ್ತಿ ತನ್ವಿ ಶರ್ಮಾ.

ಮೂರನೇ ಶ್ರೇಯಾಂಕದ ಸಿಂಧು, ತನ್ವಿ ಜೊತೆ ಮಾಳವಿಕಾ ಬನ್ಸೋಡ್, ಇಶಾರಾಣಿ ಬರುವಾ ಮತ್ತು ತಾನ್ಯಾ ಹೇಮಂತ್ ಅವರೂ 16ರ ಸುತ್ತಿಗೆ ಮುನ್ನಡೆದರು. ಆದರೆ ಸೂಪರ್ 500 ಶ್ರೇಣಿಯ ಈ ಟೂರ್ನಿಯ ಪುರುಷರ ವಿಭಾಗದಲ್ಲಿ ಭಾರತಕ್ಕೆ ನಿರಾಸೆ ಕಾಡಿತು. ಕಿರಣ್ ಜಾರ್ಜ್, ತರುಣ್ ಮನ್ನೇಪಲ್ಲಿ ಮತ್ತು ಅರ್ಹತಾ ಸುತ್ತಿನಿಂದ ಬಂದ ಸನೀತ್ ದಯಾನಂದ್ ಹೊರಬಿದ್ದರು.

ಸಿಂಧು 21–13, 21–11 ರಿಂದ ಪೆರುವಿನ ಇನೆಸ್ ಲೂಸಿಯಾ ಕ್ಯಾಸ್ಟಿಲ್ಲೊ ಸಲಝಾರ್ ಅವರನ್ನು ಹಿಮ್ಮೆಟ್ಟಿಸಲು ತೆಗೆದುಕೊಂಡಿದ್ದು 32 ನಿಮಿಷಗಳನ್ನಷ್ಟೇ. ಮುಂದಿನ ಸುತ್ತಿನಲ್ಲಿ ಸಿಂಧು ಅವರ ಎದುರಾಳಿಯಾಗಿರುವ ಇಶಾರಾಣಿ ಇನ್ನೊಂದು ಪಂದ್ಯದಲ್ಲಿ ಚೀನಾದ ಹಾನ್ ಕಿಯಾನ್ ಷಿ ಅವರನ್ನು 22–20, 10–21, 21–14 ರಿಂದ ಸೋಲಿಸಿದರು.

17 ವರ್ಷ ವಯಸ್ಸಿನ ತನ್ವಿ 21–12, 22–20 ರಿಂದ ವಿಶ್ವ ಕ್ರಮಾಂಕದಲ್ಲಿ 11ನೇ ಸ್ಥಾನದಲ್ಲಿರುವ ಚಿಯು ಪಿನ್ ಅವರನ್ನು ಮುಕ್ಕಾಲು ಗಂಟೆಯಲ್ಲಿ ಪರಾಭವಗೊಳಿಸಿದರು. ವಿಶ್ವ ಕ್ರಮಾಂಕದಲ್ಲಿ 36ನೇ ಸ್ಥಾನದಲ್ಲಿರುವ ತನ್ವಿ ಎರಡನೇ ಸುತ್ತಿನಲ್ಲಿ ಸ್ವದೇಶದ ಮಾಳವಿಕಾ ಅವರನ್ನು ಎದುರಿಸಲಿದ್ದಾರೆ. ಮಾಳವಿಕಾ 15–21, 21–7, 21–13 ರಿಂದ ಥಾಯ್ಲೆಂಡ್‌ನ ತೊನ್ರುಗ್ ಸೇಹೆಂಗ್ ಅವರನ್ನು ಹಿಮ್ಮೆಟ್ಟಿಸಿದರು.

ತಾನ್ಯಾ ಇನ್ನೊಂದು ಪಂದ್ಯದಲ್ಲಿ ಅಮೆರಿಕದ ಇಶಿಕಾ ಜೈಸ್ವಾಲ್ ಅವರನ್ನು 21–17, 21–18 ರಿಂದ ಸೋಲಿಸಲು ಹೆಚ್ಚೇನೂ ಪ್ರಯಾಸಪಡಲಿಲ್ಲ. ಅವರು ಮುಂದಿನ ಸುತ್ತಿನಲ್ಲಿ ವಿಶ್ವ ಕ್ರಮಾಂಕದಲ್ಲಿ ಎಂಟನೇ ಸ್ಥಾನದಲ್ಲಿರುವ ಪೊರ್ನ್‌ಪವೀ ಚೊಚುವಾಂಗ್ (ಥಾಯ್ಲೆಂಡ್) ಅವರನ್ನು ಎದುರಿಸಲಿದ್ದಾರೆ.

**ಕಿರಣ್, ತರುಣ್‌ಗೆ ನಿರಾಸೆ:** ಕಿರಣ್ ಜಾರ್ಜ್ ಪುರುಷರ ಸಿಂಗಲ್ಸ್‌ನಲ್ಲಿ 19–21, 21–14, 15–21 ರಿಂದ ಮಲೇಷ್ಯಾದ ಜಸ್ಟಿನ್ ಹೋ ಅವರಿಗೆ ಸೋತರು. ಅರ್ಹತಾ ಸುತ್ತನ್ನು ದಾಟಿ ಬಂದಿದ್ದ ಸನೀತ್ 8–21, 10–21 ರಲ್ಲಿ ಚೀನಾದ ಹು ಝೆಯಾನ್ ಅವರಿಗೆ ಮಣಿದರು.

ತರುಣ್ ಹೋರಾಟ ಪ್ರದರ್ಶಿಸಿದರೂ, ಅಂತಿಮವಾಗಿ 21–18, 13–21, 23–25 ರಲ್ಲಿ ಹತ್ತನೇ ಕ್ರಮಾಂಕದ ಚುನ್‌-ಯಿ (ಚೀನಾ ತೈಪೆ) ಅವರಿಗೆ ಸೋತರು. ಈ ಪಂದ್ಯ 80 ನಿಮಿಷ ನಡೆಯಿತು.

ಧ್ರುವ್– ಮನೀಷಾ ಮುನ್ನಡೆ

ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ರಾವತ್– ಮನೀಷಾ ಕೆ. ಜೋಡಿ ಎರಡನೇ ಸುತ್ತಿಗೆ ಮುನ್ನಡೆಯಿತು. ಈ ಜೋಡಿ 21–13, 21–14 ರಿಂದ ಆಸ್ಟ್ರೇಲಿಯಾದ ಲಿಮ್ ಜೇಡೆನ್– ವಿಕ್ಟೋರಿಯಾ ಜೊನಡಿ ಜೋಡಿಯನ್ನು 27 ನಿಮಿಷಗಳಲ್ಲಿ ಸೋಲಿಸಿತು.

Publication Date
11/06/2026

Presented by ಪ್ರಜಾವಾಣಿ

Dr. Rajkumar

## ❖ ಜೈವಿಕ ತಂತ್ರಜ್ಞಾನ, ಶೈಕ್ಷಣಿಕ ಉಪಕ್ರಮಕ್ಕೆ ₹27.19 ಕೋಟಿ

- ನವೋದ್ಯಮಗಳ ಬೆಳವಣಿಗೆ ವೇಗಗೊಳಿಸಲು, ಉದ್ಯಮ-ಶೈಕ್ಷಣಿಕ ಸಹಯೋಗ ಹೆಚ್ಚಿಸಲು. ಜೈವಿಕ ತಂತ್ರಜ್ಞಾನ, ಮೂಲಸೌಕರ್ಯ ಅಭಿವೃದ್ಧಿಪಡಿಸಲು ಮತ್ತು ಸ್ಥಳೀಯ ಡೀಪ್‌ಟೆಕ್ ನಾವೀನ್ಯತೆ ಉತ್ತೇಜಿಸುವ ಉದ್ದೇಶಕ್ಕಾಗಿ ₹27.19 ಕೋಟಿ ಮೊತ್ತದ ನಾಲ್ಕು ಕಾರ್ಯತಂತ್ರದ ಉಪಕ್ರಮಗಳನ್ನು ರಾಜ್ಯ ಸರ್ಕಾರವು ಅನುಮೋದಿಸಿದೆ.
- 'ಈ ಉಪಕ್ರಮಗಳನ್ನು ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕೆಐಟಿಎಸ್). ಕರ್ನಾಟಕ ಡಿಜಿಟಲ್ ಆರ್ಥಿಕತೆ (ಕೆಡಿಇಎಂ), ಪ್ರಮುಖ ಶೈಕ್ಷಣಿಕ ಸಂಸ್ಥೆಗಳು ಮತ್ತು ಪರಿಸರ ವ್ಯವಸ್ಥೆಯ ಪಾಲುದಾರರ ಮೂಲಕ ಕಾರ್ಯಗತಗೊಳಿಸಲಾಗುವುದು ಎಂದು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ' ಹೇಳಿದರು.
- ನವೋದ್ಯಮಗಳು ಮತ್ತು ಪ್ರತಿಭಾನ್ವಿತರನ್ನು ಬೆಳೆಸುವುದರಿಂದ ಹಿಡಿದು ಜೈವಿಕ ತಂತ್ರಜ್ಞಾನ, ಅನುವಂಶಿಕ ಮಾಹಿತಿ 'ಜೀನೋಮ್' (ಡಿಎನ್) ಅಧ್ಯಯನ ಮಾಡುವ ಜೀವಶಾಸ್ತ್ರ ಶಾಖೆ (ಜಿನೊಮಿಕ್) ಹಾಗೂ ವೈದ್ಯಕೀಯ ರೊಬೊಟಿಕ್ಸ್ ಕ್ಷೇತ್ರಗಳಲ್ಲಿನ ಅತ್ಯಾಧುನಿಕ ಸಂಶೋಧನೆಗಳವರೆಗೆ ಹೂಡಿಕೆ ಮಾಡಲಾಗುವುದು ಎಂದು ತಿಳಿಸಿದರು.
- 'ಮುಂದಿನ ತಲೆಮಾರಿನ ಉದ್ಯೋಗಗಳು, ಉದ್ಯಮಗಳು ಮತ್ತು ವೈಜ್ಞಾನಿಕ ಸಾಧನೆಗಳಿಗೆ ಅಗತ್ಯವಾದ ಭದ್ರ ಅಡಿಪಾಯವನ್ನು ನಾವು ನಿರ್ಮಿಸುತ್ತಿದ್ದೇವೆ. ಈ ಉಪಕ್ರಮಗಳು, ಭಾರತದ ಪ್ರಮುಖ ನಾವೀನ್ಯತೆ ಮತ್ತು ತಂತ್ರಜ್ಞಾನ ಕೇಂದ್ರವಾಗಿ ಕರ್ನಾಟಕದ ಸ್ಥಾನಮಾನವನ್ನು ಮತ್ತಷ್ಟು ಸದೃಢಗೊಳಿಸಲಿವೆ' ಎಂದು ಪ್ರಿಯಾಂಕ್ ಹೇಳಿದರು.

# ಒಗ್ಗಟ್ಟಿನ ಕೆಲಸಕ್ಕೆ ಪ್ರಧಾನಿ ಮೋದಿ ಕರೆ

### ನೀತಿ ಆಯೋಗದ ಸಭೆಯಲ್ಲಿ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಭಾಗಿ

ಪ್ರಜಾವಾಣಿ ವಾರ್ತೆ

ನವದೆಹಲಿ: ನೀತಿ ಆಯೋಗದ ಆಡಳಿತ ಮಂಡಳಿಯ ಸಭೆಯಲ್ಲಿ ಇದೇ ಮೊದಲ ಬಾರಿಗೆ ಎಲ್ಲ 28 ರಾಜ್ಯಗಳ ಮುಖ್ಯಮಂತ್ರಿಗಳು ಪಾಲ್ಗೊಂಡಿದ್ದರು. ಸಭೆಯ ಅಧ್ಯಕ್ಷತೆಯನ್ನು ಪ್ರಧಾನಿ ನರೇಂದ್ರ ಮೋದಿ ವಹಿಸಿದ್ದರು.

ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು ಕೂಡ ಸಭೆಯಲ್ಲಿ ಭಾಗಿಯಾಗಿದ್ದರು. ಸಭೆಯು ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ಗುರುವಾರ ನಡೆಯಿತು.

ಸಭೆಯಲ್ಲಿ ಮಾತನಾಡಿದ ಮೋದಿ ಅವರು, ದೇಶದ ಅಭಿವೃದ್ಧಿಯ ಪಯಣಕ್ಕೆ ವೇಗ ನೀಡಲು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಒಟ್ಟಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು. 'ವಿಕಸಿತ ಭಾರತ ಸಾಕಾರಗೊಳ್ಳುವಲ್ಲಿ ಕೇಂದ್ರ ಹಾಗೂ ರಾಜ್ಯಗಳ ಸಂಘಟಿತ ಪ್ರಯತ್ನ ಮಹತ್ವದ ಪಾತ್ರ ವಹಿಸಲಿದೆ' ಎಂದು ಮೋದಿ ಅವರು ಎಕ್ಸ್ ಮೂಲಕ ಹೇಳಿದ್ದಾರೆ.

ಮಾದಕ ಪದಾರ್ಥಗಳ ಬಳಕೆ ಮತ್ತು ಸೈಬರ್ ವಂಚನೆಯಂತಹ ಹೊಸ ಸಮಸ್ಯೆಗಳನ್ನು ನಿಭಾಯಿಸಲು ಸಮನ್ವಯದಿಂದ ಕೆಲಸ ಮಾಡುವ ಅಗತ್ಯ ಇದೆ ಎಂದು ಪ್ರಧಾನಿಯವರು ಹೇಳಿದ್ದಾರೆ.

ಎಲ್‌-ನಿನೊ ಪರಿಸ್ಥಿತಿಯ ಕಾರಣದಿಂದಾಗಿ ಮೂಡಿರುವ ಕಳವಳಗಳ ಬಗ್ಗೆ ಅವರ ಎಲ್ಲರ ಗಮನ ಸೆಳೆದರು. ರಾಜ್ಯಗಳು ನೀರಿನ ಸಂರಕ್ಷಣೆಗೆ ಒತ್ತು ನೀಡಬೇಕು, ಸಹಜ ಹಾಗೂ ಸಾವಯವ ಕೃಷಿ ಪದ್ಧತಿಯನ್ನು ಉತ್ತೇಜಿಸಲು ಕ್ರಮ ಕೈಗೊಳ್ಳಬೇಕು ಎಂಬ ಮನವಿ ಮಾಡಿದರು ಎಂದು ಸಭೆಯ ನಂತರದ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ಹೇಳಲಾಗಿದೆ.

'ವಿಕಸಿತ ಭಾರತ ಎಂಬುದು 2047ಕ್ಕೆ ಮಾತ್ರ ಸೀಮಿತವಾದ ಗುರಿ ಅಲ್ಲ... ಅದು ಒಂದು ಕನಸು ಮಾತ್ರವೇ ಅಲ್ಲ. ಹಲವು ಆಯಾಮಗಳಲ್ಲಿ ಕೆಲಸ ಮಾಡಬಹುದಾದ ಅಂಶಗಳನ್ನು ಅದು ಒಳಗೊಂಡಿದೆ' ಎಂದು ಸಭೆಯ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ನೀತಿ ಆಯೋಗದ ಉಪಾಧ್ಯಕ್ಷ ಅಶೋಕ್ ಕುಮಾರ್ ಲಹಿರಿ ಹೇಳಿದರು.

ಪ್ರಧಾನಿಯವರು ಸಭೆಯಲ್ಲಿ ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳ ಬಗ್ಗೆಯೂ ಮಾತನಾಡಿದರು. ಆದರೆ ಭಾರತವು ಪ್ರಗತಿಯ ಹಾದಿಯಲ್ಲಿ ಆತ್ಮವಿಶ್ವಾಸದಿಂದ ಮುನ್ನಡೆಯುತ್ತಿದೆ ಎಂದರು.

### ಸಂಘರ್ಷದ ಬದಲು ಸೌಹಾರ್ದ: ಡಿಕೆ ಸೂತ್ರ

ನವದೆಹಲಿ: 'ಶಿಕ್ಷಣ, ಆರೋಗ್ಯ, ಉದ್ಯೋಗ ಸೃಷ್ಟಿ, ತಂತ್ರಜ್ಞಾನ, ಸಂಶೋಧನೆ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಪ್ರಗತಿಗೆ ಕರ್ನಾಟಕ ಸೇರಿದಂತೆ ರಾಜ್ಯಗಳಿಗೆ ಪ್ರೋತ್ಸಾಹ ನೀಡಬೇಕು' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೀತಿ ಆಯೋಗದ ಸಭೆಯಲ್ಲಿ ಸಲಹೆ ನೀಡಿದರು.

ದೆಹಲಿಯಲ್ಲಿ ನಡೆದ ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸಿದ ಶಿವಕುಮಾರ್ ಅವರು ಕರ್ನಾಟಕ ರಾಜ್ಯದ ಪ್ರಗತಿಗೆ ಕಾಂಗ್ರೆಸ್ ಸರ್ಕಾರ ಕೈಗೊಂಡಿರುವ ತೀರ್ಮಾನಗಳನ್ನು ವಿವರಿಸಿ ಕೇಂದ್ರ ಸರ್ಕಾರದಿಂದ ಅಗತ್ಯವಿರುವ ಪ್ರೋತ್ಸಾಹ ನೀಡುವಂತೆ ಸಲಹೆ ನೀಡಿದರು.

ಅನುದಾನ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಎಸಗುತ್ತಿದೆ ಎಂದು ಆರೋಪಿಸಿ ಸಿದ್ದರಾಮಯ್ಯ ಅವರು 2024ರಲ್ಲಿ ನೀತಿ ಆಯೋಗದ ಸಭೆಯನ್ನು ಬಹಿಷ್ಕರಿಸಿದ್ದರು. 2025ರಲ್ಲೂ ನೀತಿ ಆಯೋಗದ ಸಭೆಯಿಂದ ದೂರ ಉಳಿದಿದ್ದರು. ಆದರೆ, ಡಿ.ಕೆ. ಶಿವಕುಮಾರ್ ಅವರು ಆಡಳಿತ ಮಂಡಳಿ ಸಭೆಯಲ್ಲಿ ಭಾಗಿಯಾಗಿ ರಾಜ್ಯದ ಬೇಡಿಕೆಗಳ ಪಟ್ಟಿ ಮುಂದಿಟ್ಟರು.

#### ಶಿವಕುಮಾರ್ ಅವರ ಪ್ರಮುಖ ಸಲಹೆಗಳು

- ಖಾಸಗಿ ವಲಯಕ್ಕೆ ಸಮನಾಗಿ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರಿ ಶಾಲೆ ಮತ್ತು ಕಾಲೇಜುಗಳಿಗೆ ಒಂದು ಬಾರಿಯ ಮೂಲಸೌಕರ್ಯ ಅನುದಾನ ನೀಡಬೇಕು
- ಪೌಷ್ಟಿಕಾಂಶ, ಆರೋಗ್ಯ, ಕಲಿಕೆಯ ಫಲಿತಾಂಶಗಳು, ಕೌಶಲ, ಉದ್ಯೋಗ ಸೃಷ್ಟಿ ಮತ್ತು ಸುಸ್ಥಿರತೆಯ ಸೂಚಕಗಳಲ್ಲಿನ ಅಳೆಯಬಹುದಾದ ಸುಧಾರಣೆಗಳಿಗಾಗಿ ರಾಜ್ಯಗಳಿಗೆ ಉತ್ತೇಜನ ನೀಡಬೇಕು
- ತಂತ್ರಜ್ಞಾನ, ಸಂಶೋಧನೆ ಮತ್ತು ಮಾನವ ಬಂಡವಾಳದಲ್ಲಿ ಹೂಡಿಕೆ ಮಾಡುವ ಮೂಲಕ ಜಾಗತಿಕ ಆರ್ಥಿಕ ಮತ್ತು ಭೌಗೋಳಿಕ-ರಾಜಕೀಯ ಅನಿಶ್ಚಿತತೆಗಳನ್ನು ಎದುರಿಸುವ ವಾತಾವರಣ ನಿರ್ಮಿಸಬೇಕು
- ನಿರ್ದಿಷ್ಟ ಸಮಯದೊಳಗೆ ಗ್ರಾಮೀಣ ಆರೋಗ್ಯ ಮತ್ತು ಶಿಕ್ಷಣ ಮೂಲಸೌಕರ್ಯಗಳನ್ನು ಸುಧಾರಿಸುವಲ್ಲಿ ಗಮನಹರಿಸಲು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಮೂಲಕ ಸಿಎಸ್‌ಆರ್ ನಿಯಮಗಳನ್ನು ಜಾರಿಗೊಳಿಸಬೇಕು
- ಬೆಂಗಳೂರನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿ ಗುಣಮಟ್ಟದ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ನಗರ ಮತ್ತು ಪ್ರಾದೇಶಿಕ ಆರ್ಥಿಕ ಬೆಳವಣಿಗೆಯ ಕೇಂದ್ರಗಳನ್ನು ಬಲಪಡಿಸಬೇಕು
- ಬೆಂಗಳೂರು ಭಾರತದ ಬೆಳವಣಿಗೆಯ ಕೇಂದ್ರವಾಗಿರುವುದರಿಂದ, ಇತರ ರಾಜ್ಯಗಳಿಂದ ಹೆಚ್ಚಿನ ವಲಸೆಯ ಕಾರಣದಿಂದಾಗಿ ಹೆಚ್ಚುತ್ತಿರುವ ಬೇಡಿಕೆಗಳನ್ನು ನಿಭಾಯಿಸಲು ಹೆಚ್ಚುವರಿ ಮೂಲಸೌಕರ್ಯ ಅನುದಾನ ನೀಡಬೇಕು

## ❖ ದತ್ತಾಂಶ ಕೇಂದ್ರ: ₹26 ಲಕ್ಷ ಕೋಟಿ ಮೌಲ್ಯದ ಅವಕಾಶ- ಪಿಡಬ್ಲ್ಯುಸಿ

- ದೇಶದ ದತ್ತಾಂಶ ಕೇಂದ್ರಗಳ ವ್ಯವಸ್ಥೆಯು 2035ರ ವೇಳೆಗೆ ಒಟ್ಟು 280 ಬಿಲಿಯನ್ ಅಮೆರಿಕನ್ ಡಾಲರ್ (₹26.80 ಲಕ್ಷ ಕೋಟಿ) ಮೌಲ್ಯದ ಕಾರ್ಯಾದೇಶಗಳನ್ನು ಸೃಷ್ಟಿಸುವ ಅಂದಾಜು ಇದೆ ಎಂದು ಪಿಡಬ್ಲ್ಯುಸಿ ಅಂದಾಜು ಮಾಡಿದೆ.
- ಕೃತಕ ಬುದ್ಧಿಮತ್ತೆ ಹಾಗೂ ಡಿಜಿಟಲ್ ಪರಿವರ್ತನೆಯು ಇದಕ್ಕೆ ಕಾರಣವಾಗಲಿದೆ ಎಂದು ಅದು ಹೇಳಿದೆ.

- ದತ್ತಾಂಶ ಕೇಂದ್ರಗಳ ನಿರ್ಮಾಣಕ್ಕೆ ಆಗುವ ನೇರ ಹೂಡಿಕೆಗಳು 2035ರ ವೇಳೆಗೆ ಅಂದಾಜು 71.6 ಬಿಲಿಯನ್ ಡಾಲರ್‌ನಷ್ಟು (₹6.85 ಲಕ್ಷ ಕೋಟಿ) ಆಗುವ ನಿರೀಕ್ಷೆ ಇದೆ. ದತ್ತಾಂಶ ಕೇಂದ್ರಗಳಿಗೆ ಸಂಬಂಧಿಸಿದ ಇತರ ಹೂಡಿಕೆಗಳು ಇನ್ನಷ್ಟು ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸಲಿವೆ ಎಂದು ಹೇಳಿದೆ.
- ಭಾರತದಲ್ಲಿ ಈಗ ಇರುವ ದತ್ತಾಂಶ ಕೇಂದ್ರಗಳ ಅಂದಾಜು ಸಾಮರ್ಥ್ಯವು 1.6 ಗಿಗಾವಾಟ್ ಆಗಿದೆ. ಇದು 2035ರ ಹೊತ್ತಿಗೆ ಎಂಟೂವರೆ ಪಟ್ಟು ಹೆಚ್ಚಾಗಿ 13.8 ಗಿಗಾವಾಟ್ ಆಗಬಹುದು ಎಂದು ಪಿಡಬ್ಲ್ಯುಸಿ ಅಂದಾಜು ಮಾಡಿದೆ.

## ❖ ಟಿಸಿಎಸ್-ಆಂಥ್ರೋಪಿಕ್ ಪಾಲುದಾರಿಕೆ

- ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಕೆ ಮೂಲಕ ಗ್ರಾಹಕರಿಗೆ ನೆರವು ನೀಡಲು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಜಾಗತಿಕ ಎ.ಐ ಕಂಪನಿ ಅಂಥ್ರೋಪಿಕ್ ಜೊತೆಗೆ ಪಾಲುದಾರಿಕೆ ಮಾಡಿಕೊಂಡಿದೆ.
- ಪಾಲುದಾರಿಕೆ ಅಡಿ ಟಿಸಿಎಸ್ ಕಂಪನಿಯು, ಈ ವ್ಯವಹಾರಕ್ಕಾಗಿ ಮೀಸಲಾಗಿರುವ ಪ್ರತ್ಯೇಕ ಘಟಕವನ್ನು ಸ್ಥಾಪಿಸಲಿದೆ. ಎಂಜಿನಿಯರಿಂಗ್, ಹಣಕಾಸು, ಕಾನೂನು, ಮಾರ್ಕೆಟಿಂಗ್ ಮತ್ತು ಮಾರಾಟ ವಿಭಾಗದಲ್ಲಿ 50 ಸಾವಿರ ಸಿಬ್ಬಂದಿಯನ್ನು ನಿಯೋಜಿಸಲಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.
- ಹಣಕಾಸು ಸೇವೆಗಳು, ಸಾರ್ವಜನಿಕ ಸೇವೆಗಳು, ಆರೋಗ್ಯ, ವಿಮಾನಯಾನ, ದೂರಸಂಪರ್ಕ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿಟಿಸಿಎಸ್ ಮತ್ತು ಅಂಥ್ರೋಪಿಕ್ ಜಂಟಿಯಾಗಿ ಎ.ಐ ಸಲ್ಯೂಷನ್ಸ್ ಮತ್ತು ಸೇವೆಗಳನ್ನು ನೀಡಲಿವೆ.

# ಎಥೆನಾಲ್: ಎಕ್ಸೈಸ್ ಸುಂಕ ಇಲ್ಲ

## ಇ22, ಇ25, ಇ27 ಮತ್ತು ಇ30 ಎಥೆನಾಲ್ ಇರುವ ಪೆಟ್ರೋಲ್ ಸುಂಕ ರದ್ದು

ನವದೆಹಲಿ (ಪಿಟಿಐ): ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಮಿಶ್ರಣ ಹೊಂದಿರುವ ಪೆಟ್ರೋಲ್ ಮೇಲೆ ವಿಧಿಸಲಾಗುತ್ತಿದ್ದ ಎಕ್ಸೈಸ್ ಸುಂಕವನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ. ಇಂಧನ ಮಿಶ್ರಣದ ಪ್ರಕ್ರಿಯೆಯ ಮೇಲೆ ಎರಡು ಬಾರಿ ತೆರಿಗೆ ವಿಧಿಸುವ ಸ್ಥಿತಿ ಇರಬಾರದು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಪರೋಕ್ಷ ತೆರಿಗೆಗಳು ಹಾಗೂ ಸುಂಕಗಳ ಕೇಂದ್ರೀಯ ಮಂಡಳಿಯು ಈ ಕುರಿತಾಗಿ ಅಧಿಸೂಚನೆ ಹೊರಡಿಸಿದೆ. ಇ22, ಇ25, ಇ27 ಮತ್ತು ಇ30 (ಅಂದರೆ ಶೇ 22ರಷ್ಟು, ಶೇ 25ರಷ್ಟು, ಶೇ 27ರಷ್ಟು ಮತ್ತು ಶೇ 30ರಷ್ಟು ಎಥೆನಾಲ್ ಹೊಂದಿರುವ ಪೆಟ್ರೋಲ್) ಮಾದರಿಯ ಪೆಟ್ರೋಲ್‌ಗೆ ಎಕ್ಸೈಸ್ ಸುಂಕ ಇರುವುದಿಲ್ಲ ಎಂದು ತಿಳಿಸಿದೆ. ಇಲ್ಲಿ ಪೆಟ್ರೋಲ್‌ಗೆ ಅದಾಗಲೇ ಎಕ್ಸೈಸ್



ಸುಂಕ ಪಾವತಿ ಆಗಿದ್ದರೆ, ಮಿಶ್ರಣಕ್ಕೆ ಬಳಸುವ ಎಥೆನಾಲ್‌ಗೆ ಅದಾಗಲೇ ಜಿಎಸ್‌ಟಿ ಪಾವತಿ ಆಗಿದ್ದರೆ ಉಲ್ಲೇಖಿತ ಪ್ರಮಾಣದಲ್ಲಿ ಎಥೆನಾಲ್ ಮಿಶ್ರಣವಿರುವ ಪೆಟ್ರೋಲ್‌ಗೆ ಕೇಂದ್ರ ಎಕ್ಸೈಸ್ ಸುಂಕ ಇರುವುದಿಲ್ಲ.

ಎಥೆನಾಲ್ ಮಿಶ್ರಣ ಮಾಡುವುದನ್ನು ತಯಾರಿಕಾ ಚಟುವಟಿಕೆ ಎಂದು ಪರಿಗಣಿಸಿ, ಅದರ ಪರಿಣಾಮವಾಗಿ ಈ ಮಿಶ್ರಣದ ಇಂಧನಕ್ಕೆ ಮತ್ತೊಮ್ಮೆ ಎಕ್ಸೈಸ್ ಸುಂಕ ವಿಧಿಸುವುದನ್ನು ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ. 'ಎರಡು ಬಾರಿ ತೆರಿಗೆ ವಿಧಿಸುವುದನ್ನು ತಡೆಯುವುದು ಈ ಕ್ರಮದ ಉದ್ದೇಶ' ಎಂದು ಅವು ಸ್ಪಷ್ಟಪಡಿಸಿವೆ.

ಈಗಾಗಲೇ ಮಾರುಕಟ್ಟೆಯಲ್ಲಿ ಲಭ್ಯವಿರುವ ಇ5, ಇ10 ಮತ್ತು ಇ20 ಪೆಟ್ರೋಲ್‌ಗಳಿಗೆ ಯಾವ ಬಗೆಯಲ್ಲಿ ತೆರಿಗೆ ವಿಧಿಸಲಾಗುತ್ತಿದೆಯೋ, ಅದೇ ಬಗೆಯ ತೆರಿಗೆಯನ್ನು ಹೆಚ್ಚಿನ ಪ್ರಮಾಣದ ಎಥೆನಾಲ್ ಮಿಶ್ರಣ ಇರುವ ಪೆಟ್ರೋಲ್‌ಗೂ ಅನ್ವಯಿಸುವ ಉದ್ದೇಶದಿಂದ ಹೀಗೆ ಮಾಡಲಾಗಿದೆ. ಇದರಿಂದಾಗಿ ಗ್ರಾಹಕರ ಬಳಕೆಗೆ ಮಾರಾಟ ಮಾಡುತ್ತಿರುವ ಪೆಟ್ರೋಲ್ ಮೇಲಿನ ಎಕ್ಸೈಸ್ ಸುಂಕ ಕಡಿಮೆ ಆಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈಗ ಪ್ರಕಟಿಸಿರುವ ತೆರಿಗೆ ವಿನಾಯಿತಿಯು ಕಾನೂನಾತ್ಮಕ ಕ್ರಮ ಮಾತ್ರ. ಇದರಿಂದಾಗಿ ಮುಂದೊಂದು ದಿನ ಅಗತ್ಯ ಎದುರಾದಲ್ಲಿ ಹೆಚ್ಚಿನ ಪ್ರಮಾಣದ ಎಥೆನಾಲ್ ಮಿಶ್ರಣದ ಪೆಟ್ರೋಲ್‌ಅನ್ನು ಬಳಕೆಗೆ ಬಿಡುಗಡೆ ಮಾಡಲು ಅನುಕೂಲ ಆಗುತ್ತದೆ. ಈಗಿನ ಕ್ರಮವು ಇ22, ಇ25, ಇ27 ಮತ್ತು ಇ30 ಇಂಧನವನ್ನು ತಕ್ಷಣಕ್ಕೆ ಮಾರುಕಟ್ಟೆಗೆ ಬಿಡುಗಡೆ ಮಾಡುವ ಸೂಚನೆ ಅಲ್ಲವೇ ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಹೆಚ್ಚಿನ ಪ್ರಮಾಣದ ಎಥೆನಾಲ್ ಮಿಶ್ರಣದ ಇಂಧನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೊದಲು ವ್ಯಾಪಕವಾಗಿ ಪರೀಕ್ಷಿಸಲಾಗುತ್ತದೆ, ಸಮಾಲೋಚನೆ ನಡೆಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.

## ❖ ವಿಂಬಲ್ಡನ್ ಬಹುಮಾನ ಮೊತ್ತ ಏರಿಕೆ

- ಪ್ರತಿಷ್ಠಿತ ವಿಂಬಲ್ಡನ್ ಟೆನಿಸ್ ಟೂರ್ನಿಯ ಬಹುಮಾನ ಮೊತ್ತ ವನ್ನು ಶೇ 20ರಷ್ಟು ಹೆಚ್ಚಿಸಲಾಗಿದ್ದು, ಈ ಮೊತ್ತದಾಖಲೆಯ ₹821 ಕೋಟಿ (64.2 ದಶಲಕ್ಷ ಪೌಂಡ್) ತಲುಪಿದೆ. ಕಳೆದ ಬಾರಿ ಬಹುಮಾನ ಮತ್ತೆ ₹684 ಕೋಟಿ ಇತ್ತು.
- ಆಲ್ ಇಂಗ್ಲೆಂಡ್ ಕ್ಲಬ್ ಮುಖ್ಯಸ್ಥರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಬಹುಮಾನ ಮೊತ್ತ ಹೆಚ್ಚಳವಾಗಿರುವುದನ್ನು ಪ್ರಕಟಿಸಿದರು. ಸಿಂಗಲ್ಸ್ ಚಾಂಪಿಯನ್ ಆಗುವ ಆಟಗಾರ ಮತ್ತು ಆಟಗಾರ್ತಿತಲಾ ₹46 ಕೋಟಿ ಬಹುಮಾನ ಹಣ ತಮ್ಮದಾಗಿಸಿಕೊಳ್ಳಲಿದ್ದಾರೆ.

- 2025ರಲ್ಲಿ ಇಟಲಿಯ ಯಾನಿಕ್ ಸಿನ್ನರ್ ಪುರುಷರ ಸಿಂಗಲ್ಸ್ ಮತ್ತು ಪೋಲೆಂಡ್‌ನ ಇಗಾ ಕ್ವಾಂಟೆಕ್ ಮಹಿಳಾ ಸಿಂಗಲ್ಸ್ ಚಾಂಪಿಯನ್ ಆಗಿದ್ದರು. ಈ ಬಾರಿಯ ಚಾಂಪಿಯನ್‌ಷಿಪ್ ಜೂನ್ 29ರಂದು ಆರಂಭವಾಗಲಿದೆ. ಮೊದಲ ಸುತ್ತಿನಲ್ಲಿ ಸೋತರೂ ಅಂಥ ಅಟಗಾರನಿಗೆ ₹1.02 ಕೋಟಿಯಷ್ಟು ಸಿಗಲಿದೆ.
- ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಬಹುಮಾನ ಮೊತ್ತದಲ್ಲಿ ಶೇ 9.5 ರಷ್ಟು ಮಾತ್ರ ಏರಿಕೆ ಮಾಡಿದ್ದನ್ನು ಪ್ರತಿಭಟಿಸಿ ಅಟಗಾರರು ಪ್ರತಿಭಟನೆ ನಡೆಸಿದ್ದರು. ಹತಾಶರಾಗಿದ್ದ ಟೆನಿಸಿಗರು ಮಾಧ್ಯಮ ಚಟುವಟಿಕೆಯನ್ನು ಕೇವಲ 15 ನಿಮಿಷಗಳಿಗೆ ಸೀಮಿತಗೊಳಿಸಿದ್ದರು. ಟೂರ್ನಿಯ ಆದಾಯದಲ್ಲಿ ಶೇ 22ರಷ್ಟನ್ನು ಬಹುಮಾನ ಮೊತ್ತ ಏರಿಸಲು ಮೀಸಲಿಡಬೇಕೆಂದು ಆಟಗಾರರು ಒತ್ತಾಯಿಸಿದ್ದರು ಎನ್ನಲಾಗಿದೆ.
- ವಿಂಬಲ್ಡನ್ ಸಿಇಒ ಸ್ಯಾಲಿ ಬೋಲ್ಟನ್ ಅವರು ಬಹುಮಾನ ನಿಧಿ ವಿಷಯ ಚರ್ಚಿಸಲು ಮೇ ತಿಂಗಳಲ್ಲಿ ರೋಲಂಡ್ ಗ್ಯಾರೋಸ್‌ನಲ್ಲಿ ಆಟಗಾರರ ಪ್ರತಿನಿಧಿಗಳಾದ ಲ್ಯಾರಿ ಸ್ಕಾಟ್ ಅವರನ್ನು ಭೇಟಿಯಾಗಿದ್ದರು.

Dr. Rajkumar IAS/KAS Academy

## ❖ ಮೀನಾಕ್ಷಿ ಅರ್ಜಿ ವಜಾ

- ರಾಜ್ಯಸಭೆಗೆ ಆಯ್ಕೆ ಬಯಸಿ ಸಲ್ಲಿಸಿದ್ದ ನಾಮಪತ್ರವನ್ನು ಚುನಾವಣಾ ಅಧಿಕಾರಿ ತಿರಸ್ಕರಿಸಿದ್ದನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕಿ ಮೀನಾಕ್ಷಿ ನಟರಾಜನ್ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.
- ರಾಜ್ಯಸಭೆಗೆ ಮಧ್ಯಪ್ರದೇಶದಿಂದ ಆಯ್ಕೆ ಬಯಸಿ ತಾವು ಸಲ್ಲಿಸಿದ್ದ ನಾಮಪತ್ರವನ್ನು ಚುನಾವಣಾ ಅಧಿಕಾರಿ ತಿರಸ್ಕರಿಸಿದ್ದನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕಿ ಮೀನಾಕ್ಷಿ ನಟರಾಜನ್ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.
- ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪ್ರಶಾಂತ ಕುಮಾರ್ ಮಿಶ್ರಾ ಹಾಗೂ ಅತುಲ್ ಎಸ್.ಚಂದೂರಕರ್ ಅವರು ಇದ್ದ ಪೀಠವು, 'ಅರ್ಜಿದಾರರು ಈ ವಿಚಾರವಾಗಿ ಚುನಾವಣಾ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಲು ಸ್ವತಂತ್ರರು' ಎಂದು ಹೇಳಿದೆ.
- 'ಒಂದೊಮ್ಮೆ ಚುನಾವಣಾ ಅಧಿಕಾರಿಯು ನಾಮಪತ್ರವನ್ನು ತಿರಸ್ಕರಿಸಿದಲ್ಲಿ ಹಾಗೂ ಅಧಿಕಾರಿ ಕೈಗೊಂಡ ನಿರ್ಧಾರ ತಪ್ಪಿನಿಂದ ಕೂಡಿದೆ ಎಂದು ಭಾವಿಸಿದರೂ, ಅಭ್ಯರ್ಥಿಯು ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸುವುದೊಂದೇ ಪರಿಹಾರ' ಎಂದು ಪೀಠ ಸ್ಪಷ್ಟಪಡಿಸಿದೆ.
- ವಿಚಾರಣೆ ವೇಳೆ, ಮೀನಾಕ್ಷಿ ನಟರಾಜನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, 'ನನ್ನ ಕಕ್ಷಿದಾರರ ನಾಮಪತ್ರ ತಿರಸ್ಕರಿಸುವ ಮೂಲಕ ಆಗಿರುವ ಪ್ರಮಾದಕ್ಕೆ ಪರಿಹಾರ ಕೊಡಬೇಕು. ಇದಕ್ಕಾಗಿ ಸಂವಿಧಾನದ 32ನೇ ವಿಧಿ ಅಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ನ್ಯಾಯಾಲಯ ಮಧ್ಯಪ್ರವೇಶಿಸಬೇಕು' ಎಂದು ಪೀಠವನ್ನು ಕೋರಿದರು.
- ಈ ವಾದವನ್ನು ತಿರಸ್ಕರಿಸಿದ ಪೀಠವು. 'ಚುನಾವಣಾ ತಕರಾರು ಅರ್ಜಿಗಳ ವಿಚಾರಣೆ ವೇಳೆ, ಸಂವಿಧಾನದ 32 ವಿಧಿಯಡಿ ಸುಪ್ರೀಂ ಕೋರ್ಟ್ ಹೊಂದಿರುವ ಅಧಿಕಾರ ಅಥವಾ 226ನೇ ವಿಧಿ ಅಡಿ ಹೈಕೋರ್ಟ್ ತನಗಿರುವ ಅಧಿಕಾರ ಚಲಾಯಿಸಲು ಪ್ರಯತ್ನಿಸಿದರೆ, ಸಂವಿಧಾನದ 329(ಬಿ) ವಿಧಿಯು ನ್ಯಾಯಾಲಯ ಮಧ್ಯಪ್ರವೇಶಿಸುವುದಕ್ಕೆ ನಿರ್ಬಂಧ ವಿಧಿಸುತ್ತದೆ' ಎಂದು ಹೇಳಿತು.
- ಚುನಾವಣೆಗೆ ಸಂಬಂಧಿಸಿದ ವಿಚಾರಗಳಲ್ಲಿ ನ್ಯಾಯಾಲಯಗಳು ಮಧ್ಯ ಪ್ರವೇಶಿಸುವುದನ್ನು ಸಂವಿಧಾನದ 329ನೇ ವಿಧಿಯು ನಿರ್ಬಂಧಿಸುತ್ತದೆ. ಯಾವುದೇ ನ್ಯಾಯಿಕ ಪ್ರಕ್ರಿಯೆಗಳಿಂದ ಚುನಾವಣೆಗಳು ವಿಳಂಬವಾಗಬಾರದು ಎಂಬುದು ಈ ವಿಧಿಯ ಆಶಯ.
- 'ಕನಿಷ್ಠ ಎರಡು ವರ್ಷ ಜೈಲು ಶಿಕ್ಷೆ ವಿಧಿಸಬಹುದಾದಂತಹ ಕ್ರಿಮಿನಲ್ ಪ್ರಕರಣವಿದ್ದಾಗ ಮಾತ್ರ ಅಭ್ಯರ್ಥಿಯು ಆ ಕುರಿತು ನಾಮಪತ್ರದಲ್ಲಿ ಉಲ್ಲೇಖಿಸಬೇಕು. ಈ ಪ್ರಕರಣದಲ್ಲಿ ಅಭ್ಯರ್ಥಿಗೆ ಕೇವಲ ಸಮನ್ಸ್ ನೀಡಲಾಗಿದೆ' ಎಂದು ಸಿಂಘ್ವಿ ಅವರು ಪೀಠಕ್ಕೆ ತಿಳಿಸಿದರು.
- ಆಗ, 'ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತಗೊಂಡ ಸಂದರ್ಭಗಳಲ್ಲಿ ಈ ನ್ಯಾಯಾಲಯ ಮಧ್ಯಪ್ರವೇಶಿಸಿ ತೀರ್ಪು ನೀಡಿರುವ ಯಾವುದಾದರೂ ಪ್ರಕರಣಗಳು ಇದ್ದಲ್ಲಿ ತೋರಿಸಿ' ಎಂದು ಪೀಠ ಹೇಳಿತು.
- ರಾಜ್ಯಸಭಾ ಚುನಾವಣೆಯಲ್ಲಿ ವಿಜೇತ ಅಭ್ಯರ್ಥಿ ಪರ ಹಿರಿಯ ವಕೀಲ ಮುಕುಲ್ ರೋಹ್ಟಗಿ, ಮಧ್ಯಪ್ರದೇಶ ಸರ್ಕಾರ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಚುನಾವಣಾ ಆಯೋಗದ ಪರ ಹಿರಿಯ ವಕೀಲ ಡಿ.ಎಸ್.ನಾಯ್ಡು ಹಾಜರಿದ್ದರು.
- ತೆಲಂಗಾಣದಲ್ಲಿ ತಮ್ಮ ವಿರುದ್ಧ ದಾಖಲಾಗಿದ್ದ ಪ್ರಕರಣ ಕುರಿತು ಮೀನಾಕ್ಷಿ ನಟರಾಜನ್ ಅವರು ಅಫಿಡವಿಟ್‌ನಲ್ಲಿ ಉಲ್ಲೇಖಿಸಿಲ್ಲ ಎಂದು ಬಿಜೆಪಿಯ ಮಹೇಶ್ ಕೇವಟ್ ಅವರು ದೂರು ಸಲ್ಲಿಸಿದ್ದರು. ಈ ದೂರು ಆಧರಿಸಿ ದಾಖಲೆಗಳನ್ನು ಪರಿಶೀಲಿಸಿದ್ದ ಚುನಾವಣಾ ಅಧಿಕಾರಿ ಅರವಿಂದ ಶರ್ಮಾ ಅವರು, 'ಅಪೂರ್ಣ ಅಫಿಡವಿಟ್ ಸಲ್ಲಿಸಲಾಗಿದೆ' ಎಂದು ಅಭಿಪ್ರಾಯಪಟ್ಟು, ಮೀನಾಕ್ಷಿ ನಟರಾಜನ್ ಅವರ ನಾಮಪತ್ರವನ್ನು ತಿರಸ್ಕರಿಸಿ ಆದೇಶಿಸಿದ್ದರು. ಬಿಜೆಪಿಯ ಎಲ್ಲ ಮೂರು ಅಭ್ಯರ್ಥಿಗಳು ಗೆದ್ದಿರುವುದಾಗಿ ಘೋಷಿಸಿದ್ದರು.
- ಬ್ಯಾಂಕ್‌ಗಳಿಗೆ ₹1,454 ಕೋಟಿ ಮರುಪಾವತಿ ಮಾಡದ ಪ್ರಕರಣL ನಷ್ಟವಾದ ಕಾರಣ ಸಾಲ ಮರುಪಾವತಿಸದ ಕಂಪನಿ

Dr. Rajkumar IAS KAS Academy

## ❖ ನಸೀರ್ ಅಹಮದ್ ದಿವಾಳಿ: ಎನ್‌ಸಿಎಲ್‌ಟಿ

- ಬ್ಯಾಂಕ್‌ಗಳಿಂದ ಪಡೆದಿದ್ದ ಸಾಲ ಮತ್ತು ಬಡ್ಡಿಯ ಮೊತ್ತ ₹1,454.71 ಕೋಟಿ ಮರುಪಾವತಿ ಮಾಡದೇ ಇರುವ ಪ್ರಕರಣದಲ್ಲಿ ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯ ನಸೀರ್ ಅಹಮದ್ ಅವರನ್ನು ದಿವಾಳಿ ಎಂದು ರಾಷ್ಟ್ರೀಯ ಕಂಪನಿ ಕಾನೂನುಗಳ ನ್ಯಾಯ ಮಂಡಳಿಯು (ಎನ್‌ಸಿಎಲ್‌ಟಿ) ಘೋಷಿಸಿದೆ. ಇದರಿಂದಾಗಿ ನಸೀರ್ ಅವರ ವಿಧಾನ ಪರಿಷತ್ ಸದಸ್ಯತ್ವವೂ ರದ್ದಾಗುವ ಸಾಧ್ಯತೆ ಇದೆ.
- ನಸೀರ್ ಅವರು ವ್ಯವಸ್ಥಾಪಕ ನಿರ್ದೇಶಕರಾಗಿದ್ದ. ಅವರ ಪತ್ನಿ ನುಝುತ್ ಆಯಿಷಾ ನಸೀರ್ ಮತ್ತು ಪುತ್ರ ಅವೈಜ್ ಅಹಮದ್ ಅವರು ನಿರ್ದೇಶಕರಾಗಿದ್ದ ಸ್ಕ್ಯಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್, ಎಸ್‌ಬಿಐ, ಕೆನರಾ, ಐಡಿಬಿಐ ಬ್ಯಾಂಕ್‌ಗಳಿಂದ ಸಾಲ ಪಡೆದಿತ್ತು. ಈ ಸಾಲಕ್ಕೆ ನಸೀರ್, ಅವರ ಪತ್ನಿ ಮತ್ತು ಪುತ್ರ ವೈಯಕ್ತಿಕ ಖಾತರಿ ನೀಡಿದ್ದರು.
- ಕಂಪನಿಯು ನಷ್ಟವಾದ ಕಾರಣ ಸಾಲ ಮರುಪಾವತಿ ಮಾಡಿರಲಿಲ್ಲ. ಸಾಲ ವಸೂಲಾತಿಗೆ ಬ್ಯಾಂಕ್‌ಗಳು ಮಾಡಿದ್ದ ಪ್ರಯತ್ನ ಫಲ ನೀಡಿರಲಿಲ್ಲ. ಹೀಗಾಗಿ ಬ್ಯಾಂಕ್‌ಗಳು ಸ್ಕ್ಯಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್‌ನ ಸಾಲವನ್ನು ಅನುತ್ಪಾದಕ ಸಾಲ (ಎನ್‌ಪಿಎ) ಎಂದು ವರ್ಗೀಕರಿಸಿ ದ್ದವು. ಜತೆಗೆ ಎನ್‌ಸಿಎಲ್‌ಟಿ ಮೂಲಕ ಸಾಲ ವಸೂಲಿಗೆ ಮುಂದಾಗಿದ್ದವು.
- ದಿವಾಳಿ ಸಂಹಿತೆ (ಐಬಿಸಿ) ಅಡಿಯಲ್ಲಿ ಪರಿಹಾರಾತ್ಮಕ ವಸೂಲಾತಿ ಕ್ರಮ ಮತ್ತು ಕಂಪನಿಯ ಸ್ವತ್ತುಗಳ ಮುಟ್ಟು ಗೋಲು ಪ್ರಕ್ರಿಯೆಯನ್ನು 2019ರಲ್ಲಿ ಆರಂಭಿಸಲಾಗಿತ್ತು. ಪರಿಹಾರಾತ್ಮಕ ಕ್ರಮದ ಪ್ರಕಾರ ನಸೀರ್ ಮತ್ತು ಕುಟುಂಬ ದವರು ಬ್ಯಾಂಕ್‌ಗಳಿಗೆ ಒಟ್ಟು ₹791 ಕೋಟಿ ಪಾವತಿ ಮಾಡುವ ಪ್ರಸ್ತಾಪವನ್ನು ಇಡಲಾಗಿತ್ತು. ಮರುಪಾವತಿ ಕಾರ್ಯ ಯೋಜನೆಯನ್ನು ಸಲ್ಲಿಸಿ ಎಂದು ಎನ್‌ಸಿಎಲ್‌ಟಿಯು ನಸೀರ್ ಮತ್ತು ಇತರ ಖಾತರಿದಾರರಿಗೆ ಸೂಚಿಸಿತ್ತು.
- ಹಲವು ತಿಂಗಳ ಸಮಯಾವಕಾಶ ನೀಡಿದರೂ ಖಾತರಿದಾರರು ಮರು ಪಾವತಿ ಕಾರ್ಯಯೋಜನೆಯನ್ನು ಸಲ್ಲಿಸಿರಲಿಲ್ಲ. ಹೀಗಾಗಿ ಬ್ಯಾಂಕ್‌ಗಳು 'ದಿವಾಳಿತನ ಘೋಷಣೆ ಪ್ರಕ್ರಿಯೆ ಆರಂಭಿಸಿ' ಎಂದು ಎನ್‌ಸಿಎಲ್‌ಟಿಗೆ ಅರ್ಜಿ ಸಲ್ಲಿಸಿದ್ದವು. ಸುನಿಲ್ ಕುಮಾರ್ ಅಗರ್‌ವಾಲ್ (ನ್ಯಾಯಾಂಗ ಸದಸ್ಯ) ಮತ್ತು ರಾಧಾಕೃಷ್ಣ ಶ್ರೀಪಾದ (ತಾಂತ್ರಿಕ ಸದಸ್ಯ) ಅವರಿದ್ದ ಎನ್‌ಸಿಎಲ್‌ಟಿಯ ಬೆಂಗಳೂರು ಪೀಠವು ವಿಚಾರಣೆ ನಡೆಸಿತ್ತು.
- 'ನಾವು ಬ್ಯಾಂಕ್‌ಗಳಿಗೆ ನೇರವಾಗಿ ಖಾತರಿ ಒದಗಿಸಿಲ್ಲ. ಹೀಗಾಗಿ ನಮ್ಮ ವಿರುದ್ಧ ದಿವಾಳಿತನ ಘೋಷಣೆ ಪ್ರಕ್ರಿಯೆ ಆರಂಭಿಸಲು ಸಾಧ್ಯವಿಲ್ಲ' ಎಂದು ನಸೀರ್ ಮತ್ತು ಕುಟುಂಬದವರು ವಾದಿಸಿದ್ದರು. ಆದರೆ ಪೀಠವು ಈ ವಾದವನ್ನು ತಿರಸ್ಕರಿಸಿ. ನಸೀರ್ ಮತ್ತು ಕುಟುಂಬ ದವರು ದಿವಾಳಿ ಎಂದು ಘೋಷಿಸಿದೆ. ಮುಂದಿನ ಪ್ರಕ್ರಿಯೆಗಾಗಿ ರವೀಂದ್ರ ಬೆಲೆಯೂರ್ ಅವರನ್ನು ದಿವಾಳಿತನ ಟ್ರಸ್ಟಿ ಆಗಿ ನೇಮಿಸಿದೆ.

Dr. Rajkumar IAS/KAS Academy

# ಸಂಗೀತ ನಾಟಕ ಅಕಾಡೆಮಿ ಸಾಧಕರು

ಪ್ರಜಾವಾಣಿ ವಾರ್ತೆ

ಕೇಂದ್ರ ಸಂಸ್ಕೃತಿ ಇಲಾಖೆಯು ಸಂಗೀತ ನಾಟಕ ಅಕಾಡೆಮಿ ಫೆಲೋಷಿಪ್ (ಅಕಾಡೆಮಿ ರತ್ನ), 2024 ಮತ್ತು 2025ನೇ ಸಾಲಿನ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (ಅಕಾಡೆಮಿ ಪುರಸ್ಕಾರ) ಹಾಗೂ 'ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ'ವನ್ನು ಪ್ರಕಟಿಸಿದ್ದು, ಕರ್ನಾಟಕದ ಹಲವು ಕಲಾವಿದರು ಆಯ್ಕೆಯಾಗಿದ್ದಾರೆ.

## ಜ್ಯೋತಿ ಹೆಗಡೆ



ವಿದುಷಿ ಜ್ಯೋತಿ ಹೆಗಡೆ (ದೇವಗುಡಿ) ಅವರು ಶಿರಸಿ ಸಮೀಪದ ಬಿಸಿಲಕೊಪ್ಪದವರು. ಭಾರತೀಯ ಶಾಸ್ತ್ರೀಯ ಸಂಗೀತ ಕ್ಷೇತ್ರದ ಪುರಾತನ ಶೈಲಿ ಧ್ರುಪದ್ ಮತ್ತು ಕಠಿಣವಾದ ರುದ್ರವೀಣೆ ವಾದನವನ್ನು ಜಾಗತಿಕ ಮಟ್ಟದಲ್ಲಿ ಮಾನ್ಯತೆ ತಂದುಕೊಟ್ಟರು. ದಂತಕಥೆ ಉಸ್ತಾದ್ ಅಸದ್ ಅಲಿ ಖಾನ್ ಸಾಹೆಬ್ ಅವರ ಏಕೈಕ ಮಹಿಳಾ ಶಿಷ್ಯೆ ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಅವರು 2025ನೇ ಸಾಲಿನ ಅಕಾಡೆಮಿ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ.

## ರಂಜನಿ ವಾಸುಕಿ




ಬೆಂಗಳೂರಿನ ರಂಜನಿ ವಾಸುಕಿ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ. ತಾಯಿ ಮತ್ತು ಗುರು ನಾಗವಲ್ಲಿ ನಾಗರಾಜ್ ಅವರಿಂದ ಬಾಲ್ಯದಿಂದಲೇ ಸಂಗೀತ ಅಭ್ಯಾಸ ಆರಂಭಿಸಿದರು. ಎಂ.ಎ.ಸಂಗೀತದಲ್ಲಿ ಚಿನ್ನದ ಪದಕ ಪಡೆದ ಅವರು ಕರ್ನಾಟಕ ಸಂಗೀತದಲ್ಲಿ ಗಮಕ ಸೌಂದರ್ಯ ಕುರಿತು ಮಹಾಪ್ರಬಂಧ ಮಂಡಿಸಿ ಪಿಎಚ್.ಡಿ ಪಡೆದಿದ್ದಾರೆ. ಅವರು 2025ನೇ ಸಾಲಿನ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

## ವೀಣಾ ಮೂರ್ತಿ



ಬೆಂಗಳೂರಿನವರಾದ ವೀಣಾ ಮೂರ್ತಿ ವಿಜಯ್ ಐದು ದಶಕಗಳಿಂದ ನೃತ್ಯ ಕ್ಷೇತ್ರದಲ್ಲಿ ಆಳವಾದ ಅಭ್ಯಾಸ ಮಾಡಿದ್ದಾರೆ. ಭರತನಾಟ್ಯ ಮತ್ತು ಕೂಚಿಪುಡಿ ನೃತ್ಯ ಪ್ರಕಾರಗಳಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಾಧನೆ ಮಾಡಿದ್ದರೆ. ರಾಜರಾಜೇಶ್ವರಿ ಕಲಾನಿಕೇತನ ಎಂಬ ನೃತ್ಯ ಶಾಲೆ ಆರಂಭಿಸಿ, ಆ ಮೂಲಕ ನೂರಾರು ವಿದ್ಯಾರ್ಥಿಗಳಿಗೆ ಶಾಸ್ತ್ರೀಯವಾಗಿ ನೃತ್ಯ ಕಲಿಸುತ್ತಿದ್ದಾರೆ. ದೇಶ ವಿದೇಶಗಳ ವಿಶ್ವವಿದ್ಯಾಲಯಗಳಲ್ಲಿ ನೃತ್ಯ ಕಾರ್ಯಾಗಾರಗಳನ್ನು ಆಯೋಜಿಸಿದ್ದಾರೆ. ಅವರಿಗೆ 2024ನೇ ಸಾಲಿನ ಅಕಾಡೆಮಿ ಪುರಸ್ಕಾರ ಸಂದಿದೆ.

## ಆನೂರು ಅನಂತಕೃಷ್ಣ ಶರ್ಮ




ಮೃದಂಗ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮಾ (ಶಿವು ಎಂದು ಜನಪ್ರಿಯ) ವಿದ್ವಾನ್ ಆನೂರು ಆರ್ ರಾಮಕೃಷ್ಣ ಮತ್ತು ಲಕ್ಷ್ಮೀ ದಂಪತಿಯ ಪುತ್ರ. ಸಂಗೀತಗಾರರ ಕುಟುಂಬದವರು. ಗಾಯನ ಮೃದಂಗ ಕಲಾವಿದರಾಗಿರುವ ಇವರು ಸುಗಮ, ಕರ್ನಾಟಕ ಶಾಸ್ತ್ರೀಯ, ಜನಪದ ಹಾಗೂ ಸಿನಿಮಾ ಸಂಗೀತದಲ್ಲಿ ಛಾಪು ಮೂಡಿಸಿರುವ ಕಲಾವಿದರು. ಶಿವು ಅವರು 28ಕ್ಕೂ ಹೆಚ್ಚು ಪಕ್ಕವಾದ್ಯ ನುಡಿಸುವ ಅಪರೂಪ ಕಲಾವಿದರಾಗಿದ್ದಾರೆ. ಅವರು 2024ನೇ ಸಾಲಿನ ಅಕಾಡೆಮಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

## ಟಿ.ಎಸ್. ಸತ್ಯವತಿ



ಬೆಂಗಳೂರಿನ ಟಿ.ಎಸ್. ಸತ್ಯವತಿ ಅವರು ಕರ್ನಾಟಕ ಸಂಗೀತ ಗಾಯಕಿ, ಸಂಗೀತಶಾಸ್ತ್ರಜ್ಞೆ ಹಾಗೂ ಸಂಸ್ಕೃತ ವಿದುಷಿ. ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು. ಎರಡರ ಹರೆಯದಲ್ಲಿಯೇ ಮೈಸೂರು ಮಹಾರಾಣಿಯ ಮುಂದೆ ಹಾಡಿದ ಬಾಲಪ್ರತಿಭೆ. ಹಿರಿಯಕ್ಕ ವಿದುಷಿ ವಸಂತ ಮಾಧವಿ, ವಿದ್ವಾನ್ ಆರ್.ಕೆ. ಶ್ರೀಕಂಠನ್ ಅವರ ಮಾರ್ಗದರ್ಶನದಲ್ಲಿ ಸಂಗೀತ ಕಲಿತವರು. ವಿದ್ವಾನ್ ಬೆಂಗಳೂರು ಕೆ ವೆಂಕಟರಾಂ ಅವರಲ್ಲಿ ಮೃದಂಗ ಕಲಿತರು. ಇವರ ಸಾಧನೆಗೆ 2024ನೇ ಸಾಲಿನ ಅಕಾಡೆಮಿ ಪುರಸ್ಕಾರ ಸಂದಿದೆ.

## ಕೆ. ವಾಗೀಶ್



ಮೈಸೂರಿನ ಕೆ. ವಾಗೀಶ್ ಅವರು ಪ್ರಸಿದ್ಧ ಸಂಗೀತಕಾರರು ಮತ್ತು ಪ್ರಸಾರ ಭಾರತಿಯ ನಿವೃತ್ತ ಡೆಪ್ಯುಟಿ ಡೈರೆಕ್ಟರ್ ಜನರಲ್ ಆಗಿದ್ದರು. ಟೈಗರ್ ವರದಾಚಾರ್ಯರ ಸಂಗೀತ ಕಲಾಪದ್ಧತಿಗೆ ಸೇರಿದ ಇವರು ಬಾಲ್ಯದಿಂದಲೇ ಸಂಗೀತ ಆಸಕ್ತಿ ಬೆಳೆಸಿಕೊಂಡರು. ನಂತರ ಶಾಲಾ–ಕಾಲೇಜುಗಳ ಹಂತದಲ್ಲಿ ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರು. ಅವರು 2024ನೇ ಸಾಲಿನ ಅಕಾಡೆಮಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

## ಎಸ್.ಸಿ ಶರ್ಮಾ



ಬೆಂಗಳೂರಿನ ಶರ್ಮಾ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಪಿಟೀಲು ವಾದನದಲ್ಲಿ ಪರಿಣತಿ ಪಡೆದಿದ್ದಾರೆ. ಅವರಿಗೆ 'ಕರ್ನಾಟಕ ಕಲಾಶ್ರೀ', ಗಾನ ಕಲಾಶ್ರೀ' ಸೇರಿ ಹಲವು ಪ್ರಶಸ್ತಿಗಳು ಸಂದಿವೆ. ಇವರು ಜನಪದ ಸಂಸ್ಕೃತಿಯನ್ನು ಐತಿಹಾಸಿಕವಾಗಿ, ಮಾನವಿಕ, ಸಮಾಜ ಶಾಸ್ತ್ರೀಯ, ಸಾಂಸ್ಕೃತಿಕ ವೈವಿಧ್ಯದ ನೆಲೆಗಳಲ್ಲಿ ಅಧ್ಯಯನ ನಡೆಸಿದ್ದಾರೆ. ವಿಶ್ವವಿದ್ಯಾಲಯದ ಕುಲಪತಿಯಾಗಿ, ನ್ಯಾಕ್ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಅವರು 2024ನೇ ಸಾಲಿನ ಅಕಾಡೆಮಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

Publication Date
13/06/2026

Presented by ಪ್ರಜಾವಾಣಿ

## ಮಹಿಳೆಯರ ಮತ ಸೆಳೆಯಲು ಪೈಪೋಟಿ ನಡೆಸುವ ರಾಜಕೀಯ ಪಕ್ಷಗಳು ಪ್ರಾತಿನಿಧ್ಯದ ವಿಚಾರದಲ್ಲಿ ಆಸಕ್ತಿ ತೋರುತ್ತಿಲ್ಲವೇಕೆ? ಈ ಕುರಿತು ಎರಡು ಅಭಿಪ್ರಾಯಗಳು

# ರಾಜಕೀಯದಲ್ಲಿ ಹೆಣ್ಣು ಕರಿಬೇವೇ?

• ಮೋಟಮ್ಮ



> ಪಂಚರಾಜ್ಯಗಳ ಚುನಾವಣೆ ಸಂದರ್ಭದಲ್ಲಿ 'ನಾರಿಶಕ್ತಿ' ಎಂದು ಬಿಂಬಿಸಿದ ಬಿಜೆಪಿಯು, ಮಹಿಳಾ ಮೀಸಲಾತಿಯನ್ನು ಕ್ಷೇತ್ರ ಮರು ವಿಂಗಡಣೆ ಮಸೂದೆ ಜತೆಗೆ ಸೇರ್ಪಡೆ ಮಾಡಿ ಮಂಡಿಸಿತು. ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಗೊಳ್ಳಬಾರದು ಎಂಬ ಕಾರಣಕ್ಕೇ ಎರಡನ್ನೂ ಒಂದರಲ್ಲೇ ಮಿಶ್ರಣ ಮಾಡಲಾಯಿತು. ಈಗ ಪ್ರಧಾನಿ ನರೇಂದ್ರ ಮೋದಿ ಆದಿಯಾಗಿ ಬಿಜೆಪಿಯವರು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಲೋಕಸಭೆ, ವಿಧಾನಸಭೆಯಲ್ಲಿ ಮಹಿಳಾ ಮೀಸಲಾತಿ ಜಾರಿಯಾದರೆ, ಅದರಲ್ಲೂ ಜಾತಿಗಳ ಒಳ ಮೀಸಲಾತಿ ವರ್ಗೀಕರಣ ಆಗಬೇಕು. ಹಾಗೆ ಮಾಡಿದರೆ ತಮ್ಮ ಕ್ಷೇತ್ರಗಳು ಕೈ ಜಾರಲಿವೆ ಎಂಬ ಭಯವೂ ಅವರಿಗೆ ಇದ್ದಂತಿದೆ

21ನೇ ಶತಮಾನದಲ್ಲೂ ರಾಜಕೀಯ ಪಕ್ಷಗಳಿಗೆ ಮಹಿಳಾ ಪ್ರಾತಿನಿಧ್ಯ ಎಂಬುದು ಕೇವಲ ಕರಿಬೇವಿನ ಸೊಪ್ಪಿನಂತೆ ಆಗಿದೆ. ಒಗ್ಗರಣೆಗಷ್ಟೇ ಬಳಸಿಕೊಂಡು ಹೆಸರಿಗಷ್ಟೆ ಒಬ್ಬರಿಗೋ, ಇಬ್ಬರಿಗೋ ಸ್ಥಾನ ನೀಡಿ ಅದನ್ನೇ ಮಹಿಳಾ ಪ್ರಾತಿನಿಧ್ಯ ಎನ್ನಲಾಗುತ್ತಿದೆ. ಎಲ್ಲಾ ಪಕ್ಷಗಳಲ್ಲೂ ಮಹಿಳಾ ವಿಭಾಗಗಳಿವೆ. ಆದರೆ, ಅವುಗಳಿಗೆ ಯಾವುದೇ ಆದ್ಯತೆ ಇಲ್ಲ. ಮಹಿಳೆಯರಿಗೆ ಸ್ಥಾನ ನೀಡಬೇಕು ಎಂಬ ಕಾರಣಕ್ಕೆ ಕಷ್ಟಪಟ್ಟು ಅವಕಾಶಗಳನ್ನು ಕಲ್ಪಿಸುವುದು ಎಲ್ಲಾ ಪಕ್ಷಗಳಲ್ಲೂ ನಿರಂತರವಾಗಿ ನಡೆದುಕೊಂಡು ಬಂದಿದೆ.

ರಾಜಕಾರಣದಲ್ಲಿ ಮಹಿಳೆಯರ ಪಾತ್ರವು ಕ್ರಮೇಣ ಹೆಚ್ಚಾಗುತ್ತಿದೆ. ಮಹಿಳೆಯರು ಇಲ್ಲದ ರಾಜಕೀಯ ಪಕ್ಷವನ್ನಾಗಲಿ, ರಾಜಕಾರಣವನ್ನಾಗಲಿ ಊಹಿಸಿಕೊಳ್ಳಲು ಸಾಧ್ಯವಿಲ್ಲ. ಸಾರ್ವಜನಿಕ ಸಭೆ, ಸಮಾರಂಭ, ಪ್ರತಿಭಟನೆ, ಜಾಥಾ, ಮತಯಾಚನೆ– ಹೀಗೆ ಪಕ್ಷಕ್ಕೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳಲ್ಲೂ ಪುರುಷರಿಗೆ ಸಮನಾಗಿ– ಕೆಲವೊಮ್ಮೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರು ಸಕ್ರಿಯರಾಗಿದ್ದಾರೆ. ಆದರೆ, ಅಧಿಕಾರ, ಸ್ಥಾನಮಾನ ಹಂಚಿಕೆಯ ವಿಚಾರದಲ್ಲಿ ಮಾತ್ರ ಮಹಿಳೆಯರ ಪಾತ್ರವನ್ನು ಅತ್ಯಂತ ಸೀಮಿತಗೊಳಿಸಲಾಗಿದೆ. ಹಿಂದಿನಿಂದಲೂ ಇದೇ ಪ್ರವೃತ್ತಿ ಮುಂದುವರಿಯುತ್ತಿದೆ.

ಕರ್ನಾಟಕ ರಾಜ್ಯದ ಮಟ್ಟಿಗೆ ನೋಡುವುದಾದರೆ ಮಹಿಳೆಯರ ರಾಜಕೀಯ ಪ್ರವೇಶ ಆರಂಭವಾಗಿದ್ದು ಯಶೋಧರಮ್ಮ ದಾಸಪ್ಪ ಮತ್ತು ಚಿಕ್ಕಮಗಳೂರಿನ ಬಿ.ಎಲ್.ಸುಬ್ಬಮ್ಮ ಅವರ ಮೂಲಕ. ಯಶೋಧರಮ್ಮ ಅವರು 1962ರಲ್ಲಿ ಹಾಸನ ಕ್ಷೇತ್ರದಿಂದ ವಿಧಾನಸಭೆ ಪ್ರವೇಶ ಮಾಡಿದರು. ಚಿಕ್ಕಮಗಳೂರಿನಿಂದ ಬಿ.ಎಸ್.ಸುಬ್ಬಮ್ಮ ಶಾಸಕಿಯಾಗಿದ್ದರು.

ಈ ಇಬ್ಬರ ಪೈಕಿ ಯಶೋಧರಮ್ಮ ದಾಸಪ್ಪ ಅವರು ಎರಡು ಬಾರಿ ಸಚಿವರಾದರು. ಕರ್ನಾಟಕದ ಇತಿಹಾಸದಲ್ಲಿ ಸಂಪುಟ ದರ್ಜೆ ಸಚಿವೆಯಾದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೂ ಯಶೋಧರಮ್ಮ ಪಾತ್ರರಾದರು. ಎಸ್.ನಿಜಲಿಂಗಪ್ಪ ಮತ್ತು ಎಸ್.ಆರ್.ಕಂಠಿ ಅವರ ನೇತೃತ್ವದ ಸರ್ಕಾರಗಳಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದರು. ನಿಜಲಿಂಗಪ್ಪ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಮದ್ಯಪಾನ ನಿಷೇಧವನ್ನು ಹಿಂಪಡೆಯಿತು. ಅಪ್ಪಟ ಗಾಂಧಿವಾದಿಯಾಗಿದ್ದ ಯಶೋಧರಮ್ಮ ಅವರು ಇದನ್ನು ವಿರೋಧಿಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದು ಮತ್ತೊಂದು ಇತಿಹಾಸ.

ದೇವರಾಜ ಅರಸು ಅವರ ಕಾಲದಲ್ಲಿ ಮಹಿಳೆಯರಿಗೆ ಒಂದು ಹೆಜ್ಜೆ ಹೆಚ್ಚಿನ ಆದ್ಯತೆ ದೊರಕಿತ್ತು. ಮನೋರಮಾ ಮಧ್ವರಾಜ್, ಇ.ವಾ.ವಾಸ್ ಅವರಿಗೆ ಸಚಿವ ಸ್ಥಾನ ದೊರಕಿತು. ಸುಮತಿ ಮಡಿಮನ್ ಅವರು ಉಪಸಭಾಧ್ಯಕ್ಷರಾದರು. 1978ರಲ್ಲಿ ನಾನು ಮೊದಲ ಬಾರಿಗೆ ಶಾಸಕಿಯಾಗಿ ಆಯ್ಕೆಯಾದೆ. ಸುಮಾ ವಸಂತ್, ನಾಗಮ್ಮ ಕೇಶವಮೂರ್ತಿ ಕೂಡ ಶಾಸಕಿಯರಾಗಿದ್ದರು. ಆಗ ಇಂದಿರಾ ಗಾಂಧಿ ಪ್ರಧಾನಿಯಾದರು. ಈಗಿನಂತೆ ಸಚಿವ ಸ್ಥಾನಕ್ಕೆ ಮಹಿಳೆಯರ ಒತ್ತಡವೂ ಇರಲಿಲ್ಲ. ಆದರೂ, ಸುಮಾ ವಸಂತ್ ಮತ್ತು ನಾಗಮ್ಮ ಕೇಶವಮೂರ್ತಿ ಸಚಿವರಾದರು.


ಗುಂಡೂರಾವ್, ಎಸ್.ಆರ್.ಬೊಮ್ಮಾಯಿ, ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ, ಎಸ್.ಬಂಗಾರಪ್ಪ, ವೀರಪ್ಪ ಮೊಯಿಲಿ ಆಡಳಿತದ ಅವಧಿಯಲ್ಲಿ ಮಹಿಳಾ ಪ್ರಾತಿನಿಧ್ಯ ಅಷ್ಟೇನೂ ಕಾಣಿಸಲಿಲ್ಲ. 1994ರಲ್ಲಿ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಬಿ.ಟಿ.ಲಲಿತಾ ನಾಯಕ್ ಒಬ್ಬರೇ ಮಹಿಳಾ ಸಚಿವೆ. 1999ರಲ್ಲಿ ಆರು ಜನ ಮಹಿಳೆಯರು ಆರಿಸಿ ಬಂದಿದ್ದೆವು. ಆಗ ನಾನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾದೆ. ಸುಮಾ ವಸಂತ್ ಮುಜರಾಯಿ ಖಾತೆ, ರಾಣಿ ಸತೀಶ್ ಕನ್ನಡ ಮತ್ತು ಸಂಸ್ಕೃತಿ, ನಫೀಜಾ ಫಸಲ್ ಅವರಿಗೆ ವೈದ್ಯಕೀಯ ಶಿಕ್ಷಣ ಖಾತೆ ನೀಡಲಾಯಿತು.

2004ರ ಚುನಾವಣೆಯಲ್ಲಿ ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಧರಂಸಿಂಗ್ ಮುಖ್ಯಮಂತ್ರಿಯಾದರು. ಆಗ ಭಾಗೀರಥಿ ಮರುಳಸಿದ್ದನಗೌಡ ಒಬ್ಬರಿಗೇ ಸಚಿವ ಸ್ಥಾನ ದೊರಕಿತ್ತು. ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಯಾವುದೇ ಮಹಿಳೆಗೆ ಸಚಿವ ಸ್ಥಾನ ಸಿಗಲಿಲ್ಲ.

2008ರಲ್ಲಿ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಶೋಭಾ ಕರಂದ್ಲಾಜೆ ಅವರಿಗೆ ಸಚಿವ ಸ್ಥಾನ ದೊರಕಿತು. 2013ರಲ್ಲಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ಉಮಾಶ್ರೀ ಅವರು ಸಚಿವರಾದರು. 2018ರಲ್ಲಿ ಎಚ್.ಡಿ.ಕುಮಾರಸ್ವಾಮಿ ಸರ್ಕಾರದಲ್ಲಿ ಜಯಮಾಲಾ ಅವರು ಸಚಿವರಾದರು. 2019ರಲ್ಲಿ ಮತ್ತೊಮ್ಮೆ ಯಡಿಯೂರಪ್ಪ ಮುಖ್ಯಮಂತ್ರಿಯಾದಾಗ ಶಶಿಕಲಾ ಜೊಲ್ಲೆ ಅವರಿಗೆ ಅವಕಾಶ ದೊರೆಯಿತು. 2023ರಲ್ಲಿ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿಯಾದಾಗ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಮಾತ್ರ ಸಚಿವರಾಗುವ ಅವಕಾಶ ದೊರೆಯಿತು.

ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಬೇಕು ಎಂಬ ಮಸೂದೆ ಹಲವು ವರ್ಷಗಳಿಂದ ಇದ್ದಲ್ಲೇ ಇದೆ. ಯುಪಿಎ ನೇತೃತ್ವದ ಸರ್ಕಾರದ ಅವಧಿಯಲ್ಲಿ ಮಂಡಿಸಲಾಗಿತ್ತು. ಆದರೆ, ರಾಜ್ಯಸಭೆಯಲ್ಲಿ ಯುಪಿಎಗೆ ಬಹುಮತ ಇರಲಿಲ್ಲ. ನಂತರ ಬಂದ ಎನ್‌ಡಿಎ ನೇತೃತ್ವದ ಸರ್ಕಾರ ಅದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ.

ವಿಧಾನಸಭೆಗಳ ಚುನಾವಣೆ ಸಂದರ್ಭದಲ್ಲಿ 'ನಾರಿಶಕ್ತಿ' ಎಂದು ಬಿಂಬಿಸಿ ಕ್ಷೇತ್ರ ಮರು ವಿಂಗಡಣೆ ಮಸೂದೆ ಜತೆಗೆ ಸೇರ್ಪಡೆ ಮಾಡಿ ಮಂಡಿಸಿತು. ಅವರಿಗೆ ಬೇಕಿರುವುದು ಕ್ಷೇತ್ರ ಮರು ವಿಂಗಡಣೆಯ ಮಸೂದೆಯೇ ಹೊರತು, ಮಹಿಳಾ ಮೀಸಲಾತಿ ಅಲ್ಲ. ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಗೊಳ್ಳಬಾರದು ಎಂಬ ಕಾರಣಕ್ಕೇ ಎರಡನ್ನೂ ಒಂದರಲ್ಲೇ ಮಿಶ್ರಣ ಮಾಡಲಾಯಿತು. ಈಗ ಪ್ರಧಾನಿ ನರೇಂದ್ರ ಮೋದಿ ಆದಿಯಾಗಿ ಬಿಜೆಪಿಯವರು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಮಹಿಳೆಯರು ನಮ್ಮಷ್ಟೇ ಸಮರ್ಥರು ಅವರಿಗೆ ಸ್ಥಾನಮಾನ ಕೊಡಲೇಬೇಕು ಎಂಬ ನಿಜವಾದ ಕಾಳಜಿ ಇಲ್ಲ. ಲೋಕಸಭೆ, ವಿಧಾನಸಭೆಯಲ್ಲಿ ಮಹಿಳಾ ಮೀಸಲಾತಿ ಜಾರಿಯಾದರೆ ಅದರಲ್ಲೂ ಜಾತಿಗಳ ಒಳ ಮೀಸಲಾತಿ ವರ್ಗೀಕರಣ ಆಗಬೇಕು. ಹಾಗೆ ಮಾಡಿದರೆ ತಮ್ಮ ಕ್ಷೇತ್ರಗಳು ಕೈ ಜಾರಲಿವೆ ಎಂಬ ಭಯವೂ ಅವರಿಗೆ ಇದ್ದಂತಿದೆ.



ಮಹಿಳೆಯರು ಇಂದು ಸೇನೆ, ಬಾಹ್ಯಾಕಾಶ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಸಾಮರ್ಥ್ಯ ಪ್ರದರ್ಶಿಸಿದ್ದಾರೆ. ಆದರೂ, ಮಹಿಳೆಯರ ಸಾಮರ್ಥ್ಯದ ಬಗ್ಗೆ ನಂಬಿಕೆ ಇಲ್ಲವಾಗಿದೆ. ಮಹಿಳೆಯರಿಗೆ ಚುನಾವಣೆಯಲ್ಲಿ ಟಿಕೆಟ್ ನೀಡಲು ಮೀಸಲಾತಿಯೇ ಬೇಕೆಂದಿಲ್ಲ. ರಾಜಕೀಯ ಬದ್ಧತೆ, ಸಮಾನತೆಯ ಬದ್ಧತೆ ಬೇಕಾಗುತ್ತದೆ. ಮಸೂದೆಯ ಪರ ಇರುವ ಪಕ್ಷವಾಗಲಿ, ವಿರುದ್ಧ ಇರುವ ಪಕ್ಷವಾಗಲಿ ಯಾವ ಪಕ್ಷವೂ ಶೇ 33 ಬೇಡ, ಕನಿಷ್ಠ ಶೇ 20ರಷ್ಟು ಕ್ಷೇತ್ರಗಳಲ್ಲೂ ಮಹಿಳೆಯರಿಗೆ ಈವರೆಗೆ ಟಿಕೆಟ್ ನೀಡಿದ ಉದಾಹರಣೆ ಇಲ್ಲ.

ಲೋಕಸಭೆಯ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರು ಸಂವಿಧಾನದ ಪುಸ್ತಿಕೆಯನ್ನು ಕೈಯಲ್ಲಿ ಹಿಡಿದುಕೊಂಡು, ಪ್ರಜಾಪ್ರಭುತ್ವದ ಆಶಯಗಳನ್ನು ಬಲವಾಗಿ ಪ್ರತಿಪಾದಿಸುತ್ತಿದ್ದಾರೆ. ಹಾಗಿದ್ದರೂ, ಕಾಂಗ್ರೆಸ್ ಪಕ್ಷದಲ್ಲಿಯೂ ಮಹಿಳೆಯರಿಗೆ ಸರಿಯಾದ ಪ್ರಾತಿನಿಧ್ಯ ಸಿಗುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇತ್ತೀಚೆಗೆ ಕರ್ನಾಟಕದಿಂದ ನಾಲ್ವರನ್ನು ರಾಜ್ಯಸಭೆ ಕಳುಹಿಸಲಾಯಿತು. ವಿಧಾನಪರಿತ್ತಿನ ಏಳು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಕಾಂಗ್ರೆಸ್ ಮತ್ತು ಬಿಜೆಪಿ ಒಬ್ಬ ಮಹಿಳೆಗೂ ಅವಕಾಶ ಕಲ್ಪಿಸಲಿಲ್ಲ. ಮುಂದಿನ ದಿನಗಳಲ್ಲಿ ವಿಧಾನ ಪರಿಷತ್‌ನ 5 ಸ್ಥಾನಗಳಿಗೆ ನಾಮನಿರ್ದೇಶನ ನಡೆಯಲಿದ್ದು, ಕನಿಷ್ಠ ಆಗಲಾದರೂ ಮಹಿಳೆಯರನ್ನು ಪರಿಗಣಿಸಬೇಕು.

ನಮ್ಮ ಪಕ್ಷದ ಹೊಸ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನೂ ಒಳಗೊಂಡು 13 ಜನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅದರಲ್ಲಿ ಕನಿಷ್ಠ ಇಬ್ಬರಿಗೆ ಅವಕಾಶ ನೀಡಿದ್ದರೆ ಏನು ತಪ್ಪಾಗುತ್ತಿತ್ತು. ಸಮರ್ಥರು ಇರಲಿಲ್ಲವೇ ಎಂದರೆ ಈಗ ಆಯ್ಕೆಯಾಗಿರುವ ಮಹಿಳೆಯರಲ್ಲಿ ಎರಡು–ಮೂರು ಅವಧಿಗೆ ಶಾಸಕಿಯಾದವರು ಮೂವರಿದ್ದಾರೆ.

ಡಿ.ಕೆ.ಶಿವಕುಮಾರ್ ಅವರಿಗೆ ಮಹಿಳೆಯರ ಬಗ್ಗೆ ಹೆಚ್ಚಿನ ಕಾಳಜಿ ಇದೆ. ಎಸ್.ಎಂ.ಕೃಷ್ಣ ಅವಧಿಯಲ್ಲಿ ಸ್ತ್ರೀಶಕ್ತಿ ಯೋಜನೆ ಜಾರಿಗೆ ತಂದೆವು. ಬಾಂಗ್ಲಾ ದೇಶದಲ್ಲಿ ಜಾರಿಯಲ್ಲಿದ್ದ ಯೋಜನೆಯ ಅಧ್ಯಯನಕ್ಕೆ ಅಧಿಕಾರಿಗಳನ್ನು ಕಳುಹಿಸಿದ್ದೆವು. ಆ ಯೋಜನೆಗೆ ಹೆಸರಿಡುವ ಸಂದರ್ಭ ಬಂದಾಗ 'ಸ್ತ್ರೀ ಶಕ್ತಿ' ಎಂದು ಹೆಸರು ಕೊಟ್ಟವರೇ ಡಿ.ಕೆ.ಶಿವಕುಮಾರ್. 'ನಾ ನಾಯಕಿ' ಎಂಬ ಪರಿಕಲ್ಪನೆಯನ್ನು ಪ್ರಿಯಾಂಕಾ ಗಾಂಧಿ ಅವರು ಪಕ್ಷದಲ್ಲಿ ಅನುಷ್ಠಾನಕ್ಕೆ ತಂದಿದ್ದಾರೆ. ಇದನ್ನು ನಾನು ಸೇರಿ ಎಲ್ಲರೂ ಮೆಚ್ಚಿಕೊಂಡಿದ್ದೇವೆ. ಇವೆಲ್ಲದರ ನಡುವೆ ಒಬ್ಬ ಮಹಿಳೆಗೂ ಸಚಿವ ಸ್ಥಾನ ಸಿಗದಿರುವುದು ಬೇಸರ.

ಲೇಖಕಿ: ಮಾಜಿ ಸಚಿವೆ

ನಿರೂಪಣೆ: ವಿಜಯಕುಮಾರ್ ಎಸ್.ಕೆ.

### ಸ್ಥಳೀಯ ಸಂಸ್ಥೆ; ಬದಲಾದ ಪರಿಸ್ಥಿತಿ

ಕರ್ನಾಟಕ ರಾಜಕೀಯ ಇತಿಹಾಸ ಗಮನಿಸಿದರೆ, ದೇವರಾಜ ಅರಸು ಮತ್ತು ಎಸ್.ಎಂ.ಕೃಷ್ಣ ಅವರ ಅವಧಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಸಚಿವ ಸ್ಥಾನಗಳು ಸಿಕ್ಕಿವೆ. ಇತರೆ ಸರ್ಕಾರಗಳ ಅವಧಿಯಲ್ಲಿ ಶೇ 1ರಷ್ಟು ಅವಕಾಶವೂ ದೊರೆತಿಲ್ಲ. ಅವಕಾಶ ಕೊಡುವಲ್ಲಿ ಯಾವುದೇ ಪಕ್ಷ ಮುತುವರ್ಜಿ ವಹಿಸಲಿಲ್ಲ. ಆದರೆ, ಮಹಿಳೆಯರ ಮತಗಳನ್ನು ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳಲು ಓಲೈಕೆ ರಾಜಕಾರಣ ಮಾಡುವುದು ನಿರಂತರವಾಗಿ ನಡೆದುಕೊಂಡು ಬಂದಿದೆ. ಅವರಿಗಾಗಿ ವಿಶೇಷ ಯೋಜನೆಗಳನ್ನು ಘೋಷಣೆ ಮಾಡುವುದು ಎಲ್ಲಾ ಸಂದರ್ಭಗಳಲ್ಲೂ ನಡೆದಿದೆ. ಆದರೆ, ಮಹಿಳೆಯರಲ್ಲೂ ವಿಚಾರವಂತಿಕೆ ಇದೆ. ಅಧಿಕಾರ ನಡೆಸುವ ಸಾಮರ್ಥ್ಯ ಇದೆ. ಪುರುಷರಿಗೆ ಸಮಾನವಾಗಿ ರಾಜಕೀಯವಾಗಿ ಮುಂದೆ ಬರಲು ಎಲ್ಲಾ ರೀತಿಯ ಅರ್ಹತೆ ಇದೆ ಎಂದು ವಿಚಾರ ಮಾಡುವವರು ವಿರಳ. ಇದು ಮಹಿಳೆಯರ ದುರಂತ.

ಮಹಿಳೆಯರಿಗೆ ಪ್ರಾತಿನಿಧ್ಯ ಕೊಡಲೇಬೇಕು ಎಂಬ ಅಭಿಪ್ರಾಯಗಳು ಮೂಡಿಬಂದಿದ್ದು ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿದ್ದಾಗ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಅವಕಾಶ ದೊರೆಯಿತು. ಕರ್ನಾಟಕವೂ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಆರಂಭದಲ್ಲಿ ಮಹಿಳಾ ಪ್ರತಿನಿಧಿಗಳ ಸ್ಥಾನಗಳಲ್ಲಿ ಅವರ ಗಂಡಂದಿರು ಅಧಿಕಾರ ನಡೆಸುತ್ತಾರೆ ಎನ್ನುವ ದೂರುಗಳು ವ್ಯಾಪಕವಾಗಿ ಬಂದವು. ಆದರೆ, ಮಹಿಳೆಯರಲ್ಲಿ ಶಿಕ್ಷಣ, ಅನುಭವ, ರಾಜಕೀಯ ಪ್ರಜ್ಞೆ ಹೆಚ್ಚಾದಂತೆ, ದಶಕಗಳ ಅವಧಿಯಲ್ಲಿ ಈ ಪ್ರವೃತ್ತಿಯು ಕಡಿಮೆಯಾಗಿ, ಇಂದು ವಿರಳ ವಿದ್ಯಮಾನವಾಗಿದೆ. ಮಹಿಳಾ ಪ್ರಾತಿನಿಧ್ಯ ಕಲ್ಪಿಸುವ ವಿಚಾರದಲ್ಲಿ ವ್ಯಕ್ತವಾಗುವ ಹಲವು ಪ್ರಶ್ನೆಗಳಿಗೆ ಈ ಬೆಳವಣಿಗೆಯಲ್ಲಿ ಉತ್ತರವಿದೆ.

Publication Date
13/06/2026

# ಮೂಗಿಗೆ ತುಪ್ಪ ಸವರಿದರೆ ಸಾಕೇ?

• ಮೈತ್ರೇಯಿ ಸಚ್ಚಿದಾನಂದ ಹೆಗಡೆ



> ಕ್ಷೇತ್ರ ಮರುವಿಂಗಡಣೆಯ ಚರ್ಚೆಗೆ ತನ್ನದೇ ಆದ ನ್ಯಾಯ-ಅನ್ಯಾಯಗಳಿವೆ. ಆದರೆ, ಮಹಿಳೆಯರ ಪ್ರಾತಿನಿಧ್ಯ ಎಂಬ ಪ್ರಶ್ನೆಯನ್ನು ಅದರ ಜೊತೆಗೆ ಕಟ್ಟಿ ಹಾಕಬೇಕಾದ ಅನಿವಾರ್ಯ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ, ಮೊದಲು ಜನಗಣತಿ ನಡೆಸಿ, ಅದರ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆ ಮಾಡಿ, ಅದಾದ ಮೇಲೆ ಮಹಿಳಾ ಮೀಸಲಾತಿ ಕೊಡೋಣ ಎಂದು ಹೊರಡುವುದು ಮೂರ್ಖತನ ಮಾತ್ರವಲ್ಲ, ಮಹಿಳಾ ಮತದಾರರ ಮೂಗಿನ ಮೇಲೆ ತುಪ್ಪ ಸವರಿದಂತೆ. ಮಹಿಳೆಯರ ಪ್ರಾತಿನಿಧ್ಯದ ದೃಷ್ಟಿಯಿಂದ ಮೀಸಲಾತಿಯನ್ನು ಮರುವಿಂಗಡಣೆ ಮತ್ತು ಜನಗಣತಿಯ ಸಂಕೋಲೆಯಿಂದ ಮುಕ್ತಗೊಳಿಸಬೇಕಾಗಿದೆ

1947ರ ಜುಲೈ 18; ಸಂವಿಧಾನ ಸಭೆಯ ಚರ್ಚೆಯ ಜಗುಲಿಯಲ್ಲಿ ರೇಣುಕಾ ರಾಯ್ ಎದೆ ತಟ್ಟಿ ಹೇಳಿದ್ದರು; 'ಮಹಿಳಾ ಮೀಸಲಾತಿಯ ಕಲ್ಪನೆಯನ್ನು ನಾವು ಮಹಿಳೆಯರು ಯಾವಾಗಲೂ ವಿರೋಧಿಸುತ್ತಲೇ ಬಂದಿದ್ದೇವೆ. ಹೋರಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಪುರುಷರು ಅಧಿಕಾರಕ್ಕೆ ಬಂದಿರುವಾಗ ಮಹಿಳೆಯರ ಹಕ್ಕುಗಳು ಖಂಡಿತವಾಗಿಯೂ ದೊರಕುತ್ತವೆ ಎಂಬ ನಂಬಿಕೆ ನನ್ನದು. ಮುಂದಿನ ದಿನಗಳಲ್ಲಿ ಸಮರ್ಥ ಮಹಿಳೆಯರು ದೊಡ್ಡ ಜವಾಬ್ದಾರಿಗಳಿಗೆ ಹೆಗಲಾಗಲಿದ್ದಾರೆ ಎಂಬ ಗಟ್ಟಿ ವಿಶ್ವಾಸ ನನ್ನದು. ಮೀಸಲಾತಿ ಕೊಟ್ಟು ಮಹಿಳೆಯರನ್ನು ಮತ್ತು ಅವರ ಸಾಮರ್ಥ್ಯವನ್ನು ಅವಮಾನ-ಗೇಲಿ ಮಾಡಬೇಡಿ' ಎಂದು ಅವರು ಗರ್ಜಿಸಿದ್ದರು. ಏಳೂವರೆ ದಶಕಗಳ ಸ್ವತಂತ್ರ ಭಾರತಕ್ಕೆ ಆ ಗರ್ಜನೆ ಹಗಲುಗನಸಿನಂತೆ ಕಾಣುತ್ತಿದ್ದರೆ, ಅದಕ್ಕೆ ಕಾರಣ ಅನುಭವ; ಅಧಿಕಾರದ ಗಂಟು ತಾನಾಗೇ ಸಮಾನತೆಯ ಹೊಸಿಲು ದಾಟಲಾರದು ಎಂಬ ವಾಸ್ತವದ ಅರಿವು. ಅಂತೂ ಇಂತೂ ಮುನಿಸಿಪಾಲಿಟಿ - ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಶೇ 30ರಷ್ಟು ಮೀಸಲಾತಿ ಕೊಟ್ಟು, (1994, 74ನೇ ಸಾಂವಿಧಾನಿಕ ತಿದ್ದುಪಡಿ) ಪ್ರತಿರೋಧ, ಅಪಹಾಸ್ಯ ಕ್ರಮೇಣ ತಣ್ಣಗಾದ ನಂತರ, ಆ ವ್ಯವಸ್ಥೆಯನ್ನು ಒಪ್ಪಿಕೊಂಡು ಲೋಪದೋಷಗಳನ್ನು ಸರಿಮಾಡುವತ್ತ ಗಮನಹರಿಸಿದ್ದೇವೆ. ಆದರೆ, ದೇಶದ ಅರ್ಧ ಜನಸಂಖ್ಯೆಗೆ ಮೇಲ್ಮನೆ ಮತ್ತು ಕೆಳಮನೆಗಳಲ್ಲಿ ಮಾತ್ರ ಇವತ್ತಿಗೂ ಬೆರಳಣಿಕೆಯಷ್ಟು ಪ್ರಾತಿನಿಧ್ಯ ಸಿಕ್ಕಿದ್ದು, ಅವರ ಧ್ವನಿ ಕ್ಷೀಣವಾಗಿದೆ. 2023ರಲ್ಲಿ 'ನಾರಿ ಶಕ್ತಿ ವಂದನ್' ಕಾಯ್ದೆ ಅಂಗೀಕರಿಸಿ, ಅದನ್ನು ಜಾರಿಗೆ ತರಲು ಪ್ರಸ್ತಾವಿಸಿದ ಸಾಂವಿಧಾನಿಕ ತಿದ್ದುಪಡಿಗಳನ್ನು 2026ರಲ್ಲಿ ತಿರಸ್ಕರಿಸಿ, ಮುಂದೇನು ಎಂಬ ತಿರುವಿನಲ್ಲಿ ಬಂದು ನಿಂತಿದ್ದೇವೆ.

ಎದುರುತ್ತರವೇ ಇಲ್ಲ ಎಂಬ ರೀತಿಯಲ್ಲಿ ಅಂಗೀಕಾರಗೊಂಡಿತ್ತು 2023ರ ನಾರಿ ಶಕ್ತಿ ಕಾಯ್ದೆ. ರಾಜಕೀಯ ಪಕ್ಷಗಳಿಗೆ ಕ್ಷೇತ್ರ ಮರುವಿಂಗಡಣೆ ಮತ್ತು ಜನಗಣತಿ ನಿಬಂಧನೆಗಳ ಸಮಸ್ಯೆಗಳಿಗಿಂತ ಕೊನೆಗೂ ಮಹಿಳಾ ಮೀಸಲಾತಿ ಸಂಸತ್ತನ್ನು ತಲುಪಿತು ಎಂಬ ಸಂತಸವೇ ದೊಡ್ಡದಾಗಿತ್ತು. 2026ರಲ್ಲಿ ಹೊಸ ಜೋಡಿ ಕರಡು ಮಸೂದೆಗಳು ಸಿದ್ಧವಾದವು. ಮರುವಿಂಗಡಣೆ ಮತ್ತು ಜನಗಣತಿಯನ್ನು ಈಗಲೇ ನಡೆಸಿ, 2029ರ ಚುನಾವಣೆಯಲ್ಲಿ ಹೊಸ ಕ್ಷೇತ್ರಗಳು ರೂಪುಗೊಳ್ಳಲಿವೆ ಎಂಬ ಪರಿಸ್ಥಿತಿ ಬಂದಾಗ, ಕರಡುಗಳ ಬಗ್ಗೆ ಗಹನ ಚರ್ಚೆ ನಡೆಯಿತು. ಕ್ಷೇತ್ರ ಮರುವಿಂಗಡಣೆ ನಮ್ಮ ಮೂಲ ಸಂವಿಧಾನದಲ್ಲೇ ಅಡಕವಾಗಿರುವ ವಿಚಾರ; ಪ್ರಜಾಪ್ರಭುತ್ವದ ಅಡಿಪಾಯಗಳಲ್ಲೊಂದು. ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಹೀಗೆ ಹಲವು ದೇಶಗಳಲ್ಲಿ ಈ ವ್ಯವಸ್ಥೆ ಇದೆ. ಆ ದೇಶಗಲ್ಲಿ ಮೇಲ್ಮನೆಯಲ್ಲಿ ರಾಜ್ಯಗಳಿಗೆ ಸಮನಾದ ಪ್ರಾತಿನಿಧ್ಯವಿರುವುದರಿಂದ ಒಕ್ಕೂಟ ವ್ಯವಸ್ಥೆಯ ಹಕ್ಕುಗಳು ಸಮತೋಲನ ಕಳೆದುಕೊಳ್ಳುವುದಿಲ್ಲ. ಆದರೆ, ನಮ್ಮ ದೇಶದಲ್ಲಿ ಮೇಲ್ಮನೆ ಮತ್ತು ಕೆಳಮನೆಗಳೆರಡರಲ್ಲೂ ಸದಸ್ಯ ಬಲ ಹೆಚ್ಚು ಕಡಿಮೆ ಇರುವುದರಿಂದ, ಕೇವಲ ಜನಸಂಖ್ಯೆಯ ಆಧಾರದ ಮೇಲೆ ಕ್ಷೇತ್ರ ಮರುವಿಂಗಡಣೆ ಮಾಡುವಾಗ, ಒಕ್ಕೂಟ ವ್ಯವಸ್ಥೆಯ ಆಶಯಗಳಿಗೆ ಧಕ್ಕೆಯಾಗುವ ಸಾಧ್ಯತೆಯಿದೆ. ವರ್ಷಗಳ ಕಾಲ ದೇಶದ ನೀತಿಯನ್ನು ಪಾಲಿಸುವ ನಿಟ್ಟಿನಲ್ಲಿ ಜನಸಂಖ್ಯೆ ನಿಯಂತ್ರಣ ಮಾಡಿಕೊಂಡ ರಾಜ್ಯಗಳು ಈಗ ಪ್ರಾತಿನಿಧ್ಯ ಕಳೆದುಕೊಳ್ಳುವ ಪರಿಸ್ಥಿತಿ ಬಂದಾಗ ಕಳವಳಗೊಳ್ಳುವುದು ಸ್ವಾಭಾವಿಕ. ಇದೇ ವೇಳೆ, ಸಂಪತ್ತಿನ ಸಮಾನ ಹಂಚಿಕೆಯಾಗುವ ದಿಸೆಯಲ್ಲಿ ಮರುವಿಂಗಡಣೆ ಮೂಲಕ ಸಾಧ್ಯವಾಗುವ ಅಭಿವೃದ್ಧಿಯ ಸಮತೋಲನ ನಾಡಿನ ಬೆಳವಣಿಗೆಗೆ ಈಗ ಅಗತ್ಯ ಎಂಬ ವಾದವೂ ಹುರುಳಿಲ್ಲದ್ದಲ್ಲ.

ಭಾರತದಂತಹ ಅಗಾಧವಾದ ದೇಶದ ಜನಗಣತಿ ಮಾಡಿ ಮುಗಿಸುವುದು ಸುಲಭದ ಮಾತು ಅಲ್ಲವೇ ಅಲ್ಲ. ಕ್ಷೇತ್ರ ಮರುವಿಂಗಡಣೆ, ಒಂದು ದೇಶ ಸಮಾಜವಾದಿ ಗಣತಂತ್ರವೋ ಅಥವಾ ಬಂಡವಾಳಶಾಹಿ ಪ್ರಜಾಪ್ರಭುತ್ವವೋ ಎಂಬ ಸಂಕೀರ್ಣ ಪ್ರಶ್ನೆ ಮತ್ತು ಉತ್ತರಗಳ ನಡುವೆ ಅಡಗಿರುವ ವಿಷಯ. ಹಾಗೆಯೇ ಜನಗಣತಿಯೂ ಸಮಯ ತೆಗೆದುಕೊಳ್ಳುವ ಆಡಳಿತಾತ್ಮಕ ಪ್ರಕ್ರಿಯೆ. ಸದ್ಯಕ್ಕೆ ರಾಜಕೀಯವಾಗಿ, ಆಡಳಿತಾತ್ಮಕವಾಗಿ ಮತ್ತು ಸಂಪನ್ಮೂಲಗಳ ನೆಲೆಯಲ್ಲಿ ಭಾರವಾಗಿರುವ ಈ ಪ್ರಸ್ತಾವನೆಗಳಿಂದ ಬಳಲುತ್ತಿರುವುದು ಮಾತ್ರ ಮಹಿಳಾ ಮೀಸಲಾತಿ ಎಂಬ ತುರ್ತಾಗಿರುವ ಅಗತ್ಯ.

ಕ್ಷೇತ್ರ ಮರುವಿಂಗಡಣೆ, ಜನಗಣತಿ ಮತ್ತು ಮಹಿಳಾ ಮೀಸಲಾತಿಯ ಮೂರು ಸಾಂವಿಧಾನಿಕ ತಿದ್ದುಪಡಿಯ ಕರಡುಗಳು ಇತ್ತೀಚೆಗೆ ಚರ್ಚೆಗೆ ಬಂದರೂ, ಅಂಗೀಕಾರವಾಗಲಿಲ್ಲ. ಕೇಂದ್ರ ಸರ್ಕಾರವು ಅವುಗಳನ್ನು ಹಿಂಪಡೆದದ್ದೂ ಆಯಿತು. 2023ರಲ್ಲಿ ಇವೇ ವಿಚಾರಗಳನ್ನು ಒಳಗೊಂಡ ಕರಡು ಅಂಗೀಕಾರವಾಗಿ ಕಾಯ್ದೆಯಾದರೂ, ಕ್ಷೇತ್ರ ಮರುವಿಂಗಡಣೆ ವಿರುದ್ಧ ಜನರ ಆಕ್ಷೇಪ ತೀವ್ರವಾಗಿದ್ದರಿಂದ ರಾಜಕೀಯ ಪಕ್ಷಗಳು ತಮ್ಮ ನಿಲುವುಗಳನ್ನು ಬದಲಾಯಿಸಿವೆ. ಕ್ಷೇತ್ರ ಮರುವಿಂಗಡಣೆಯ ಚರ್ಚೆಗೆ ತನ್ನದೇ ಆದ ನ್ಯಾಯ-ಅನ್ಯಾಯಗಳಿವೆ. ಆದರೆ, ಮಹಿಳೆಯರ ಪ್ರಾತಿನಿಧ್ಯ ಎಂಬ ಪ್ರಶ್ನೆಯನ್ನು ಅದರ ಜೊತೆಗೆ ಕಟ್ಟಿ ಹಾಕಬೇಕಾದ ಅನಿವಾರ್ಯ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ, ಮೊದಲು ಜನಗಣತಿ ನಡೆಸಿ, ಅದರ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆ ಮಾಡಿ, ಅದಾದ ಮೇಲೆ ಮಹಿಳಾ ಮೀಸಲಾತಿ ಕೊಡೋಣ ಎಂದು ಹೊರಡುವುದು ಮೂರ್ಖತನ ಮಾತ್ರವಲ್ಲ, ಮಹಿಳಾ ಮತದಾರರ ಮೂಗಿನ ಮೇಲೆ ತುಪ್ಪ ಸವರಿದಂತೆ, ಕನ್ನಡಿಯಲ್ಲಿರುವ ಗಂಟಿನ ಆಸೆ ತೋರಿಸಿದಂತೆ.

ಮಹಿಳೆಯರ ಪ್ರಾತಿನಿಧ್ಯದ ದೃಷ್ಟಿಯಿಂದ ಮೀಸಲಾತಿಯನ್ನು ಮರುವಿಂಗಡಣೆ ಮತ್ತು ಜನಗಣತಿಯ ಸಂಕೋಲೆಯಿಂದ ಮುಕ್ತಗೊಳಿಸಬೇಕಾಗಿದೆ. ಹಾಗಾದರೆ ಮಾತ್ರ ಶೀಘ್ರದಲ್ಲೇ ರಾಜಕಾರಣದಲ್ಲಿ ಮಹಿಳಾ ಮೀಸಲಾತಿ ಸಾಕಾರವಾಗುವುದು ಸಾಧ್ಯ.

2023ರಲ್ಲಿ ಒಕ್ಕೊರಲಿನಿಂದ ಸಂಸತ್ತು ಮೀಸಲಾತಿ ಕಾಯ್ದೆ ಅಂಗೀಕರಿಸಿದ್ದರೂ ಇನ್ನೂ ನಮ್ಮಲ್ಲಿ ಮೀಸಲಾತಿಯ ಮೂಲಕವೇ ಪ್ರಗತಿ ಸಾಧ್ಯವೇ ಎಂದು ಪ್ರಶ್ನೆ ಕೇಳುವವರಿದ್ದಾರೆ. ಸಮಾಜ ಪ್ರಗತಿಯಾಗುತ್ತಿರುವ ನೆಲೆಯಲ್ಲಿ ನಿಧಾನವಾಗಿಯಾದರೂ ಈ ಬದಲಾವಣೆ ಸಹಜವಾಗಿಯೇ ನಮ್ಮಲ್ಲಿ ಬಾರದಿರುವುದೇ ಎಂಬುದು ಅವರ ಪ್ರಶ್ನೆ. ಉದಾಹರಣೆಗೆ, ಸತತವಾದ ಶಿಕ್ಷಣ, ಸ್ವಾತಂತ್ರ್ಯ ಹೋರಾಟ, ಹೊರದೇಶಗಳಲ್ಲಿನ ಚಳವಳಿಗಳಿಂದ ಪ್ರಭಾವಿತರಾಗಿ ಯಾವುದೇ ಕಾನೂನಿನ ಬಲವಿಲ್ಲದಿದ್ದರೂ ಶಿಕ್ಷಣ, ವೈದ್ಯಕೀಯ ಮತ್ತು ಇತರ ಕ್ಷೇತ್ರಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು, ಮಹತ್ತರ ಕೊಡುಗೆ ನೀಡುವುದನ್ನು ಕಂಡಿದ್ದೇವೆ. ಹಾಗೆಯೇ, ರಾಜಕಾರಣದಲ್ಲಿ ಮಹಿಳೆಯರು ಹಿಂದಿಗಿಂತಲೂ ಈಗ ಹೆಚ್ಚಾಗಿದ್ದಾರೆ. ಹಾಗಾಗಿ ಸ್ವಾಭಾವಿಕವಾಗಿಯೇ ಹೆಚ್ಚಿನ ಮುಖಗಳು ನಮಗೆ ಚುನಾವಣೆಗಳಲ್ಲೂ ಶಾಸನಸಭೆಗಳಲ್ಲೂ ಕಾಣಸಿಗುತ್ತವೆ ಎಂಬ ವಾದ ಅವರದು.

ಈ ಹೋಲಿಕೆಯಲ್ಲಿ ಮುಖ್ಯವಾದ ಭಿನ್ನತೆಯಿದೆ. ಮೊದಲನೆಯ ಉದಾಹರಣೆಯಲ್ಲಿ ಸ್ಪರ್ಧೆ ಜೀವನೋಪಾಯಕ್ಕಾಗಿ ನಡೆದರೆ, ರಾಜಕೀಯದಲ್ಲಿ ಸ್ಪರ್ಧೆ ಅಧಿಕಾರಕ್ಕಾಗಿ ನಡೆಯುತ್ತದೆ. ಕುರ್ಚಿ ಬಿಟ್ಟುಕೊಡುವ, ಹಂಚಿಕೊಳ್ಳುವ ಪ್ರಶ್ನೆಯೇ ಇಲ್ಲ ಅಲ್ಲಿ ಕುಳಿತವರಿಗೆ. ಹಾಗಾಗಿ ತಾರತಮ್ಯ ಮಾಡದೇ ಇರಲು ಬೇಕಾಗುವ ಕಾನೂನುಗಳು ಎಷ್ಟು ಅಗತ್ಯವೋ, ಅಷ್ಟೇ ಅಗತ್ಯ ಗಣತಂತ್ರದಲ್ಲಿ ಮಹಿಳೆಯರನ್ನು ಮೇಲೆತ್ತಲೂ ಬೇಕಿವೆ. 2008ರ ಮೋನಾ ಲೇನ ಕ್ರೂಕ್ (ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್) ಅಧ್ಯಯನದ ಪ್ರಕಾರ ನೂರಕ್ಕೂ ಹೆಚ್ಚಿನ ದೇಶಗಳು ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಹೆಚ್ಚಿಸಲು ಒಂದಲ್ಲ ಒಂದು ರೀತಿಯ ಸಕಾರಾತ್ಮಕ ನೀತಿ ಅಥವಾ ಕಾನೂನನ್ನು ಹೊಂದಿವೆ. ಹಾಗಾಗಿ ಮೀಸಲಾತಿ ಬೇಕೆ ಎಂಬ ಪ್ರಶ್ನೆ ಇವತ್ತು ಅಪ್ರಸ್ತುತ.

ಶಿಕ್ಷಣ ಹೆಚ್ಚಿದಂತೆ, ಲೋಕ ಕಂಡಂತೆ, ಜನರ ಬೇಡಿಕೆ, ಧ್ವನಿ ಹೆಚ್ಚಾದಂತೆ ಮಹಿಳೆಯರನ್ನು ಬೆಂಬಲಿಸುವುದು ಪಕ್ಷಗಳಿಗೆ ಇವತ್ತಿನ ರಾಜಕೀಯ ಅಗತ್ಯವಾಗಿದೆ. ಹಲವು ಪಕ್ಷಗಳು ಆ ಕೆಲಸ ಮಾಡುವಂತೆ ನಟಿಸುತ್ತಿವೆ. ಕೆಲವು ನಿಜವಾಗಿಯೂ ಮಾಡಬಹುದು. ಆದರೆ ಸಮಾನತೆಯಲ್ಲಿ ಮತ್ತು ನ್ಯಾಯದಲ್ಲಿ ನಂಬಿಕೆ ಇಟ್ಟವರು ಈ ಮುಖವಾಡಗಳನ್ನು ಪ್ರಶ್ನಿಸಬೇಕು.

ಸತ್ವವುಳ್ಳ ರಾಜಕೀಯ ಕಟ್ಟಲು ಮೊದಲು ಬೇಕಿರುವುದು ಜೊಳ್ಳಿರದ ಪ್ರಶ್ನೆಗಳು ಮತ್ತು ಪ್ರಾಮಾಣಿಕತೆ ಇರುವ ಜ್ಞಾನ. ಮಹಿಳಾ ಮೀಸಲಾತಿಯ ವಿಚಾರದಲ್ಲೂ ಈ ಚಿಂತನೆ ನಮಗೆ ಮುಂದಿನ ದಾರಿ ತೋರಿಸಲಿ.

ಲೇಖಕಿ: ಸುಪ್ರೀಂ ಕೋರ್ಟ್ ವಕೀಲರು

### ಎರಡು ಮಾದರಿಗಳು

ಬೇರೆ ಯಾವುದೇ ರಾಜಕೀಯ ಯುದ್ಧ ಮಾಡದೆ ಮೀಸಲಾತಿಯನ್ನು ಮಹಿಳೆಯರಿಗೆ ಹೇಗೆ ದಕ್ಕಿಸಬಹುದು ಎಂಬುದಕ್ಕೆ ಮುಖ್ಯವಾಗಿ ಎರಡು ಸಾಧ್ಯತೆಗಳಿವೆ. ಮೊದಲನೆಯದು, ಐರೋಪ್ಯ ಮಾದರಿಗಳ ಪಾಠಗಳು. ಫ್ರಾನ್ಸ್, ಪೋರ್ಚುಗಲ್, ಸ್ಪೇನ್, ಬೆಲ್ಜಿಯಂ, ಸೆರ್ಬಿಯ, ಸ್ಲೋವಿಯಾ ಮುಂತಾದ ಐರೋಪ್ಯ ರಾಷ್ಟ್ರಗಳಲ್ಲಿ ರಾಜಕೀಯ ಪಕ್ಷಗಳು ಕನಿಷ್ಠ ಇಂತಿಷ್ಟು ಮಹಿಳಾ ಉಮೇದುವಾರರನ್ನು ನಿಲ್ಲಿಸಬೇಕು ಎಂಬ ಕಾನೂನಿದೆ. ಸ್ವೀಡನ್, ಜರ್ಮನಿ ಮುಂತಾದ ದೇಶಗಳಲ್ಲಿ ಕಾನೂನಿಲ್ಲದಿದ್ದರೂ ಪಕ್ಷಗಳು ಸ್ವತಃ ಮಹಿಳಾ ಅಭ್ಯರ್ಥಿಗಳಿಗೆ ಕಡ್ಡಾಯವಾಗಿ ಟಿಕೆಟ್ ಕೊಡುತ್ತವೆ. ನಮ್ಮ ದೇಶದಲ್ಲಿ ಪಕ್ಷಗಳು ತಮ್ಮದೇ ಉಮೇದಿಯಿಂದ ಮಹಿಳಾ ಅಭ್ಯರ್ಥಿಗಳಿಗೆ ಕಡ್ಡಾಯವಾಗಿ ಅಥವಾ ಆಂತರಿಕ ನಿಯಮಗಳ ಮೂಲಕ ಟಿಕೆಟ್ ಖಾತ್ರಿ ಮಾಡುವುದು ನಡೆಯದ ಕೆಲಸ. ಹಾಗಾಗುವುದಿದ್ದರೆ ಸೋನಿಯಾ ಗಾಂಧಿ, ಮಮತಾ ಬ್ಯಾನರ್ಜಿ, ಜಯಲಲಿತಾ, ಉಮಾಭಾರತಿ ಪಕ್ಷಗಳಲ್ಲಿ ನಿರ್ಣಾಯಕವಾಗಿದ್ದಾಗ ಬದಲಾವಣೆಗಳು ಬಂದಿರುತ್ತಿದ್ದವು. ಹಾಗಾಗಿ ಪ್ರತಿಯೊಂದು ಪಕ್ಷದಿಂದಲೂ ಕನಿಷ್ಠ ಪ್ರಮಾಣದಲ್ಲಿಯಾದರೂ ಮಹಿಳಾ ಅಭ್ಯರ್ಥಿಗಳನ್ನು ನಿಲ್ಲಿಸುವ ಸಂಬಂಧ ಕಾನೂನು ತರಬೇಕು. ಇಂತಹ ಕಾನೂನಿಗೆ ಸಂವಿಧಾನದ ತಿದ್ದುಪಡಿಯ ಅವಶ್ಯಕತೆಯೂ ಇಲ್ಲ. ಜನಪ್ರತಿನಿಧಿಗಳ ಕಾಯ್ದೆಗೆ ತಿದ್ದುಪಡಿ ಅಥವಾ ಬೇರೊಂದು ಹೊಸ ಕಾಯ್ದೆಯ ಮೂಲಕ ಈ ಬದಲಾವಣೆಯನ್ನು ತರಬಹುದು.

ಎರಡನೆಯದು, ಸಾಂವಿಧಾನಿಕ ಮಾದರಿಗಳ ಪಾಠಗಳು. ರುವಾಂಡಾ, ಬಾಂಗ್ಲಾದೇಶ, ಉಗಾಂಡ, ತಾಂಜಾನಿಯಾ ಮತ್ತು ಪಾಕಿಸ್ತಾನಗಳಲ್ಲಿ ಸಂವಿಧಾನದಲ್ಲೇ ಮಹಿಳೆಯರಿಗೆ ಸೀಟುಗಳನ್ನು ಮೀಸಲಿಡಲಾಗಿದೆ. 2023ರಲ್ಲಿ ಪರಿಚಯಿಸಲಾದ ತಿದ್ದುಪಡಿ ಕಾಯ್ದೆಗೆ ಬದಲಾವಣೆ ತಂದು ಈಗಿರುವ ಕ್ಷೇತ್ರಗಳಲ್ಲೇ ಒಂದು ಭಾಗ ಮಹಿಳೆಯರಿಗೆ ಮೀಸಲಿಡಬಹುದು.

Presented by

## ಮೂವರು ಸಾಧಕರಿಗೆ ಜುಲೈ 11ರಂದು ಪ್ರಶಸ್ತಿ ಪ್ರದಾನ

# ಬ್ಯಾರಿ ಸಾಹಿತ್ಯ ಅಕಾಡೆಮಿ ಗೌರವ

ಪ್ರಜಾವಾಣಿ ವಾರ್ತೆ



ಅತ್ತೂರು ಚೆಯ್ಯಬ್ಬ



ಅಬ್ದುಲ್ ಸಮದ್



ಆಯಿಷಾ

ಮಂಗಳೂರು: ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ನೀಡುವ 2025ನೇ ಸಾಲಿನ ಗೌರವ ಪ್ರಶಸ್ತಿಗೆ ಮೂವರು ಸಾಧಕರನ್ನು ಆಯ್ಕೆ ಮಾಡಲಾಗಿದೆ.

ಬೆಂಗಳೂರಿನ ದಿ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಶನ್ ಸ್ಥಾಪಕ ಸದಸ್ಯ ಅತ್ತೂರು ಚೆಯ್ಯಬ್ಬ (ಬ್ಯಾರಿ ಭಾಷೆ), ಬ್ಯಾರಿ ಕವಿ ಅಬ್ದುಲ್ ಸಮದ್ ಕಾಟಿಪಳ್ಳ (ಬ್ಯಾರಿ ಕಲೆ, ಸಂಸ್ಕೃತಿ) ಹಾಗೂ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಮಾಜಿ ಸದಸ್ಯೆ ಆಯಿಷಾ ಯು.ಕೆ. (ಬ್ಯಾರಿ ಸಾಹಿತ್ಯ) ಬ್ಯಾರಿ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹50 ಸಾವಿರ ನಗದು, ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಜುಲೈ 11 ರಂದು ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

'ಬ್ಯಾರಿ ವಾರ್ತೆ' ಮಾಸಿಕದ ಸಂಪಾದಕ ಬಶೀರ್ ಬೈಕಂಪಾಡಿ, ಪತ್ರಕರ್ತ ಅಬ್ಬಾಸ್ ಕಿರುಗುಂದ, ಲೇಖಕಿ ಝುಲೇಖ ಮುಮ್ತಾಜ್ ಮತ್ತು ಕವಯಿತ್ರಿ ನಝ್ಮತುನ್ನಿಸಾ ಲೈಝ್ ಗೌರವ ಪ್ರಶಸ್ತಿಯ ಆಯ್ಕೆ ಸಮಿತಿಯಲ್ಲಿದ್ದರು. ಬ್ಯಾರಿ ಸಾಹಿತ್ಯ ಅಕಾಡೆಮಿಯ ಸ್ಥಾಯಿ ಸಮಿತಿ ಸಭೆ ಹಾಗೂ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗಿದೆ ಎಂದು ಅಕಾಡೆಮಿಯ ಅಧ್ಯಕ್ಷ ಉಮರ್ ಯು.ಎಚ್. ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ❖ ಚಿಲ್ಲರೆ ಹಣದುಬ್ಬರ ಏರಿಕೆ

- ಆಹಾರ ಪದಾರ್ಥಗಳು ಮತ್ತು ಇಂಧನ ಬೆಲೆ ಏರಿಕೆಯಿಂದ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ದರವು ಮೇ ತಿಂಗಳಿನಲ್ಲಿ ಶೇ 3.93ಕ್ಕೆ ಏರಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಅಂಕಿ-ಅಂಶ ತಿಳಿಸಿದೆ.
- ಏಪ್ರಿಲ್ ತಿಂಗಳಿನಲ್ಲಿ ಹಣದುಬ್ಬರವು ಶೇ 3.48ರಷ್ಟು ದಾಖಲಾಗಿತ್ತು. ಏಪ್ರಿಲ್‌ನಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆ ಶೇ4.2ರಷ್ಟಿತ್ತು. ಇದು ಮೇ ತಿಂಗಳಿನಲ್ಲಿ ಶೇ 4.78ರಷ್ಟಕ್ಕೆ ಏರಿಕೆಯಾಗಿದೆ.
- ಚಿನ್ನಾಭರಣ, ಟೊಮೆಟೊ, ಶುಂಠಿ, ಒಣದ್ರಾಕ್ಷಿ ಬೆಲೆಯಲ್ಲಿ ಹೆಚ್ಚು ಏರಿಕೆಯಾಗಿದೆ. ಅಲೂಗೆಡ್ಡೆ, ಬಟಾಣಿ ಬೆಲೆಯಲ್ಲಿ ಇಳಿಕೆ ಆಗಿದೆ.
- ಮೇ ತಿಂಗಳಿನಲ್ಲೂ ಚಿಲ್ಲರೆ ಹಣದುಬ್ಬರ ದರವು ಶೇ 4ರೊಳಗೆ ಇದೆ. ಕಳೆದ ವಾರ ಆರ್‌ಬಿಐ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ದರದ ಅಂದಾಜನ್ನು ಶೇ 4.6ರಿಂದ ಶೇ 5.1ಕ್ಕೆ ಹೆಚ್ಚಿಸಿದೆ.
- ಮೇ ತಿಂಗಳಿನಿಂದ ರಿಟೇಲ್ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರವು ಕ್ರಮವಾಗಿ ಶೇ 7.4 ಮತ್ತು ಶೇ 8.4ರಷ್ಟು ಹೆಚ್ಚಳವಾಗಿದೆ.

## ❖ ಹೊರ್ಮುಜ್ ನಿಯಂತ್ರಣ ಬಿಟ್ಟುಕೊಡುವುದಿಲ್ಲ: ಇರಾನ್

- ಹೊರ್ಮುಜ್ ಜಲಸಂಧಿಯ ಮೇಲಿನ ನಿಯಂತ್ರಣವನ್ನುಬಿಟ್ಟುಕೊಡುವುದಿಲ್ಲ. ಅಮೆರಿಕದೊಂದಿಗಿನ ಶಾಂತಿ ಒಪ್ಪಂದದ ಕರಡು ಪ್ರತಿಯಲ್ಲೂ ಈ ಬಗ್ಗೆ ಪ್ರಸ್ತಾಪಿಸಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿದೆ.
- 'ಅಮೆರಿಕ ಮತ್ತು ಇಸ್ರೇಲ್‌ನ ಸೇನಾ ದಾಳಿಗಿಂತ ಮೊದಲು ಇದ್ದ ಪರಿಸ್ಥಿತಿಯ ಪುನರ್‌ಸ್ಥಾಪನೆ ಅಥವಾ ಜಲಸಂಧಿಯ ನಿರ್ವಹಣೆಯನ್ನು ಬಿಟ್ಟುಕೊಡುವ ಅಂಶಗಳನ್ನು ಕರಡು ಪ್ರತಿಯಲ್ಲಿ ಇರಾನ್ ಸೇರಿಸಿಲ್ಲ' ಎಂದು ಪ್ರಸ್ತುತ ಅಂತಿಮಗೊಳ್ಳುತ್ತಿರುವ ಕರಡನ್ನು ಉಲ್ಲೇಖಿಸಿ ಇಸ್ಲಾಮಿಕ್ ರಿಪಬ್ಲಿಕ್ ನ್ಯೂಸ್ ಏಜೆನ್ಸಿ (ಐಆರ್‌ಎನ್‌ಎ) ವರದಿ ಮಾಡಿದೆ.
- 'ಇಸ್ಲಾಮಿಕ್ ಗಣರಾಜ್ಯದ ಮೂಲಭೂತ ತತ್ವಗಳ ಚೌಕಟ್ಟಿನೊಳಗೆ ಮಾತ್ರ ಪರಮಾಣು ಕಾರ್ಯಕ್ರಮದ ಬಗ್ಗೆ ಮಾತುಕತೆ ನಡೆಸುತ್ತದೆ. ಸಮೃದ್ಧೀಕರಿಸಿದ ಯುರೇನಿಯಂ ಹಕ್ಕನ್ನು ತನ್ನಲ್ಲೇ ಉಳಿಸಿಕೊಳ್ಳುವ ಅಂಶವನ್ನು ಅಂತಿಮ ಒಪ್ಪಂದದಲ್ಲಿ ಸೇರಿಸಲು ಇರಾನ್ ಆದ್ಯತೆ ನೀಡುತ್ತದೆ' ಎಂದು ಹೇಳಿದೆ.
- ಫೆಬ್ರುವರಿ 28ರಂದು ಅಮೆರಿಕ ಮತ್ತು ಇಸ್ರೇಲ್‌ನೊಂದಿಗೆ ಯುದ್ಧ ಆರಂಭವಾದಾಗಿನಿಂದ, ಹೊರ್ಮುಜ್ ಜಲಸಂಧಿಯ ಮೇಲೆ ಇರಾನ್ ನಿಯಂತ್ರಣ ಸಾಧಿಸಿದೆ. ಈ ಮಾರ್ಗದ ಮೂಲಕ ಹಡಗುಗಳು ಹಾದು ಹೋಗಬೇಕಾದರೆ ಸೇನೆಯ ಒಪ್ಪಿಗೆ ಪಡೆಯಬೇಕು ಎಂದು ಇರಾನ್ ಹೇಳಿತ್ತು.
- 'ಶಾಂತಿ ಒಪ್ಪಂದದ ಕರಡನ್ನು ಅಂತಿಮಗೊಳಿಸಲಾಗುತ್ತಿದೆ' ಎಂದು ಇರಾನ್‌ನ ಸಮಾಲೋಚನಾ ತಂಡದವರ ಮೂಲವನ್ನು ಉಲ್ಲೇಖಿಸಿ 'ಮೆಹರ್' ಸುದ್ದಿ ಸಂಸ್ಥೆ ವರದಿ ಮಾಡಿದೆ.

------------------------------------------ಶುಭವಂದನೆಗಳು------------------------------------------

Dr. Rajkumar IAS/KAS Academy